ಸಂಪುಟ: 19, ಸಂಚಿಕೆ: 26, ಪುಟಗಳು: 8, ಗುರುವಾರ, 04 ನವೆಂಬರ್ 2021 RNI NO. KARKAN/2002/08054
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು

# ಸಂಜೆ ಮುಗಿಲು

₹3

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ। ತುಮಕೂರು। ಹಾಸನ। ಮಡಿಕೇರಿ




**ಶ್ರೀ ನರೇಂದ್ರ ಮೋದಿ**
ಸನ್ಮಾನ್ಯ ಪ್ರಧಾನಮಂತ್ರಿಗಳು

**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು

# ಭರವಸೆಯ ಮುನ್ನುಡಿ. ಯಶಸ್ವೀ 100 ದಿನಗಳು.

## ನವ ಭಾರತಕ್ಕಾಗಿ ನವ ಕರ್ನಾಟಕ

**ಸನ್ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ**
**ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಅವರ ದೂರದರ್ಶಿತ್ವದಲ್ಲಿ ರಾಜ್ಯದ ಅಭಿವೃದ್ಧಿಗೆ ಹೊಸಬೆಳಕು**

### ಜನಸೇವಕ ಯೋಜನೆ

- ನಾಗರೀಕರಿಗೆ ಸಮಯದ ಉಳಿತಾಯಕ್ಕೆ ಅನುಕೂಲವಾಗುವಂತೆ ಮತ್ತು ವಿಶೇಷವಾಗಿ ಹಿರಿಯ ನಾಗರೀಕರಿಗೆ ಮತ್ತು ದಿವ್ಯಾಂಗರಿಗೆ ನೆರವಾಗಲು ಐವತ್ತೆಂಟು ಅಧಿಕ ನಾಗರೀಕ ಸೇವೆಗಳನ್ನು ಮನೆಬಾಗಿಲಿಗೆ ಒದಗಿಸಲು "ಜನಸೇವಕ" ಯೋಜನೆ ಜಾರಿ.
- ಜನಸೇವಕ ಆಪ್, ವೆಬ್‌ಸೈಟ್ www.janasevaka.karnataka.gov.in ಅಥವಾ ದೂರವಾಣಿ 080-4455 4455 ಗಳ ಮೂಲಕ ಅಗತ್ಯವಾದ ಸೇವೆಗಳಿಗೆ ಅರ್ಜಿಗಳನ್ನು ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಸಲ್ಲಿಸಬಹುದು. ನೇಮಕಗೊಂಡ ಪ್ರತಿನಿಧಿಗಳು ಮನೆಬಾಗಿಲಿಗೆ ಬಂದು ಅಗತ್ಯ ದಾಖಲೆಗಳನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುತ್ತಾರೆ. ಬಳಿಕ ಸೌಲಭ್ಯವನ್ನು ಮನೆಬಾಗಿಲಿಗೆ ತಲುಪಿಸುತ್ತಾರೆ.

**ರಾಜ್ಯದಲ್ಲಿ 3.85 ಲಕ್ಷ ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲು ಸರ್ಕಾರ ನಿರ್ಧರಿಸಿದೆ.**

### ಗ್ರಾಮ ಒನ್ ಯೋಜನೆ

- ಜನವರಿ 26, 2022ರ ವೇಳೆಗೆ 8791 ಗ್ರಾಮ ಒನ್ ಕೇಂದ್ರಗಳಲ್ಲಿ ಸುಮಾರು 100 ನಾಗರೀಕ ಸೇವೆಗಳನ್ನು ಒದಗಿಸಲು ಸೂಕ್ತ ಕ್ರಮ

### ಜನಸ್ಪಂದನ - ಸಮಗ್ರ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವ್ಯವಸ್ಥೆ

- ಸರ್ಕಾರದ 33 ಇಲಾಖೆಗಳ ವಿವಿಧ ಯೋಜನೆ / ಸೇವೆಗಳಿಗೆ ಸಂಬಂಧಿಸಿದಂತೆ ಕುಂದು ಕೊರತೆಗಳ ನಿವಾರಣೆಗೆ ಕ್ರಮ
- ಪೋರ್ಟಲ್ / ಮೊಬೈಲ್ ಆಪ್ / ಸಹಾಯವಾಣಿ 1902 ಗಳ ಮೂಲಕ ಕುಂದು ಕೊರತೆಗಳ ನೋಂದಣಿ
- ನಾಗರೀಕರಿಗೆ ಕುಂದು ಕೊರತೆಯ ನೋಂದಣಿಯನ್ನು ಎಸ್‌ಎಂಎಸ್ ಮೂಲಕ ಖಾತ್ರಿಪಡಿಸಲಾಗುತ್ತದೆ

### ಸಾರಿಗೆ

- ಸಾರಿಗೆ ಇಲಾಖೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯ ಚಟುವಟಿಕೆಗಳಿಗೆ ಸಂಬಂಧಿಸಿದ 30 ಸೇವೆಗಳನ್ನು - ಸಾರಥಿ ಯೋಜನೆಯ ಅಡಿಯಲ್ಲಿ 11 ಸೇವೆಗಳು ಮತ್ತು ವಾಹನ ಯೋಜನೆಯ ಅಡಿಯಲ್ಲಿ 19 ಸೇವೆಗಳನ್ನು ಸಂಪರ್ಕ ರಹಿತವಾಗಿ / ಆನ್‌ಲೈನ್ ಮಾಡಲಾಗಿದೆ

### ಮುಖ್ಯಮಂತ್ರಿಗಳ ಡ್ಯಾಷ್‌ಬೋರ್ಡ್

- ಪ್ರಧಾನ ಮಂತ್ರಿಗಳ ಡ್ಯಾಷ್‌ಬೋರ್ಡ್ ಮಾದರಿಯಲ್ಲಿಯೇ ರಾಜ್ಯದಲ್ಲಿ ಮುಖ್ಯಮಂತ್ರಿಗಳ ಡ್ಯಾಷ್‌ಬೋರ್ಡ್ ಪ್ರಾರಂಭಿಸಲಾಗಿದೆ ವಿವಿಧ ಇಲಾಖೆಗಳ ಪ್ರಗತಿಯ ಕ್ಷಿಪ್ರ ನೋಟ ಇಲ್ಲಿ ದೊರೆಯಲಿದೆ

**ರಾಜ್ಯದ 31ನೇ ಹೊಸ ಜಿಲ್ಲೆಯಾಗಿ ವಿಜಯನಗರ ರಚನೆ**

**ಮುಂಬೈ ಕರ್ನಾಟಕ ಪ್ರದೇಶವನ್ನು "ಕಿತ್ತೂರು ಕರ್ನಾಟಕ" ಎಂದು ಮರು ನಾಮಕರಣ ಮಾಡಲು ಸರ್ಕಾರ ನಿರ್ಧರಿಸಿದೆ.**

**ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಸರ್ಕಾರ ಕಟಿಬದ್ಧವಾಗಿದ್ದು ಈಗಿರುವ ಅನುದಾನದ ಜೊತೆಗೆ ರೂ. 1500 ಕೋಟಿ ಅನುದಾನ ನೀಡಲು ಸರ್ಕಾರ ನಿರ್ಧರಿಸಿದೆ.**

**ಕರ್ನಾಟಕ ಪೋಲಿಸ್ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್‌ನ್ನು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಲಾಗಿರುವುದರಿಂದ ಸಾವಿರಾರು ಬಡ ಕುಟುಂಬಗಳು ಸಂಕಷ್ಟದಿಂದ ಪಾರು**

### ಐಟಿಐ ಶಿಕ್ಷಣ

- ರಾಜ್ಯದಲ್ಲಿ 155 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು (ಐಟಿಐ) ಸ್ಥಾಪಿಸಿ ಯುವಕರಲ್ಲಿ ಕೌಶಲ್ಯಾಭಿವೃದ್ಧಿಗೆ ವಿಶೇಷ ಪ್ರೋತ್ಸಾಹ

### ಮುಖ್ಯಮಂತ್ರಿ ವಿದ್ಯಾನಿಧಿ

- ರೈತರ ಮಕ್ಕಳ ಶಿಕ್ಷಣಕ್ಕೆ ವಿಶೇಷ ಕೊಡುಗೆ "ಮುಖ್ಯಮಂತ್ರಿ ರೈತ ವಿದ್ಯಾ ನಿಧಿ" ಯೋಜನೆ ಜಾರಿ
- ಈ ಯೋಜನೆಗೆ ಒಂದು ಸಾವಿರ ಕೋಟಿ ಮೀಸಲು ಇದರಿಂದ 18 ಲಕ್ಷ ರೈತ ಮಕ್ಕಳಿಗೆ ಲಾಭ

### ಉನ್ನತ ಶಿಕ್ಷಣ

- ರಾಷ್ಟ್ರೀಯ ಶಿಕ್ಷಣ ನೀತಿ (NEP) ಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ
- ರಾಷ್ಟ್ರೀಯ ಶಿಕ್ಷಣ ನೀತಿ - 2020 ಅನುಸಾರ ಕರ್ನಾಟಕದಲ್ಲಿ ಕನ್ನಡದಲ್ಲಿ ಇಂಜಿನಿಯರಿಂಗ್ ಪಠ್ಯಕ್ರಮ
- ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷ ಬಿ.ಎಸ್ಸಿ (ಫಾರ್ಮಾ) ಕೋರ್ಸ್ ಗೆ ಚಾಲನೆ

### ಸಾಮಾಜಿಕ ಸಬಲೀಕರಣ

- ಸಂಧ್ಯಾ ಸುರಕ್ಷಾ ಯೋಜನೆಯ ಪಿಂಚಣಿ ರೂ. 1200 ಗಳಿಗೆ ಹೆಚ್ಚಳ ಯೋಜನೆಯ ಫಲಾನುಭವಿಗಳು 35.98 ಲಕ್ಷ
- ವಿಧವಾ ವೇತನ ರೂ. 800ಕ್ಕೆ ಏರಿಕೆ, ಯೋಜನೆಯ ಫಲಾನುಭವಿಗಳು 17.25 ಲಕ್ಷ
- ದಿವ್ಯಾಂಗಿಗಳ ಮಾಸಿಕ ವೇತನ ರೂ. 800ಕ್ಕೆ ಏರಿಕೆ. ಯೋಜನೆಯ ಫಲಾನುಭವಿಗಳು 3.66 ಲಕ್ಷ

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

- 2022 ರ ಜನವರಿ 26ರಿಂದ ಐದು ಜಿಲ್ಲೆಗಳಲ್ಲಿ "ಗ್ರಾಮ ಸೇವಾ ಯೋಜನೆ"ಗೆ ಚಾಲನೆ
- ಗ್ರಾಮ ಪಂಚಾಯಿತಿ ಹಂತದಲ್ಲಿ ನಾಗರೀಕ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸುವ "ಗ್ರಾಮ ಸೇವಾ ಯೋಜನೆ" ಪ್ರಾಯೋಗಿಕವಾಗಿ ಜಾರಿ
- ಈ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳ ಸರ್ವಾಂಗೀಣ ಅಭಿವೃದ್ಧಿಯ ಗುರಿ

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ

- ಕೋವಿಡ್-19 ರ ಉತ್ತಮ ನಿರ್ವಹಣೆಗಾಗಿ ಇಂಡಿಯಾ ಟುಡೇ ಹೆಲ್ತ್‌ಗಿರಿ ಪ್ರಶಸ್ತಿ
- ರಾಜ್ಯದಲ್ಲಿ 250 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮೇಲ್ದರ್ಜೆಗೆ
- ರಾಜ್ಯದಲ್ಲಿ ದಾಖಲೆ ಪ್ರಮಾಣದಲ್ಲಿ ಕೋವಿಡ್ ಪ್ರತಿರೋಧ ಲಸಿಕೆ ನೀಡಿಕೆ

### ಜಲಸಂಪನ್ಮೂಲ

- ಕೃಷ್ಣಾ ಮೇಲ್ದಂಡೆ ಯೋಜನೆಯ ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ 20 ಗ್ರಾಮಗಳ ಸ್ಥಳಾಂತರಕ್ಕೆ ರೂ. 2000 ಕೋಟಿ ಅನುದಾನ ಒದಗಿಸಲು ನಿರ್ಧಾರ
- ಕಾವೇರಿ ಕೊಳ್ಳದ ಕೃಷ್ಣರಾಜ ಸಾಗರ ಅಣೆಕಟ್ಟು ಹಾಗೂ ವಿಶ್ವೇಶ್ವರಯ್ಯ ನಾಲೆಯ ಸಂಪೂರ್ಣ ಅಧುನೀಕರಣಕ್ಕೆ ಕ್ರಮ. ಈಗಾಗಲೇ ರೂ. 500 ಕೋಟಿ ಬಿಡುಗಡೆ, 1600 ಕಿ.ಮೀ ಕಾಮಗಾರಿಗಳ ಪ್ರಸ್ತಾವನೆಯ ಅನುಮೋದನೆಗೆ ನಿರ್ಧಾರ
- ಎತ್ತಿನಹೊಳೆ ಯೋಜನೆಯ ತ್ವರಿತ ಅನುಷ್ಠಾನಕ್ಕೆ ತೀರ್ಮಾನ

**ಪರಿಶಿಷ್ಟ ವರ್ಗಗಳ ಅಭ್ಯುದಯಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ**

**ಸರ್ಕಾರದ ವತಿಯಿಂದ ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆಗೆ ನಿರ್ಧಾರ**

### ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಮೃತ ಯೋಜನೆಗಳು

- ಅಮೃತ ಗ್ರಾಮ ಪಂಚಾಯಿತಿ • ಅಮೃತ ರೈತ ಉತ್ಪಾದಕ ಸಂಸ್ಥೆಗಳು
- ಅಮೃತ ಗ್ರಾಮೀಣ ವಸತಿ ಯೋಜನೆ • ಅಮೃತ ನಿರ್ಮಲ ನಗರ
- ಅಮೃತ ಶಾಲಾ ಸೌಲಭ್ಯ ಯೋಜನೆ • ಅಮೃತ ಅಂಗನವಾಡಿ ಕೇಂದ್ರಗಳು
- ಅಮೃತ ಸ್ವಸಹಾಯ ಕಿರು ಉದ್ದಿಮೆಗಳು • ಅಮೃತ ಸಮುದಾಯ ಅಭಿವೃದ್ಧಿ ಯೋಜನೆ
- ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ ಯೋಜನೆ
- ಅಮೃತ ಕೌಶಲ್ಯ ತರಬೇತಿ ಯೋಜನೆ • ಅಮೃತ ಕ್ರೀಡಾ ದತ್ತು ಯೋಜನೆ
- ಅಮೃತ ನಗರೋತ್ಥಾನ ಯೋಜನೆ

**ಮುಂದಿನ ವರ್ಷದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ನಗದು ಪುರಸ್ಕಾರದ ಮೊತ್ತ ಐದು ಲಕ್ಷ ರೂ ಗಳಿಗೆ ಹೆಚ್ಚಿಸಲು ನಿರ್ಧಾರ**
**ಪ್ರಶಸ್ತಿಗಳಿಗಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಸರ್ಕಾರದ ಆಯ್ಕೆ ಸಮಿತಿಯಿಂದಲೇ ರಾಜ್ಯೋತ್ಸವ ಪ್ರಶಸ್ತಿಗಳ ಆಯ್ಕೆಗೆ ಕ್ರಮ**















**ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು**

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು".
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

## ತಾಪಮಾನ

ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

| | ಬೆಂಗಳೂರು | ರಾಮನಗರ | ಮಂಡ್ಯ | ಮೈಸೂರು | ಚಾಮರಾಜನಗರ | ಹಾಸನ | ಮಡಿಕೇರಿ | ತುಮಕೂರು | ಕೋಲಾರ | ಚಿಕ್ಕಬಳ್ಳಾಪುರ |
|---|---|---|---|---|---|---|---|---|---|---|
| ಕನಿಷ್ಠ | 19.0 | 21.0 | 21.0 | 20.0 | 21.0 | 19.0 | 17.0 | 20.0 | 20.0 | 18.0 |
| ಗರಿಷ್ಠ | 27.0 | 28.0 | 28.0 | 28.0 | 27.0 | 26.0 | 24.0 | 27.0 | 25.0 | 24.0 |

## ರಾಶಿ ಭವಿಷ್ಯ

**ಮೇಷ**: ವಿದ್ಯಾರ್ಥಿಗಳು ಅಧ್ಯಯನದಲ್ಲಿ ಉತ್ತಮ ಸಾಧನೆ ಮಾಡುವರು. ಯಾರಿಗೂ ಸಾಲ ನೀಡುವುದನ್ನು ತಪ್ಪಿಸಿ. ವ್ಯಾಪಾರ ಮತ್ತು ಹಣಕ್ಕಾಗಿ ದಿನವು ಮಿಶ್ರವಾಗಿರುತ್ತದೆ. ಹೊಟ್ಟೆಯ ಸಮಸ್ಯೆ ಇರುತ್ತದೆ.

**ವೃಷಭ**: ಅದೃಷ್ಟ ನಿಮ್ಮೊಂದಿಗೆ ಇರುತ್ತದೆ, ಕುಟುಂಬದ ಕಡೆಯಿಂದ ಸಂತೋಷ ಇರುತ್ತದೆ. ಅಂತಹ ಯಾವುದೇ ಕೆಲಸವನ್ನು ನೀವು ಕೈಗೊಳ್ಳಬಹುದು, ಅದು ನಿಮ್ಮ ಕುಟುಂಬದ ಹೆಸರನ್ನು ಬೆಳಗಿಸುತ್ತದೆ.

**ಮಿಥುನ**: ಕೆಲಸದ ಸ್ಥಳದಲ್ಲಿ ಸಮಸ್ಯೆಗಳು ಸಾಧ್ಯ. ಯಾವುದೇ ರೀತಿಯ ಸತ್ಯ ಅಥವಾ ಸುಳ್ಳು ಆರೋಪವನ್ನು ಸಹ ಮಾಡಬಹುದು. ವಿವಾದಗಳಿಂದ ದೂರವಿರುವುದು ಸೂಕ್ತ.

**ಕರ್ಕ**: ದಾಂಪತ್ಯ ಜೀವನದಲ್ಲಿ ಮಧುರತೆ ಇರುತ್ತದೆ. ಕುಟುಂಬ ಅಥವಾ ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯವನ್ನು ಕಳೆಯಲಾಗುತ್ತದೆ. ಮಂಗಳ ಕಾರ್ಯಗಳಲ್ಲಿ ಭಾಗವಹಿಸುವ ಅದೃಷ್ಟವನ್ನು ನೀವು ಪಡೆಯುತ್ತೀರಿ,

**ಸಿಂಹ**: ಅದೃಷ್ಟ ನಿಮಗೆ ಒಲವು ತೋರಲಿದೆ. ನಿಮ್ಮ ಮಾನಸಿಕ ಆಲಸ್ಯ ಕೊನೆಗೊಳ್ಳುತ್ತದೆ ಮತ್ತು ಎಲ್ಲಾ ಕಡೆಯಿಂದ ಒಳ್ಳೆಯ ಸುದ್ದಿಯನ್ನು ಸ್ವೀಕರಿಸಲಾಗುತ್ತದೆ. ಪ್ರಗತಿ ಸಾಧಿಸಲು ಶ್ರಮಿಸುವಿರಿ. ಇಡೀ ದಿನ ಸಂತೋಷದಿಂದ ಕಳೆಯಲಿದೆ.

**ಕನ್ಯಾ**: ವ್ಯಾಪಾರದಲ್ಲಿ ಬೆಳವಣಿಗೆಯ ಸಾಧ್ಯತೆಗಳಿವೆ ಮತ್ತು ಆರೋಗ್ಯವು ಸಾಮಾನ್ಯವಾಗಿ ಉತ್ತಮವಾಗಿರುತ್ತದೆ. ನಿಮ್ಮ ಸಲಹೆಯು ಇತರರಿಗೆ ಉಪಯುಕ್ತವಾಗಿರುತ್ತದೆ. ಮನರಂಜನಾ ವಿಧಾನಗಳಲ್ಲಿ ನೀವು ಆಸಕ್ತಿ ಹೊಂದಿರುತ್ತೀರಿ.

**ತುಲಾ**: ನೀವು ಮನೆಯಿಂದ ಹೊರಗೆ ತಿರುಗಾಡಲು ಹೋಗುತ್ತೀರಿ, ಇದು ನಿಮಗೆ ಹೆಚ್ಚಿನ ಮನರಂಜನೆಯನ್ನು ನೀಡುತ್ತದೆ. ಕಾರ್ಯದಲ್ಲಿ ನಿಮ್ಮ ಸಂಪೂರ್ಣ ಸಹಕಾರವನ್ನು ನೀಡುತ್ತೀರಿ. ನೀವು ಹವಾಮಾನದ ಭಾರವನ್ನು ಸಹಿಸಿಕೊಳ್ಳಬಹುದು.

**ವೃಶ್ಚಿಕ**: ನಿಮ್ಮ ಪ್ರತಿಭೆಯಿಂದ ನಿಮ್ಮ ಅದೃಷ್ಟ ಜಾಗೃತಗೊಳ್ಳುತ್ತದೆ. ನೀವು ಎಲ್ಲಾ ಕೆಲಸಗಳಲ್ಲಿ ಯಶಸ್ಸನ್ನು ಪಡೆಯುತ್ತೀರಿ. ಪ್ರೇಮ ಸಂಬಂಧಗಳಲ್ಲಿ ಸೂಕ್ಷ್ಮತೆಯನ್ನು ಕಾಣಬಹುದು, ಆದ್ದರಿಂದ ನೀವು ಚಿಂತನಶೀಲವಾಗಿ ಮಾತನಾಡುತ್ತೀರಿ.

**ಧನು**: ನಿಮ್ಮ ಆರೋಗ್ಯವು ಸಾಮಾನ್ಯವಾಗಿರುತ್ತದೆ. ಕೆಲಸದಲ್ಲಿ ಯಶಸ್ಸು ಇರುತ್ತದೆ. ಪೋಷಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸ್ನೇಹಿತರೊಂದಿಗೆ ಉತ್ತಮ ಸಮಯ ಕಳೆಯುವಿರಿ.

**ಮಕರ**: ನೀವು ಉತ್ತಮ ಪ್ರತಿಷ್ಠೆಯೊಂದಿಗೆ ಕೆಲಸದಲ್ಲಿ ಯಶಸ್ಸನ್ನು ಪಡೆಯುತ್ತೀರಿ. ಪ್ರಚಾರಕ್ಕೆ ಸಂಬಂಧಿಸಿದ ಅಥವಾ ಸಂಬಂಧಿತ ಮಾತುಕತೆ ಇರುತ್ತದೆ. ನಿಮ್ಮ ಮಗು ಕೆಲವು ಶ್ಲಾಘನೀಯ ಕೆಲಸವನ್ನು ಮಾಡುತ್ತದೆ, ಅದು ನಿಮಗೆ ಹೆಮ್ಮೆ ತರುತ್ತದೆ.

**ಕುಂಭ**: ಮಕ್ಕಳ ಸಹಾಯ ಸಂತಸವನ್ನು ಹೆಚ್ಚಿಸಲಿದೆ. ದೇವರ ಧ್ಯಾನದಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಶೈಕ್ಷಣಿಕ ರಂಗದಲ್ಲಿ ನಿರಂತರ ಪ್ರಯತ್ನದಿಂದಾಗಿ, ನೀವು ಕೆಲವು ವಿಶೇಷ ವ್ಯಕ್ತಿಗಳ ಮಾರ್ಗದರ್ಶನವನ್ನು ಪಡೆಯಬಹುದು.

**ಮೀನಾ**: ನಿಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಇತರರೊಂದಿಗೆ ಸೌಹಾರ್ದಯುತ ವರ್ತನೆ ಇರುತ್ತದೆ. ವಿದೇಶ ಪ್ರವಾಸದಲ್ಲಿ ಖುಷಿಯಾಗಲಿದೆ. ಕೆಲಸದ ನಿಮಿತ್ತ ದೂರ ಪ್ರಯಾಣ ಸಾಧ್ಯ.

# ಸೈನಿಕರೊಂದಿಗೆ ಮೋದಿ ದೀಪಾವಳಿ

**ಸಂಜೆ ಮುಗಿಲು ನ್ಯೂಸ್, ನವದೆಹಲಿ**

ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಸೇನಾ ಪಡೆಗಳೊಂದಿಗೆ ದೀಪಾವಳಿ ಆಚರಿಸಲಿದ್ದಾರೆ. ಹೀಗಾಗಿ ಜಮ್ಮು ಮತ್ತು ಕಾಶ್ಮೀರದ ರಜೌರಿಯಲ್ಲಿರುವ ನೌಶೇರಾ ಸೆಕ್ಟರ್‌ನ ಮುಂಭಾಗದ ಪ್ರದೇಶವು ಗುರುವಾರ, ನವೆಂಬರ್ 4 ರಂದು ಪ್ರಧಾನಿ ನರೇಂದ್ರ ಮೋದಿಯವರ ದೀಪಾವಳಿ ಭೇಟಿಗೆ ಸಜ್ಜಾಗಿದೆ.



ಎರಡನೇ ದೀಪಾವಳಿ ಇದಾಗಿದೆ. 2019 ರಲ್ಲಿ ಅವರು ರಜೌರಿಯಲ್ಲಿರುವ ಆರ್ಮಿ ಡಿವ್ ಪ್ರಧಾನ ಕಛೇರಿಯಲ್ಲಿ ಸೈನಿಕರೊಂದಿಗೆ ದೀಪಾವಳಿಯನ್ನು ಆಚರಿಸಿದ್ದರು. ಈ ಬಾರಿ ಅವರು ನೌಶೇರಾದಲ್ಲಿ ಸೈನಿಕರೊಂದಿಗೆ ಹಬ್ಬವನ್ನು ಆಚರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಮಂತ್ರಿಯವರ ಭೇಟಿಗೆ ಮುಂಚಿತವಾಗಿ ಸೇನಾ ಮುಖ್ಯಸ್ಥ ಜನರಲ್ ಎಂಎಂ ನರವಾಣೆ ಅವರು ಎರಡು ದಿನಗಳ ಭೇಟಿಗಾಗಿ ಬುಧವಾರ ಇಲ್ಲಿಗೆ ಆಗಮಿಸಿದರು. ಜಮ್ಮು ಪ್ರದೇಶದ ಮುಂದಿರುವ ಪ್ರದೇಶಗಳ ವೈಮಾನಿಕ ವೀಕ್ಷಣೆಯನ್ನು ನಡೆಸಿದರು

ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಚಾಲ್ತಿಯಲ್ಲಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ಭೂಸೇನಾ ಕಮಾಂಡರ್‌ಗಳು ಅವರಿಗೆ ಮಾಹಿತಿ ನೀಡಿದರು ಎಂದು ಪಿಆರ್‌ಒ ಡಿಫೆನ್ಸ್ ಲೆಫ್ಟಿನೆಂಟ್ ಕರ್ನಲ್ ದೇವೇಂದರ್ ಆನಂದ್ ಹೇಳಿದ್ದಾರೆ. ಸೇನಾ ಮುಖ್ಯಸ್ಥರು ಪ್ರಧಾನಿಯವರೊಂದಿಗೆ ಗುರುವಾರ ರಜೌರಿಗೆ ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೂಂಚ್ ಮತ್ತು ರಜೌರಿ ಜಿಲ್ಲೆಗಳ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದಕರ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಯ ನಡುವೆ ಕಳೆದ ಎರಡು ವಾರಗಳಲ್ಲಿ ಜಮ್ಮು ವಿಭಾಗಕ್ಕೆ ಜನರಲ್ ನರವಾಣೆ ಅವರ ಎರಡನೇ ಭೇಟಿ ಇದಾಗಿದೆ. ಇತ್ತೀಚಿನ ದಿನಗಳಲ್ಲಿ ಅತ್ಯಂತ ಸುದೀರ್ಘವಾದ ಕಾರ್ಯಾಚರಣೆ ಬುಧವಾರಕ್ಕೆ 24 ದಿನಗಳನ್ನು ಪೂರೈಸಿದೆ.

ಜಮ್ಮು ಮತ್ತು ಕಾಶ್ಮೀರದ ಪೂಂಚ್ ಮತ್ತು ರಾಜೌರಿಯ ಅರಣ್ಯ ಪ್ರದೇಶದಲ್ಲಿ ಉಗ್ರರನ್ನು ಹೊಡೆದುರುಳಿಸಲು ಸೇನಾ ಸಿಬ್ಬಂದಿ ಭಾರೀ ಶೋಧ ನಡೆಸುತ್ತಿದ್ದಾರೆ. ಪೂಂಚ್‌ನಲ್ಲಿ ಭಯೋತ್ಪಾದಕರ ವಿರುದ್ಧದ ಹೋರಾಟದಲ್ಲಿ ಹಲವಾರು ಸೇನಾ ಸಿಬ್ಬಂದಿಗಳು ಸಾವನ್ನಪ್ಪಿದ್ದಾರೆ. ಶನಿವಾರ ರಾಜೌರಿಯ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಗಣಿ ಸ್ಫೋಟದಲ್ಲಿ ಭಾರತೀಯ ಸೇನೆಯ ಅಧಿಕಾರಿ ಮತ್ತು ಯೋಧ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಮತ್ತೊಬ್ಬ ಯೋಧ ಗಾಯಗೊಂಡಿದ್ದಾರೆ.

ಭಾರತೀಯ ಸೇನೆಯ ಮತ್ತೊಂದು ಪ್ರಮುಖ ವಲಯವೆಂದರೆ ಲಡಾಖ್ ಸೆಕ್ಟರ್, ಅಲ್ಲಿ ನೆರೆಯ ದೇಶದಿಂದ ಯಾವುದೇ ಆಕ್ರಮಣವನ್ನು ಪರಿಶೀಲಿಸಲು 18 ತಿಂಗಳಿಗೂ ಹೆಚ್ಚು ಕಾಲ ಭಾರತ-ಚೀನಾ ಗಡಿಯಲ್ಲಿ ಸೈನ್ಯವನ್ನು ನಿಯೋಜಿಸಲಾಗಿದೆ. ಅಧಿಕಾರ ವಹಿಸಿಕೊಂಡಾಗಿನಿಂದ, ಪ್ರಧಾನಿಯವರು ಉತ್ತರಾಖಂಡ, ಹಿಮಾಚಲ ಪ್ರದೇಶ, ರಾಜಸ್ಥಾನ, ಪಂಜಾಬ್ ಮತ್ತು ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶಗಳ ಮುಂದೆ ಸೈನಿಕರೊಂದಿಗೆ ಸಮಯ ಕಳೆಯುವ ಮೂಲಕ ದೀಪಾವಳಿಯನ್ನು ಆಚರಿಸುತ್ತಿದ್ದಾರೆಜನರಲ್ ಎಂ ಎಂ ನರವಾಣೆ ಸಿಓಎಎಸ್ (ಸೇನಾ ಸಿಬ್ಬಂದಿ ಮುಖ್ಯಸ್ಥ) ಜಮ್ಮು ಪ್ರದೇಶಕ್ಕೆ ಭೇಟಿ ನೀಡಿದ್ದು, ಅಲ್ಲಿ ಅವರಿಗೆ ಭದ್ರತಾ ಪರಿಸ್ಥಿತಿ ಮತ್ತು ಕಾರ್ಯಾಚರಣೆಯ ಸನ್ನದ್ಧತೆಯ ಕುರಿತು ನವೀಕರಣವನ್ನು ನೀಡಲಾಗುವುದು. ಅವರು ಮುಂದಿನ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ. ದೇಶದ ಪಡೆಗಳು ಮತ್ತು ಕಮಾಂಡರ್‌ಗಳೊಂದಿಗೆ ಸಂವಾದ ನಡೆಸಲಿದ್ದಾರೆ" ಎಂದು ಭಾರತೀಯ ಸೇನೆಯ ಸಾರ್ವಜನಿಕ ಮಾಹಿತಿಯ ಹೆಚ್ಚುವರಿ ನಿರ್ದೇಶನಾಲಯ ಟ್ವೀಟ್ ಮಾಡಿದೆ.



**66ನೇಯ ಕನ್ನಡ ರಾಜ್ಯೋತ್ಸವದ ಸಂದರ್ಭ ದಲ್ಲಿ ಶಿಕ್ಷಣ ಕ್ಷೇತ್ರ ಮತ್ತು ಸುಗಮ ಸಂಗೀತದಲ್ಲಿ ಅವರ ಪ್ರತಿಭೆ,ಸೇವೆಯನ್ನು ಪರಿಗಣಿಸಿ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢಶಾಲೆಯಲ್ಲಿ ಸಹ ಶಿಕ್ಷಕಿಯಾಗಿ (ಸಂಸ್ಕೃತ ಶಿಕ್ಷಕಿ) ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಯಶೋದಾ ಶಾನಭಾಗರವರಿಗೆ ರಾಷ್ಟೀಯ ಹಬ್ಬಗಳ ತಾಲೂಕಿನ ಆಚರಣಾ ಸಮಿತಿಯಿಂದ ಸನ್ಮಾನಿಸಲಾಯಿತು. ಇವರ ಈ ಸಾಧನಕ್ಕೆ ಕರ್ನಾಟಕ ಕರಾವಳಿ ಸಾಂಸ್ಕೃತಿಕ ವೇದಿಕೆಯ ಪದಾಧಿಕಾ-ರಿಗಳು ಹರ್ಷವನ್ನು ವ್ಯಕ್ತಪಡಿಸಿದರು.**

## ಗುಣವಾಗದ ಚರ್ಮರೋಗ: ವೈದ್ಯರಿಗೆ ಸವಾಲು

**ಸಂಜೆ ಮುಗಿಲು ನ್ಯೂಸ್, ಕೆ.ಆರ್.ಪೇಟೆ:**

ಒಂದೇ ತಾಯಿಯ ಇಬ್ಬರು ಮಕ್ಕಳು ವಿಚಿತ್ರ ಚರ್ಮ ರೋಗಕ್ಕೆ ತುತ್ತಾಗಿದ್ದು, ತಜ್ಞ ಚರ್ಮ ರೋಗ ವೈದ್ಯರಲ್ಲಿ ಚಿಕಿತ್ಸೆ ಕೊಡಿಸಿದರೂ ಸಹ ಗುಣವಾಗದೇ ಇರುವುದು ವೈದ್ಯಲೋಕಕ್ಕೂ ಸವಾಲಾಗಿದೆ.

ಕೆ.ಆರ್.ಪೇಟೆ ಪಟ್ಟಣದ 8ನೇ ವಾರ್ಡಿನಲ್ಲಿರುವ ಪೌರಕಾರ್ಮಿಕರ ಕಾಲೋನಿಯಲ್ಲಿ ವಾಸಿಸುವ ಗಿರೀಶ್ ಮತ್ತು ತೇಜಸ್ವಿನಿ ದಂಪತಿಗಳ ಮಕ್ಕಳಾದ ತೇಜಸ್(6ವರ್ಷ), ಪುತ್ರಿ ಆದ್ಯಶ್ರೀ (3ವರ್ಷ) ಹುಟ್ಟಿನಿಂದಲೇ ವಿಚಿತ್ರ ಚರ್ಮರೋಗಕ್ಕೆ ತುತ್ತಾಗಿದ್ದಾರೆ. ಚರ್ಮ ರೋಗ ಇರುವ ಕಾರಣ ಶಾಲೆಗೆ ಹಾಗೂ ಅಂಗನವಾಡಿ ಕೇಂದ್ರಕ್ಕೆ ಹೋಗಲಾಗದೇ ಶಿಕ್ಷಣದಿಂದಲೂ ಈ ಮಕ್ಕಳು ವಂಚಿತರಾಗಿದ್ದಾರೆ. ಇವರಿಗೆ ಮೈಸೂರು, ಬೆಂಗಳೂರು ಸೇರಿದಂತೆ ಹತ್ತಾರು ಊರುಗಳಲ್ಲಿ ತಜ್ಞ ಚರ್ಮರೋಗ ವೈದ್ಯರಲ್ಲಿ ಚಿಕಿತ್ಸೆ ಕೊಡಿಸಿದರೂ ಸಹ ಈ ರೋಗವು ವಾಸಿಯಾಗಿರುವುದಿಲ್ಲ. ಇದರಿಂದ ಇಡೀ ಕುಟುಂಬ ಮಕ್ಕಳ ಆರೈಕೆಯಲ್ಲಿಯೇ ತೊಡಗುವಂತಾಗಿದೆ. ಈ ಮಕ್ಕಳ ವಿಚಿತ್ರ ಚರ್ಮ ಕಾಯಿಲೆಯು ಅವರಿಗೆ 18ವರ್ಷ ತುಂಬಿದ ನಂತರ ವಾಸಿಯಾಗುತ್ತದೆ ಎಂದು ಕೆಲವು ವೈದ್ಯರು ಹೇಳಿರುವ ಕಾರಣ ಪೋಷಕರು ಮನೆಯಲ್ಲಿಯೇ ಚರ್ಮರೋಗ ಪೀಡಿತ ಮಕ್ಕಳನ್ನು ಆರೈಕೆ ಮಾಡುತ್ತಿದ್ದಾರೆ.

**20ಸಾವಿರ ಕೊಡುಗೆ:** ಮಕ್ಕಳ ವಿಚಿತ್ರ ಚರ್ಮ ರೋಗದ ಬಗ್ಗೆ ಮಾಹಿತಿ ಪಡೆದ ಕೆ.ಆರ್.ಪೇಟೆ ಪಟ್ಟಣದ ಹೇಮಾವತಿ ಬಡಾವಣೆಯ ನಿವಾಸಿಗಳಾದ ಶ್ರೀಮತಿ ಅಕ್ಕಮ್ಮ ಮತ್ತು ಬೀರಯ್ಯ ದಂಪತಿಗಳ ಸುಪುತ್ರಿ ಬೆಂಗಳೂರಿನ ಕೆಂಗೇರಿ ಕೆ.ಬಿ.ಸುಜಾತಚನ್ನೇಗೌಡ ಅವರು ಅವರ ತಂದೆ ತಾಯಿಯವರಾದ ಅವರ ಹೆಸರಿನಲ್ಲಿ ಮಕ್ಕಳ ಚಿಕಿತ್ಸೆ ಹಾಗೂ ಆರೈಕೆ ಖರ್ಚಿಗಾಗಿ 20 ಸಾವಿರ ರೂಪಾಯಿಗಳನ್ನು ಕೊಡುಗೆಯಾಗಿ ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

# ಕಾಂಗ್ರೆಸ್ ವಿರುದ್ಧ ಬಿಜೆಪಿ ಲೇವಡಿ

**ಸಂಜೆ ಮುಗಿಲು ನ್ಯೂಸ್, ಬೆಂಗಳೂರು**

ಸಿದ್ದರಾಮಯ್ಯ ಅವರ 'ನಾಯಕತ್ವದಲ್ಲಿ' ಹಾಗೂ ಶಿವಕುಮಾರ್ ಅವರ 'ಮಾರ್ಗದರ್ಶನದಲ್ಲಿ' ಚುನಾವಣೆ ಎದುರಿಸುತ್ತೇವೆ ಎಂದು ಕಾಂಗ್ರೆಸ್ ಪಕ್ಷದ ಶಾಸಕ ಬೈರತಿ ಸುರೇಶ್ ಹೇಳಿಕೆ ನೀಡಿರುವುದು ಕಾಂಗ್ರೆಸ್ ನಲ್ಲಿ ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿದಂತಾಗಿದೆ ಎಂದು ಬಿಜೆಪಿ ಲೇವಡಿ ಮಾಡಿದೆ.

ಸಂಬಂಧ ಟ್ವೀಟ್ ಮಾಡಿರುವ ಬಿಜೆಪಿ, ಡಿಕೆ ಶಿವಕುಮಾರ್ ಅವರನ್ನು ಮಾರ್ಗದರ್ಶಿ ಮಂಡಳಿಗೆ ಸೇರಿಸುವುದಕ್ಕೆ ಸಿದ್ದರಾಮಯ್ಯ ಬಣ ಹುನ್ನಾರ ನಡೆಸುತ್ತಿದೆಯೇ? ಎಂದು ಬಿಜೆಪಿ ಪ್ರಶ್ನಿಸಿದೆ.

ಡಿಕೆ ಶಿವಕುಮಾರ್ ಅವರೇ, ಹಾನಗಲ್ ಫಲಿತಾಂಶದ ಬಳಿಕ ಕೆಪಿಸಿಸಿ ಕಚೇರಿಯಲ್ಲಿ ಯಾವುದೇ ಸಂಭ್ರಮವಿರಲಿಲ್ಲ. ಏಕೆಂದರೆ ನಿಮ್ಮ ಸಂತಸವನ್ನು ಅದಾಗಲೇ ಸಿದ್ದರಾಮಯ್ಯ ಕಸಿದು ಬಿಟ್ಟಿದ್ದಾರಲ್ಲವೇ? ಕಸರತ್ತು ಮಾಡಿ ಕೆಪಿಸಿಸಿ ಪಟ್ಟ ಒಲಿಸಿಕೊಂಡರೂ ಈಗ ದ್ವಿತೀಯ ಸಾಲಿನ ನಾಯಕನಂತಾಗಿರುವ ಶಿವಕುಮಾರ್ ಅವರ ಬಗ್ಗೆ ಅನುಕಂಪವಿದೆ ಎಂದಿದೆ.

ನಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲವೆಂದು ನುಣುಚಿಕೊಳ್ಳುವ ಶಿವಕುಮಾರ್ ಅವರೇ, ನಿಮಗೊಂದು ಸವಾಲು. ನಿಮ್ಮ ಪದವಿಯ ಮೇಲೆ ನಿಮಗೆ ಹಿಡಿತವಿದ್ದರೆ ಶೀಘ್ರದಲ್ಲೇ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿ ಪ್ರಕಟಿಸಿ, ನೋಡೋಣ. ಪಟ್ಟಿ ಪ್ರಕಟವಾದ ಕ್ಷಣದಿಂದ ಪದಚ್ಯುತಿಯ ಕಾರ್ಯಾಚರಣೆ ಆರಂಭವಾಗಲಿದೆ ಎಂಬ ಭಯ ಕಾಡುತ್ತಿದೆಯೇ?" ಎಂದು ಕಾಲೆಳೆದಿದೆ.

ಡಿಕೆ ಶಿವಕುಮಾರ್ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾದ ಬಳಿಕ ನಡೆದ ಉಪಚುನಾವಣೆಯಲ್ಲಿ ಪ್ರಯಾಸದ ಎರಡನೇ ಗೆಲುವು ಕಾಂಗ್ರೆಸ್‌ಗೆ ಲಭಿಸಿದೆ. ಆದರೆ ಈ ಗೆಲುವನ್ನು ಸಂಭ್ರಮಿಸುವುದಕ್ಕೂ ಡಿಕೆ ಶಿವಕುಮಾರ್ ಅವರಿಗೆ ಸಾಧ್ಯವಾಗುತ್ತಿಲ್ಲ ಎಂದು ಬಿಜೆಪಿ ಲೇವಡಿ ಮಾಡಿದೆ. ಉಪಚುನಾವಣೆ ಯಶಸ್ಸಿಗೆ ನಾನೇ ಕಾರಣ ಎಂಬ ಪೈಪೋಟಿಗೆ ಡಿಕೆ ಶಿವಕುಮಾರ್ ಸೋತು ಹೋಗಿದ್ದಾರೆ.

## ಹಾಸ್ಯ

ಟೀಚರ್: ಅಕ್ಬರ್ ಯಾರೋ ಗುಂಡಾ..?

ಗುಂಡು: ಗೊತ್ತಿಲ್ಲಾ ಮೇಡಮ್..!!

ಟೀಚರ್: ಓದಿನ ಕಡೆ ಗಮನ ಕೊಡು..!!

ಗುಂಡ: ಮೇಡಮ್ ರವಿ, ಪ್ರಶಾಂತ್ ಯಾರು ಗೊತ್ತಾ..?

ಟೀಚರ್: ಗೊತ್ತಿಲ್ಲಾ..!!

ಗುಂಡ: ಮೊದ್ಲು ನಿಮ್ ಮಗಳ ಕಡೆ ಗಮನ ಕೊಡಿ

## ಪ್ರಕಾಶ್‌ರೈ ಕಪಾಳ ಮೋಕ್ಷ: ನೆಟ್ಟಿಗರ ಆಕ್ರೋಶ

**ಸಂಜೆ ಮುಗಿಲು ನ್ಯೂಸ್, ನವದೆಹಲಿ**

ನಟ ಸೂರ್ಯ ಅಭಿನಯದ ತಮಿಳು ಸಿನಿಮಾ ಜೈ ಭೀಮ್ ಅಮೇಜಾನ್ ಪ್ರೈಮ್ ನಲ್ಲಿ ರಿಲೀಸ್ ಆಗಿದ್ದು ಎಲ್ಲರ ಮೆಚ್ಚುಗೆ ಗಳಿಸುತ್ತಿದೆ.



ಈಗ ಜೈ ಭೀಮ್ ಸಿನಿಮಾದ ಒಂದು ಸೀನ್ ಭಾರೀ ಚರ್ಚೆಗೆ ಗ್ರಾಸವಾಗಿದೆ. ವ್ಯಕ್ತಿಯೋರ್ವ ಹಿಂದಿಯಲ್ಲಿ ಮಾತನಾಡಿದ್ದಕ್ಕೆ ಪ್ರಕಾಶ್ ರೈ ಕಪಾಳ ಮೋಕ್ಷ ಮಾಡಿದ್ದಾರೆ. ಅಲ್ಲದೇ ತಮಿಳಿನಲ್ಲಿ ಮಾತಾಡು ಎಂದು ಆಗ್ರಹಿಸಿದ್ದಾರೆ. ಪ್ರಕಾಶ್ ರೈ ವ್ಯಕ್ತಿಯೊಬ್ಬರ ಕೆನ್ನೆಗೆ ಬಾರಿಸಿ ತಮಿಳಿನಲ್ಲೇ ಮಾತಾಡು ಎಂದಿರುವ ವಿಡಿಯೋ ಟ್ವಿಟ್ಟರ್ ನಲ್ಲಿ ವೈರಲ್ ಆಗುತ್ತಿದೆ.

ಪ್ರಕಾಶ್ ರೈ ನಟಿಸಿರುವ ಈ ವಿಡಿಯೋಗೆ ಪರ-ವಿರೋಧ ಅಭಿಪ್ರಾಯಗಳು ಕೇಳಿ ಬರುತ್ತಿವೆ, ಜೈ ಭೀಮ್' ಚಿತ್ರದಲ್ಲಿ ದೃಶ್ಯವೊಂದು ಬರುತ್ತದೆ. ಈ ದೃಶ್ಯದಲ್ಲಿ ಪ್ರಕಾಶ್ ರಾಜ್ ಬಳಿ ಬರುವ ಅಟೆಂಡರ್ ಓರ್ವ ಹಿಂದಿಯಲ್ಲಿ ಮಾತನಾಡುತ್ತಾನೆ. ಈ ವೇಳೆ ಪ್ರಕಾಶ್ ರೈ ಕೆನ್ನೆಗೆ ಬಾರಿಸಿ ತಮಿಳಿನಲ್ಲಿ ಮಾತನಾಡುವಂತೆ ಸೂಚಿಸುತ್ತಾರೆ. ಇದೇ ದೃಶ್ಯವನ್ನು ಇಟ್ಟುಕೊಂಡು ಕೆಲವರು ಕೊಂಕುತೆಗೆದಿದ್ದಾರೆ.

ಯಾವ ಭಾಷೆಯಲ್ಲಿ ಮಾತನಾಡಬೇಕು ಎನ್ನುವುದು ಅವರವರ ಇಷ್ಟ. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಅಟೆಂಡರ್ ಹಿಂದಿ ಮಾತನಾಡಿದ ಎನ್ನುವ ಕಾರಣಕ್ಕೆ ಅವನಿಗೆ ಹೊಡೆಯುವ ಅಧಿಕಾರವನ್ನು ಪ್ರಕಾಶ್ ರೈಗೆ ಕೊಟ್ಟವರು ಯಾರು' ಎಂದು ಕೆಲವರು ಪ್ರಶ್ನೆ ಮಾಡಿದ್ದಾರೆ. ಇದಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ.

# ಸಮಾಜ ಸೇವೆಗೆ ಕರವೇ ಫ್ರಾನ್ಸಿಸ್ ಅವರಿಗೆ ಗೌರವ ಡಾಕ್ಟರ್

**ಸಂಜೆ ಮುಗಿಲು ನ್ಯೂಸ್, ಕುಶಾಲನಗರ**

ಕರವೇ ತಾಲೂಕು ಅಧ್ಯಕ್ಷರಾದ ಫ್ರಾನ್ಸಿಸ್ ಡಿಸೋಜಾರವರಿಗೆ ಕೆನಡ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಯನ್ನು ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ವೈಎಂಸಿಎ ಹಾಲ್ ನಲ್ಲಿ ಸುಂದರ ಸಮಾರಂಭದಲ್ಲಿ ಈ ಗೌರವ ಡಾಕ್ಟರೇಟ್ ಪದವಿಯನ್ನು ಕೊಡಲಾಯಿತು.

ಒಟ್ಟು 56 ಜನರಿಗೆ ಈ ಡಾಕ್ಟರೇಟ್ ಪದವಿಯನ್ನು ಕೊಡಲಾಯಿತು. ನನಗೆ ಡಾಕ್ಟರೇಟ್ ಪದವಿ ಕೊಟ್ಟಂತಹ ಕೆನಡಾ ವಿಶ್ವವಿದ್ಯಾಲಯದವರೆಗೆ ಕರವೇ ಫ್ರಾನ್ಸಿಸ್ ಡಿಸೋಜ ರವರು ತುಂಬು ಹೃದಯದ ಧನ್ಯವಾದ ಅರ್ಪಿಸುತ್ತಿದ್ದಾರೆ.

ಈ ಪ್ರಶಸ್ತಿಯನ್ನು ಕೊಡಗಿನ ಎಲ್ಲ ಜನರಿಗೂ ಸಮರ್ಪಿಸುತ್ತಿದ್ದೇನೆ. ಕರವೇ ರಾಜ್ಯಾಧ್ಯಕ್ಷರು ಶಿವರಾಮೇಗೌಡ ಅಣ್ಣನವರಿಗೆ ಈ ಗೌರವ ಡಾಕ್ಟರೇಟ್ ಅನ್ನು ಸಮರ್ಪಿಸುತ್ತಿದ್ದೇನೆ ಹಾಗೂ ಕೊಡಗಿನ ಕರವೇ ಪ್ರತಿಯೊಬ್ಬ ಕಾರ್ಯಕರ್ತರಿಗೂ ಮತ್ತು ಎಲ್ಲಾ ಅಧ್ಯಕ್ಷರುಗಳಿಗೂ ಹಾಗೂ ಪದಾಧಿಕಾರಿಗಳು ಈ ಗೌರವ ಡಾಕ್ಟರೇಟ್ ಸಮರ್ಪಿಸುತ್ತೇನೆ ಹಾಗೂ ನನ್ನ ಕುಟುಂಬದ ಪ್ರತಿಯೊಬ್ಬರಿಗೂ ಈ ಗೌರವ ಡಾಕ್ಟರೇಟ್ ಸಮರ್ಪಿಸುತ್ತೇನೆ ಹಾಗೂ ಗೋಪಾಲಪುರ ಚರ್ಚ್ ನ ಫಾದರ್ ಜಾಕಪ್ ಕೊಳನೂರು ಹಾಗೂ ಗೋಪಾಲಪುರ ಚರ್ಚ್ ನ ಎಲ್ಲ ಕ್ರೈಸ್ತ ಬಾಂಧವರಿಗೆ ಈ ಗೌರವ ಡಾಕ್ಟರೇಟ್ ಅನ್ನೋ ಸಮರ್ಪಿಸುತ್ತಿದ್ದೇನೆ ಹಾಗೂ ನನ್ನ ಸೋಮವಾರಪೇಟೆ ತಾಲ್ಲೂಕಿನಲ್ಲಿ ಮತ್ತು ಶನಿವಾರಸಂತೆ ಹೋಬಳಿಯಲ್ಲಿ ಇರುವಂತಹ ಪ್ರತಿಯೊಬ್ಬ ಕರವೇ ಕಾರ್ಯಕರ್ತರಿಗೆ ಅಧ್ಯಕ್ಷರುಗಳಿಗೂ ಹಾಗೂ ಪದಾಧಿಕಾರಿಗಳಿಗೂ ಈ ಗೌರವ ಡಾಕ್ಟರೇಟ್ ಅನ್ನು ಸಮರ್ಪಿಸುತ್ತಿದ್ದೇನೆ.




ಹಾಗೆಯೇ ಸೋಮವಾರಪೇಟೆ ತಾಲ್ಲೂಕಿನಲ್ಲಿ ಮತ್ತು ಶನಿವಾರಸಂತೆ ಹೋಬಳಿಯಲ್ಲಿ ನನ್ನ ಕರವೇಯ ಕೆಲಸಕ್ಕೆ ಹೆಗಲಿಗೆ ಹೆಗಲಾಗಿ ಇರುವ ಸೋಮವಾರಪೇಟೆ ತಾಲ್ಲೂಕು ಕಾರ್ಯದರ್ಶಿ ರಾಮನಹಳ್ಳಿ ಪ್ರವೀಣ್ ಹಾಗೂ ಶನಿವಾರಸಂತೆ ಹೋಬಳಿ ಅಧ್ಯಕ್ಷರಾದ ನಂದಿಗುಂದ ಆನಂದ್ ಹಾಗೂ ರಾಮನಳ್ಳಿ ಗ್ರಾಮ ಘಟಕದ ಅಧ್ಯಕ್ಷರಾದ ರಾಮನಹಳ್ಳಿ ಹರೀಶ್ ಹಾಗೂ ರಕ್ಷಿತ್, ರಂಜಿತ್, ರಾಜಣ್ಣ, ರಮೇಶ್, ಚನ್ನಾಪುರ ಲೂಯಿಸ್ ಇನ್ನು ಎಲ್ಲಾ ಕರವೇ ಕಾರ್ಯಕರ್ತರಿಗೆ ಈ ಗೌರವ ಡಾಕ್ಟರೇಟನ್ನು ಸಮರ್ಪಿಸುತ್ತಿದ್ದೇನೆ.

ನನ್ನನ್ನು ಕರವೇಗೆ ಸೇರಿಸಿದಂಥ ನವದುರ್ಗಾ ಪರಮೇಶ್ವರಿ ದೇವಸ್ಥಾನದ ಅರ್ಚಕರಾದ ವಿಶ್ವರೂಪಾಚಾರ್ಯ ಇವರಿಗೂ ಇವರ ಕುಟುಂಬಸ್ಥರಿಗೂ ಈ ಗೌರವ ಡಾಕ್ಟರೇಟ್ ಅನ್ನು ಸಮರ್ಪಿಸುತ್ತಿದ್ದೇನೆ. ನನ್ನ ಹುಟ್ಟೂರಾದ ಬೀಟಿಕಟ್ಟೆ ಮತ್ತು ಹಾರಳ್ಳಿ ಎಲ್ಲಾ ಗ್ರಾಮಸ್ಥರಿಗೂ ಈ ಗೌರವ ಡಾಕ್ಟರೇಟ್ ಅನ್ನು ಸಮರ್ಪಿಸುತ್ತಿದ್ದೇನೆ .ಹಾಗೂ ನಮ್ಮ ಗೌಡಳ್ಳಿ ಗ್ರಾಮ ಪಂಚಾಯಿತಿ ಯಲ್ಲಿ ಇರುವ ಪ್ರತಿಯೊಬ್ಬರಿಗೂ ಈ ಗೌರವ ಡಾಕ್ಟರೇಟ್ ಅನ್ನು ಸಮರ್ಪಿಸುತ್ತಿದ್ದೇನೆ. ನಮ್ಮ ಕರವೇಯ ಕೆಲಸದ ಎಲ್ಲ ಸುದ್ದಿಗಳನ್ನು ಉತ್ತಮ ಲೇಖನ ಮಾಡಿ ಪತ್ರಿಕೆಯಲ್ಲಿ ಪ್ರಕಟ ಮಾಡಿದಂತಹ ಕೊಡಗಿನ ಎಲ್ಲ ಪತ್ರಕರ್ತರಿಗೆ ಮತ್ತು ವರದಿಗಾರರಿಗೆ ಸೋಮವಾರಪೇಟೆ ತಾಲ್ಲೂಕಿನ ಎಲ್ಲ ಪತ್ರಕರ್ತ-ರಿಗೆ ಮತ್ತು ವರದಿಗಾರರಿಗೆ ಮತ್ತು ಶನಿವಾರಸಂತೆ ಇರುವ ಎಲ್ಲ ಪತ್ರಕರ್ತರಿಗೆ ಮತ್ತು ವರದಿಗಾರರಿಗೆ ಹಾಗೂ ಕರವೇಯ ಒಳ್ಳೆಯ ಕೆಲಸದ ಬಗ್ಗೆ ಎಲ್ಲಾ ಪತ್ರಿಕೆಗಳು ಸುದ್ದಿ ಪ್ರಕಟ ಮಾಡಿರುತ್ತಾರೆ ಹಾಗಾಗಿ ಕೊಡಗಿನ ಎಲ್ಲ ಪತ್ರಿಕೆಯವರಿಗೆ ಹಾಗೂ ಕೊಡಗಿನ ಎಲ್ಲಾ ಟಿವಿ ಮಾಧ್ಯಮ ದವರು ಕರವೇಯ ಒಳ್ಳೆಯ ಕೆಲಸದ ಬಗ್ಗೆ ಟಿವಿ ಮಾಧ್ಯಮದಲ್ಲಿ ಪ್ರಸಾರ ಮಾಡಿರುತ್ತಾರೆ.

ಹಾಗಾಗಿ ಕೊಡಗಿನ ಎಲ್ಲಾ ಟೀವಿ ಮಾಧ್ಯಮದವ-ರಿಗೆ ಹಾಗೂ ಕೊಡಗಿನ ರಾಜ್ಯ ಟಿವಿ ಮಾಧ್ಯಮ ವರದಿಗಾರರಿಗೆ ಇವರಿಗೆಲ್ಲರಿಗೂ ಈ ಗೌರವ ಡಾಕ್ಟರೇಟ್ ಸಮರ್ಪಿಸುತ್ತಿದ್ದೇನೆ.

ಕರವೇಯ ಒಳ್ಳೆಯ ಕೆಲಸಕ್ಕೆ ದಾನಿಗಳು ತುಂಬಾ ಸಹಕಾರ ನೀಡಿರುತ್ತಾರೆ ನಮಗೆ ಸಹಕಾರ ಕೊಟ್ಟಂತಹ ಎಲ್ಲಾ ದಾನಿಗಳಿಗೂ ಈ ಗೌರವ ಡಾಕ್ಟರೇಟ್ ಅನ್ನು ಇವರಿಗೆಲ್ಲರಿಗೂ ಸಮರ್ಪಿಸುತ್ತಿದ್ದೇನೆ . ಹಾಗೂ ನಮಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ಕೊಟ್ಟಂತಹ ಮತ್ತು ನಮ್ಮ ಒಳ್ಳೆಯ ಕೆಲಸದ ಬಗ್ಗೆ ಬೆನ್ನುತಟ್ಟಿ ದಂತಹ ಪ್ರತಿಯೊಬ್ಬರಿಗೂ ಈ ಗೌರವ ಡಾಕ್ಟರೇಟ್ ಅನ್ನು ಸಮರ್ಪಿಸುತ್ತಿದ್ದೇನೆ.

ಮತ್ತೊಮ್ಮೆ ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳು ಅರ್ಪಿಸುತ್ತೇನೆ ಎಂದು ಕರವೇ ತಾಲ್ಲೂಕಿನ ಅಧ್ಯಕ್ಷರಾದ ಫ್ರಾನ್ಸಿಸ್ ಡಿಸೋಜ ತಿಳಿಸಿದರು.

# ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆ

**ಸಂಜೆ ಮುಗಿಲು ನ್ಯೂಸ್, ಕೆ.ಆರ್.ಪೇಟೆ**

ತಾಲ್ಲೂಕಿನ ಬೀರುವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯುಸಂಘದ ಅಧ್ಯಕ್ಷ ಬಿ.ಸಿ.ಜವರೇಗೌಡ ಅಧ್ಯಕ್ಷತೆಯಲ್ಲಿನಡೆಯಿತು.

ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಹಿರಿಯ ನಿರ್ದೇಶಕ ಡಾಲು ರವಿ ಅವರು ಮಹಾಸಭೆಯನ್ನು ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿದರು. ಬಳಿಕ ಮಾತನಾಡಿದ ಅವರು ಸಹಕಾರ ಸಂಘದ ಹೊಸ ಬೈಲಾ ಪ್ರಕಾರ ಐದು ಸಹಕಾರಿ ವರ್ಷಗಳಲ್ಲಿ ಕನಿಷ್ಠ 2 ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸಿ ಸಂಘದ ಮಹಾಸಭೆಯ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿದರೆ ಮಾತ್ರ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಬಹುದು ಹಾಗೂ ಮತದಾನದ ಹಕ್ಕು ಪಡೆಯಬಹುದು ಜೊತೆಗೆ 180 ದಿನಗಳ ಕಾಲ ಹಾಲು ಪೂರೈಕೆ ಮಾಡಿರಬೇಕು.ಹಾಗಾಗಿ ಪ್ರತಿಯೊಬ್ಬರೂ ಕಡ್ಡಾಯವಾಗಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬೇಕು ಎಂದು ಶೇರುದಾರರಲ್ಲಿ ಮನವಿ ಮಾಡಿದರು.



ಬೀರುವಳ್ಳಿ ಹಾಲು ಉತ್ಪಾದಕರ ಸಂಘದ ಆಡಳಿತ ಮಂಡಳಿ ಹಾಗೂ ನೌಕರರ ಪರಿಶ್ರಮದಿಂದ ಸುಮಾರು 73 ಲಕ್ಷಕ್ಕೂ ಅಧಿಕ ಲಾಭದಲ್ಲಿ ಮುನ್ನಡೆಯುತ್ತಿದೆ. ಸಂಘದ ಹೆಸರಿನಲ್ಲಿ ಪಾನ್‌ಕಾರ್ಡ್ ಮಾಡಿ ಡಿಸೆಂಬರ್ 31ರೊಳಗೆ ಆದಾಯ ತೆರಿಗೆ ಪಾವತಿಸಬೇಕು. ಇಲ್ಲದಿದ್ದರೆ ಪ್ರತಿ ಒಂದು ಲಕ್ಷಕ್ಕೆ 35 ಸಾವಿರ ರೂಪಾಯಿಗಳನ್ನು ಕೇಂದ್ರ ಆಧಾಯ ತೆರಿಗೆ ಇಲಾಖೆಯು ಬ್ಯಾಂಕ್ ಮೂಲಕ ನೇರವಾಗಿ ಕಡಿತ ಮಾಡಿಕೊಳ್ಳುತ್ತದೆ ಹಾಗಾಗಿ ಎಲ್ಲಾ ಸಂಘದ ಕಾರ್ಯದರ್ಶಿಗಳು ಆಡಿಟರ್ ಸಲಹೆಯ ಮೇರೆಗೆ ಸಕಾಲಕ್ಕೆ ಆದಾಯ ತೆರಿಗೆಯನ್ನು ಪಾವತಿಸಬೇಕು ಎಂದು ಡಾಲು ರವಿ ಅವರು ಮನವಿ ಮಾಡಿದರು.

ಮಾಜಿ ಜಿ.ಪಂ. ಸದಸ್ಯರು ಹಾಗೂ ಮನ್‌ಮುಲ್ ನಿರ್ದೇಶಕರಾದ ಹೆಚ್.ಟಿ.ಮಂಜು ಮಾತನಾಡಿ, ಸಹಕಾರ ಸಂಘಗಳು ರೈತರ ಜೀವನಾಡಿ ಯಾಗಿವೆ ಹಾಗಾಗಿ ಸಹಕಾರ ಸಂಘಗಳಲ್ಲಿ ರಾಜಕೀಯ ಬೆರೆಸದೇ ಅವುಗಳ ಅಭಿವೃದ್ಧಿಗೆ ಸಹಕಾರ ನೀಡಬೇಕು. ರೈತರಿಗೆ ವರ್ಷವಿಡೀ ಆಧಾಯ ನೀಡುವ ಏಕೈಕ ಸಂಸ್ಥೆ ನಮ್ಮ ಹಾಲು ಒಕ್ಕೂಟವಾಗಿದೆ. ಹಾಗಾಗಿ ರೈತ ಬಾಂಧವರು ಗುಣಮಟ್ಟದ ಹಾಲನ್ನು ತಮ್ಮ ಗ್ರಾಮದ ಡೈರಿಗಳಿಗೆ ಹಾಕುವ ಮೂಲಕ ಹಾಲು ಒಕ್ಕೂಟವನ್ನು ಬಲಪಡಿಸಬೇಕು ಎಂದು ಮಂಜು ಅವರು ಮನವಿ ಮಾಡಿದರು.

ಮನ್‌ಮುಲ್ ಮಾರ್ಗದ ವಿಸ್ತರಣಾಧಿಕಾರಿ ನಾಗಪ್ಪ ಹಲ್ಲಿಬಾದಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘದ ಕಾರ್ಯನಿರ್ವಾಹಕ ಅಧಿಕಾರಿಬಿ.ಆರ್.ಹರೀಶ್ ಸಂಘದ ವಾರ್ಷಿಕವರದಿ ಮಂಡಿಸಿದರು. ಸಂಘದ ಉಪಾಧ್ಯಕ್ಷೆ ಸಾವಿತ್ರಮ್ಮ, ನಿರ್ದೇಶಕರಾದ ಬಿ.ಎಸ್.ಶಿವರಾಮೇಗೌಡ, ವೀರೂಪಾಕ್ಷಪ್ಪ, ಬಿ.ಜೆ.ಶಶಿಧರ್, ಬಿ ಎಲ್.ಬಲ್ಲೇಶ್,ಬಿ.ಎನ್.ಧನಂಜಯ, ರುಕ್ಮಿಣಮ್ಮ, ಹೇಮಾ, ನೀಲಶೆಟ್ಟಿ, ವಸಂತಮ್ಮ, ದ್ಯಾವನಾಯಕ್, ಸಂಘದ ಕಾರ್ಯದರ್ಶಿ ಯೋಗೇಶ್, ಹಾಲು ಪರೀಕ್ಷಕರಾದ ಬಿ.ಜಿ.ಯೋಗೇಂದ್ರ, ಸಹಾಯಕರಾದ ರಕ್ಷಿತ್, ಸಣ್ಣತಾಯಮ್ಮ ಸೇರಿದಂತೆ ಸಂಘದ ಶೇರುದಾರರು ಗ್ರಾಮದ ಮುಖಂಡರು ಸಭೆಯಲ್ಲಿ ಇದ್ದರು.

ಸುದ್ದಿಗಳ ಹೊನಲು

# ಸಂಜೆ ಮುಗಿಲು

₹3

ಸಂಪುಟ: 19, ಸಂಚಿಕೆ: 26, ಪುಟಗಳು: 8, ಗುರುವಾರ, 04 ನವೆಂಬರ್ 2021 RNI NO. KARKAN/2002/08054

epaper: www.sanjemugilu.com

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ। ತುಮಕೂರು। ಹಾಸನ। ಮಡಿಕೇರಿ



ವೇಣು ಸಾರಥ್ಯದಲ್ಲಿ...

**ಸುಭಾಷಿತ**

ಸಂಕಷ್ಟ ಇಲ್ಲದಿದ್ದರೆ ನಾವು ತಪ್ಪುಗಳಿಂದ ಪಾಠ ಕಲಿಯುವುದಿಲ್ಲ.
–ಏಂಜಲೀನಾ ಜೋಲಿ

**ಪಂಚಾಂಗ**

ಶ್ರೀ ಪ್ಲವನಾಮ ಸಂವತ್ಸರ, ದಕ್ಷಿಣಾಯಣ,ಶರದ್ ಋತು, ಆಶ್ವಯುಜಮಾಸ,ಕೃಷ್ಣಪಕ್ಷ, ಅಮಾವಾಸ್ಯೆ,ಗುರುವಾರ, ಚಿತ್ತಾ ನಕ್ಷತ್ರ / ಉಪರಿ ಸ್ವಾತಿ ನಕ್ಷತ್ರ.

ರಾಹುಕಾಲ: 01:35 ರಿಂದ 03:02

ಗುಳಿಕಕಾಲ: 9:12 ರಿಂದ 10.40

ಯಮಗಂಡಕಾಲ: 6:17 ರಿಂದ 7.45

**ಬೆಂಕಿಬಲೆ**

ದೀಪಾವಳಿಗೆ ಪಟಾಕಿ ಬಳಸಬೇಡಿ ಎನ್ನುವ ಎಲ್ಲಾ ಪರಿಸರ ಕಾರ್ಯಕರ್ತರಿಗೆ ನನ್ನ ಉತ್ತರ ಇದು. ನಿಮ್ಮ ಕಚೇರಿಗೆ ಮೂರು ದಿನಗಳವರೆಗೆ ಕಾರುಗಳನ್ನು ಬಳಸಬೇಡಿ.
ಕಂಗನಾ ರಾಣಾವತ್, ನಟಿ

**ಅನಾವರಣ**

## ಗಣ್ಯರಿಂದ ದೀಪಾವಳಿ ಶುಭಾಶಯ

**ಸಂಜೆ ಮುಗಿಲು ನ್ಯೂಸ್, ಬೆಂಗಳೂರು:**

ದೇಶದಾದ್ಯಂತ ದೀಪಾವಳಿ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಗಣ್ಯಾತಿ ಗಣ್ಯರು ಗುರುವಾರ ಶುಭಾಶಯಗಳನ್ನು ಕೋರಿದ್ದಾರೆ. ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ಮೋದಿಯವರು ದೀಪಾವಳಿಯ ಈ ಶುಭ ಸಂದರ್ಭದಲ್ಲಿ ದೇಶವಾಸಿಗಳಿಗೆ ಹಬ್ಬದ ಶುಭಾಶಯಗಳು. ಈ ಬೆಳಕಿನ ಹಬ್ಬವು ನಿಮ್ಮ ಜೀವನದಲ್ಲಿ ಸಂತೋಷ, ಸಮೃದ್ಧಿ ಮತ್ತು ಅದೃಷ್ಟವನ್ನು ತರಲಿ ಎಂದು ನಾನು ಬಯಸುತ್ತೇನೆ. ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು ಎಂದು ಹೇಳಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಟ್ವೀಟ್ ಮಾಡಿ ಈ 'ಬೆಳಕಿನ ಹಬ್ಬ' ನಿಮ್ಮೆಲ್ಲರ ಜೀವನವನ್ನು ಆರೋಗ್ಯ, ಸಂಪತ್ತು, ಸಂತೋಷ ಮತ್ತು ಯಶಸ್ಸಿನಿಂದ ಬೆಳಗಲಿ, ನೀವು ಎಲ್ಲಿಯೇ ಇದ್ದರೂ ನಮ್ಮ ಭೂಮಿಗೆ ಹೆಚ್ಚಿನ ಕೀರ್ತಿಯನ್ನು ತನ್ನಿ ಎಂದು ತಿಳಿಸಿದ್ದಾರೆ.

ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of
Newspapers | Tabloids | Magazines

# ದೀಪಾವಳಿ ಬಂಪರ್

## ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆಗೆ ನಿರ್ಧಾರ

ತೈಲ ಬೆಲೆ ಇಳಿಕೆ ಮಾಡಲು ರಾಜ್ಯ ಸರಕಾರದಿಂದವೂ ತೀರ್ಮಾನ

ಪೆಟ್ರೋಲ್ ಮೇಲಿನ ಅಬಕಾರಿ ಸುಂಕ 5 ರೂ. ಹಾಗೂ ಡೀಸೆಲ್ ಮೇಲೆ 10 ರೂ. ಇಳಿಕೆ ಮಾಡಿದ್ದ ಕೇಂದ್ರ

ಇದೀಗ ರಾಜ್ಯ ಸರಕಾರದಿಂದ ಎರಡೂ ಇಂಧನಗಳ ಮೇಲೆ ಲೀಟರ್‌ಗೆ 7 ರೂ. ದರ ಕಡಿತಕ್ಕೆ ನಿರ್ಧಾರ



**ಸಂಜೆ ಮುಗಿಲು ನ್ಯೂಸ್, ಬೆಂಗಳೂರು**

ಕೇಂದ್ರ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಇಳಿಕೆ ಮಾಡಿದ ಬೆನ್ನಿಗೆ ರಾಜ್ಯ ಸರಕಾರವೂ ಇಂಧನದ ಬೆಲೆ ಇಳಿಕೆ ಮಾಡಲು ತೀರ್ಮಾನಿಸಿದೆ. ಇದರಿಂದ ಜನತೆಗೆ ದೀಪಾವಳಿಗೂ ಮೊದಲು ಭರ್ಜರಿ ಗಿಫ್ಟ್ ಸಿಕ್ಕಂತಾಗಿದೆ.

ಕೇಂದ್ರ ಸರಕಾರ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು 5 ರೂ., ಹಾಗೂ ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು 10 ರೂ. ಇಳಿಕೆ ಮಾಡಿತ್ತು. ಇದಾದ ಬೆನ್ನಿಗೆ ರಾಜ್ಯ ಸರಕಾರಗಳಿಗೂ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಅನ್ನು ಕಡಿತಗೊಳಿಸುವಂತೆ ಕೇಂದ್ರ ಸರಕಾರ ಆಗ್ರಹಿಸಿತ್ತು.

ಇದೀಗ ರಾಜ್ಯ ಸರಕಾರವೂ ಡೀಸೆಲ್ ಮತ್ತು ಪೆಟ್ರೋಲ್ ದರವನ್ನು ತಲಾ 7 ರೂ. ಕಡಿತಗೊಳಿಸಲು ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮೂಲಕ ತಿಳಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, "ಕರ್ನಾಟಕ ರಾಜ್ಯ ಸರಕಾರವು ಡೀಸೆಲ್ ಮತ್ತು ಪೆಟ್ರೋಲ್ ಮೇಲೆ ತಲಾ 7 ರೂ ಕಡಿಮೆಗೊಳಿಸಲು ನಿರ್ಧರಿಸಿದೆ. ಈ ನಮ್ಮ ನಿರ್ಧಾರದಿಂದ ರಾಜ್ಯ ಸರಕಾರಕ್ಕೆ ಅಂದಾಜು 2,100 ಕೋಟಿ ರೂಪಾಯಿ ಕೆ.ಎಸ್.ಟಿ ಯಿಂದ ಬೊಕ್ಕಸಕ್ಕೆ ನಷ್ಟವಾಗುತ್ತದೆ," ಎಂದು ಹೇಳಿದ್ದಾರೆ.

ಈ ದರ ಕಡಿತದ ಬಳಿಕ ರಾಜ್ಯದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ ಅಂದಾಜು 95.50 ರೂ. ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ ಅಂದಾಜು 81.50 ರೂ ಆಗುವ ನಿರೀಕ್ಷೆಯಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಪುಟ 4

# ಕೋವ್ಯಾಕ್ಸಿನ್‌ಗೆ ಗ್ರೀನ್ ಸಿಗ್ನಲ್

**ಸಂಜೆ ಮುಗಿಲು ನ್ಯೂಸ್, ನವದೆಹಲಿ**

ಭಾರತ್ ಬಯೋಟೆಕ್ ಸಂಸ್ಥೆ ಉತ್ಪಾದಿಸಿದ ಕೋವ್ಯಾಕ್ಸಿನ್ ಲಸಿಕೆ ತುರ್ತು ಬಳಕೆಗೆ ವಿಶ್ವ ಆರೋಗ್ಯ ಸಂಸ್ಥೆ ಅನುಮೋದನೆ ನೀಡಿದೆ. ಮಾರಕ ಕೊರೊನಾ ವೈಸರ್‌ನಿಂದ ತಪ್ಪಿಸಿಕೊಳ್ಳಲು ಲಸಿಕೆ ಇಲ್ಲದ ದೇಶಗಳು ತುರ್ತಾಗಿ ಭಾರತದ ಕೋವ್ಯಾಕ್ಸಿನ್ ಬಳಸಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.



ಇನ್ಮುಂದೆ ಕೋವ್ಯಾಕ್ಸಿನ್ ಲಸಿಕೆ ಪಡೆದುಕೊಂಡವರು ಎಲ್ಲಾ ದೇಶಗಳಿಗೂ ಹೋಗಬಹುದು. ವಿಶ್ವ ಆರೋಗ್ಯ ಸಂಸ್ಥೆ ಅನುಮೋದನೆ ಬಳಿಕ ಎಲ್ಲಾ ದೇಶಗಳು ಈಗ ಕೋವ್ಯಾಕ್ಸಿನ್ ಬಳಸಬಹುದು ಕೊವಿಶೀಲ್ಡ್ ಜೊತೆಗೆ ಈಗ ಕೋವ್ಯಾಕ್ಸಿನ್ ಕೂಡ ವಿಶ್ವ ಅಧಿಕೃತ ಲಸಿಕೆಗಳ ಪಟ್ಟಿಗೆ ಸೇರಿದೆ.

ಆರಂಭದಿಂದಲು ಭಾರತ ಕೋವ್ಯಾಕ್ಸಿನ್‌ಗೆ ಅನುಮೋದನೆ ನೀಡಲು ವಿಶ್ವ ಆರೋಗ್ಯ ಸಂಸ್ಥೆ ತಕರಾರು ಮಾಡುತ್ತಲೇ ಕೋವ್ಯಾಕ್ಸಿನ್ ಸಂಬಂಧ ಹಲವು ಡೀಟೈಲ್ಸ್ ನಮಗೆ ಸಿಕ್ಕಿಲ್ಲ ಎಂದು ಖ್ಯಾತೆ ತೆಗೆಯುತ್ತಿತ್ತು. ಭಾರತ ಯಾವಾಗ ಇತರ ದೇಶಗಳಿಗೆ ಲಸಿಕೆ ನೀಡೋದಿಲ್ಲ ಎಂದು ಕೆಲವು ಕ್ರಮಗಳನ್ನು ತೆಗೆದುಕೊಂಡಿತೋ ಅಂದು ಮೋದಿ ಸರ್ಕಾರದ ಒತ್ತಡಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಮಣಿದಿದೆ.

ವಿಶ್ವ ಆರೋಗ್ಯ ಸಂಸ್ಥೆ ಕೊನೆಗೂ ಭಾರತ ಕೋವ್ಯಾಕ್ಸಿನ್‌ಗೆ ಅನುಮೋದನೆ ನೀಡಿದೆ. ಈ ಮುನ್ನ ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳು ಕೋವ್ಯಾಕ್ಸಿನ್ ಅನುಮೋದಿಸಿದ್ದವು.

# ಮೂವರು ದುರ್ಮರಣ

**ಸಂಜೆ ಮುಗಿಲು ನ್ಯೂಸ್, ಕಲಬುರಗಿ**

ಎಲ್ಲವೂ ಅಂದುಕೊಂಡಂತೆ ಆಗಿದ್ದರೇ ಆ ಮನೆಗಳಲ್ಲಿ ದೀಪಾವಳಿ ಹಬ್ಬ ಸಂಭ್ರಮ ಇರಬೇಕಿತ್ತು. ದೀಪ ಬೆಳಗಿ ಹಬ್ಬ ಆಚರಣೆ ಮಾಡುತ್ತಿದ್ದರು. ಆದರೆ ವಿಧಿಯ ಆಟವೇ ಬೇರೆ ಆಗಿತ್ತು. ಮಳೆ ನೀರು ತುಂಬಿದ್ದ ತಗ್ಗು ಗುಂಡಿಯಲ್ಲಿ ಇಳಿದ ಮೂವರು ಪುಟ್ಟ ಬಾಲಕರು ಬಾರದ ಲೋಕಕ್ಕೆ ಹೋಗಿದ್ದಾರೆ. ಮಕ್ಕಳನ್ನ ಕಳೆದುಕೊಂಡು ಪೋಷಕರ ಆಕ್ರಂದನ ಮುಗಿಲುಮುಟ್ಟಿದೆ. ಮನಕಲಕುವ ಘಟನೆಗೆ ಕಲಬುರಗಿ ನಗರದ ಮಹಾಲಕ್ಷ್ಮಿ ಲೇಔಟ್ ಸಾಕ್ಷಿಯಾಗಿದೆ. ಮಹಾಲಕ್ಷ್ಮಿ ಲೇಔಟ್‌ನಲ್ಲಿಂದು ದೀಪಾವಳಿ ಹಬ್ಬದ ಸಡಗರ ಸಂಭ್ರಮ ಬಿಟ್ಟು ಸ್ಮಶಾನಮೌನ ಆವರಿಸಿದೆ.

**ಮೂವರು ಬಾಲಕರ ದುರಂತ ಅಂತ್ಯ:** ಲೇಔಟ್‌ನಲ್ಲಿ ಮಹಾಜನ್ ಎಂಬುವರು ಮನೆ ಕಟ್ಟಲು ಅಂತಾ ಕಳೆದೆರಡು ದಿನಗಳ ಹಿಂದೆ ಹಳ್ಳ ತೋಡಿದ್ದರು. ಆದರೆ ಕಳೆದ ರಾತ್ರಿ ಸುರಿದ ಧಾರಕಾರ ಮಳೆಯಿಂದ ಇಡೀ ನಿರ್ಮಾಣ ಹಂತದ ಕಟ್ಟಡದ ತಗ್ಗುಗುಂಡಿ ತುಂಬಿ ಹೋಗಿತ್ತು. ಇಂದು ಬೆಳಗ್ಗೆ ಮೂವರು ಬಾಲಕರಾದ 10 ವರ್ಷದ ಪ್ರಶಾಂತ, 12 ವರ್ಷದ ದರ್ಶನ್ ಮತ್ತು 9 ವರ್ಷದ ವಿಘ್ನೇಶ್ ಆಟವಾಡಲು ನೀರಿಗಿಳಿದಿದ್ದಾರೆ. ಇಂದು ಬೆಳಗ್ಗೆ ದರ್ಶನ್ ಅವರ ತಾಯಿ ಮನೆಗೆಲಸಕ್ಕೆ ಅಂತ ಹೋಗಿದ್ರು ಅಲ್ಲಿನ ಮನೆ ಮಾಲೀಕ ದರ್ಶನ್ ಗೆ 50 ರೂಪಾಯಿ ನೀಡಿದ್ದ. ಹಾಗಾಗಿ ತಾಯಿ ಹಣ ತಗೊಂಡು ಹೋಗಿ ಕಟಿಂಗ್ ಮಾಡಿಸ್ಕೊ ಅಂತ ಹೇಳಿದ್ದಾರೆ. ಪುಟ 4

# ಟೀಂ ಇಂಡಿಯಾದ ಮುಖ್ಯ ಕೋಚ್ ಆಗಿ ಕನ್ನಡಿಗ

**ಸಂಜೆ ಮುಗಿಲು ನ್ಯೂಸ್, ನವದೆಹಲಿ**



ಟೀಂ ಇಂಡಿಯಾದ ನೂತನ ಕೋಚ್ ಆಗಿ ಭಾರತದ ಮಾಜಿ ನಾಯಕ ರಾಹುಲ್ ದ್ರಾವಿಡ್ ನೇಮಕಗೊಂಡಿದ್ದಾರೆ.

ನವೆಂಬರ್ 17ರಿಂದ ಆರಂಭವಾಗಲಿರುವ ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯಿಂದ ಅವರು ತಮ್ಮ ಜವಾಬ್ದಾರಿಯನ್ನು ನಿಭಾಯಿಸಲಿದ್ದಾರೆ. ಭಾರತೀಯ ಕ್ರಿಕೆಟ್ ಮಂಡಳಿ ಈ ಮಾಹಿತಿ ನೀಡಿದೆ.

ಪ್ರಸ್ತುತ ಮುಖ್ಯ ಕೋಚ್ ರವಿಶಾಸ್ತ್ರಿ ಅವರು 2021ರ ಟಿ20 ವಿಶ್ವಕಪ್ ನಂತರ ಟೀಂ ಇಂಡಿಯಾದ ಮುಖ್ಯ ಕೋಚ್ ಸ್ಥಾನದಿಂದ ಕೆಳಗಿಳಿಯುವುದಾಗಿ ಈಗಾಗಲೇ ಘೋಷಿಸಿದ್ದರು.

ಭಾರತದ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾದ 48ರ ಹರೆಯದ ದ್ರಾವಿಡ್ ಕಳೆದ ಆರು ವರ್ಷಗಳಿಂದ ಭಾರತ ಎ ಮತ್ತು ಅಂಡರ್–19 ವ್ಯವಸ್ಥೆಯ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಅವರ ಮೇಲ್ವಿಚಾರಣೆಯಲ್ಲಿ, ರಿಷಬ್ ಪಂತ್, ಅವೇಶ್ ಖಾನ್, ಪೃಥ್ವಿ ಶಾ, ಹನುಮ ವಿಹಾರಿ ಮತ್ತು ಶುಭಮನ್ ಗಿಲ್ ಅವರಂತಹ ಆಟಗಾರರು ಜೂನಿಯರ್ ಹಂತದಿಂದ ರಾಷ್ಟ್ರೀಯ ತಂಡಕ್ಕೆ ಪ್ರಯಾಣಿಸಿದ್ದಾರೆ. ಅವರು ಪ್ರಸ್ತುತ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥರಾಗಿದ್ದಾರೆ.

2021ರ ಟಿ20 ವಿಶ್ವಕಪ್ ನಂತರ, ನ್ಯೂಜಿಲೆಂಡ್ ತಂಡವು ಮೂರು ಪಂದ್ಯಗಳ ಟಿ20 ಸರಣಿ ಮತ್ತು ಎರಡು ಪಂದ್ಯಗಳ ಟೆಸ್ಟ್ ಸರಣಿಗಾಗಿ ಭಾರತ ಪ್ರವಾಸಕ್ಕೈಗೊಳ್ಳಲಿದೆ. ನವೆಂಬರ್ 17ರಂದು ಮೊದಲ ಟಿ20 ಪಂದ್ಯದೊಂದಿಗೆ ಪ್ರವಾಸ ಆರಂಭವಾಗಲಿದೆ. ಈ ಸರಣಿಯಿಂದಲೇ ರಾಹುಲ್ ದ್ರಾವಿಡ್ ಟೀಂ ಇಂಡಿಯಾದ ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಪುಟ 4

# ಕಾನ್‌ಸ್ಟೇಬಲ್ ಪರೀಕ್ಷೆ ಅಕ್ರಮ: ಸಿಐಡಿಗೆ ತನಿಖೆ

**ಸಂಜೆ ಮುಗಿಲು ನ್ಯೂಸ್, ಬೆಳಗಾವಿ**

ಕಾನ್‌ಸ್ಟೇಬಲ್ ಪರೀಕ್ಷೆಯಲ್ಲಿ 12 ಜನರು ಅತ್ಯಾಧುನಿಕ ತಂತ್ರಜ್ಞಾನವಾದ ಬ್ಲೂಟೂತ್ ಬಳಸಿ ಪರೀಕ್ಷೆ ಬರೆಯಲು ಯತ್ನಿಸಿದ್ದ ಪ್ರಕರಣದ ತನಿಖೆಯನ್ನು ರಾಜ್ಯ ಗೃಹ ಇಲಾಖೆ ಸಿಐಡಿಗೆ ವಹಿಸಿದೆ. ಬೆಳಗಾವಿಯಲ್ಲಿ ಅಕ್ಟೋಬರ್ 24ರಂದು ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಸ್ಪರ್ಧಾತ್ಮಕ ಪರೀಕ್ಷೆ ನಡೆದಿತ್ತು. ಈ ವೇಳೆ ರಾಮತೀರ್ಥ ನಗರದಲ್ಲಿ ಖಚಿತ ಮಾಹಿತಿ ಮೇರೆಗೆ ಪೊಲೀಸರು ಪರೀಕ್ಷಾ ಕೊಠಡಿಗಳ ಮೇಲೆ ದಾಳಿ ನಡೆಸಿದ್ದರು. ಪರಿಣಾಮ ಪರೀಕ್ಷೆ ವೇಳೆಯಲ್ಲಿ 12 ಜನ ಪರೀಕ್ಷಾರ್ಥಿಗಳು ಬ್ಲೂಟೂತ್ ಬಳಸಿ ಪರೀಕ್ಷೆ ಬರೆಯುತ್ತಿದ್ದು, ಅವರನ್ನು ಪೊಲೀಸರು ಬಂಧಿಸಿದ್ದರು. ಇದರ ಹಿಂದೆ ಇನ್ನೂ ದೊಡ್ಡ ಜಾಲವೇ ಇದೆ ಎಂದು ರಾಜ್ಯ ಗೃಹ ಇಲಾಖೆ ಹೆಚ್ಚಿನ ತನಿಖೆಗಾಗಿ ಸಿಐಡಿಗೆ ಒಪ್ಪಿಸಿದೆ. ಪುಟ 4

BDA PROPERTIES
BUY/SELL
BDA PROPERTIES
www.bdaproperties.co.in
+91 73 4979 4979

HOUSE FOR SALE
25x40 BDA West Facing, Constructed in 25 Sq, 1 BHK House in Ground Floor & 4 BHK Duplex House at Kengeri Satellite Town, Bengaluru
400 Mtrs from Kengeri Metro Station
100 Mtrs from Mysore Road
Rs.2 Crore
Contact
Nagalinga
7019009272, 9743378744
Shivakumar : 9845875555

# ವಿಜಯಪುರದಲ್ಲಿ ಭೂ ಕಂಪನ

**ಸಂಜೆ ಮುಗಿಲು ನ್ಯೂಸ್, ವಿಜಯಪುರ**

ಜಿಲ್ಲೆಯ ತಿಕೋಟಾ ತಾಲೂಕಿನಲ್ಲಿ ಭೂಮಿ ಕಂಪಿಸಿದ ಅನುಭವವಾಗಿದ್ದು, ಜನರಲ್ಲಿ ಆತಂಕ ಮೂಡಿಸಿದೆ. ತಡರಾತ್ರಿ 1.50 ಸುಮಾರಿಗೆ ಜಿಲ್ಲೆಯ ತಿಕೋಟಾ ತಾಲೂಕಿನಕೆ.ಸಿದ್ದಾಪುರ,ಧನ್ನರ್ಗಿ ಗ್ರಾಮಗಳಲ್ಲಿಭೂಮಿನಡುಗಿದಂತೆಜೋರಾದ ಶಬ್ಧದ ಅನುಭವಾಗಿದೆ. ಇದರಿಂದ ಅಲ್ಲಿನ ಜನರು ಭಯಭೀತರಾಗಿದ್ದಾರೆ.

ಬುಧವಾರ ರಾತ್ರಿ 8.26 ರ ಸುಮಾರಿಗೆ ಕಳ್ಳಕವಟಗಿ, ಟಕ್ಕಳಕಿ, ಸೋಮದೇವರಹಟ್ಟಿ ಭಾಗದಲ್ಲಿ ಭೂಮಿ ಕಂಪಿಸಿದ್ದ ಅನುಭವವಾಗಿದೆ. ಈ ಮುನ್ನ ಸೆಪ್ಟೆಂಬರ್ 4 ರಂದು ವಿಜಯಪುರ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ 3.9 ತೀವ್ರತೆಯಲ್ಲಿ ಭೂಕಂಪನ ಉಂಟಾಗಿತ್ತು. ಮಹಾರಾಷ್ಟ್ರದ ಕೊಲ್ಲಾಪುರ ಭೂಕಂಪನದ ಕೇಂದ್ರವಾಗಿತ್ತು.

ಹೀಗಾಗಿ ಸಿಂದಗಿ ಪಟ್ಟಣದಲ್ಲಿ ಇದು ಭೂಕಂಪನ ಎನ್ನುವ ಆತಂಕ ಜನರಲ್ಲಿ ಮನೆ ಮಾಡಿತ್ತು.

ಇದರ ಬಗ್ಗೆ ಜಿಲ್ಲಾಡಳಿತ ಪರಿಶೀಲಿಸಿ ಜನರಿಗೆ ಸತ್ಯ ತಿಳಿಸಿದರೆ, ಆತಂಕ ದೂರವಾಗುತ್ತದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದರು. ಇದೀಗ ಮತ್ತೆ ವಿಜಯಪುರದಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ.

# ನ.6ಕ್ಕೆ ದೆಹಲಿಗೆ ಸಿಎಂ

**ಸಂಜೆ ಮುಗಿಲು ನ್ಯೂಸ್, ಬೆಂಗಳೂರು**

ದೀಪಾವಳಿ ಬಳಿಕ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ನವೆಂಬರ್ 6 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ರಾಷ್ಟ್ರ ರಾಜಧಾನಿ ನವದಹಲಿಗೆ



ಭೇಟಿ ನೀಡುತ್ತಿದ್ದು, ಈ ವೇಳೆ ಉಪ ಚುನಾವಣೆಯ ಫಲಿತಾಂಶ ಕುರಿತು ಪಕ್ಷದ ವರಿಷ್ಠರಿಗೆ ವಿವರಿಸಲಿದ್ದಾರೆಂದು ಹೇಳಿದ್ದಾರೆ. ಮೂಲಗಳ ಪ್ರಕಾರ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷಕ್ಕೆ ನಿರೀಕ್ಷಿತ ಫಲಿತಾಂಶ ಬರದ ಕಾರಣ ಬಿಜೆಪಿ ದೆಹಲಿ ವರಿಷ್ಠರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆಂದು ತಿಳಿದುಬಂದಿದೆ. ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿ ವ್ಯಾಪ್ತಿಗೆ ಬರುವ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಫಲಿತಾಂಶದ ಬಗ್ಗೆ ಪಕ್ಷದ ಉನ್ನತ ನಾಯಕತ್ವ ಅಸಮಾಧಾನಗೊಂಡಿದೆ ಎಂದು ಬಿಜೆಪಿ ಮೂಲಗಳು ಪುಟ 4.

# ವ್ಯಕ್ತಿ ಬರ್ಬರ ಕೊಲೆ

**ಸಂಜೆ ಮುಗಿಲು ನ್ಯೂಸ್, ಕಲಬುರಗಿ:**

ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಗುರುವಾರ ಬೆಳ್ಳಂಬೆಳಗ್ಗೆ ಪೊಲೀಸ್ ಪೇದೆಯೊಬ್ಬರ ಮಗನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಲಾಗಿದೆ. ಅಭಿಷೇಕ್ ಎಂದಿನಂತೆ ಗುರುವಾರ ಕೂಡ ಜಿಮ್ ಗೆ ಹೋಗುವುದಾಗಿ ಮನೆಯಿಂದ ಬೈಕ್ ತೆಗೆದುಕೊಂಡು ಬಂದಿದ್ದಾನೆ. ಈ ವೇಳೆ ಏಳೆಂಟು ಜನರ ದುಷ್ಕರ್ಮಿಗಳ ತಂಡ ಆತನನ್ನು ಬೆನ್ನಟ್ಟಿದ್ದಾರೆ. ಮುಖ್ಯರಸ್ತೆಯಿಂದಲೇ ದುಷ್ಕರ್ಮಿಗಳು ಬೆನ್ನಟ್ಟಿದ್ದರಿಂದ ಬಸ್ ನಿಲ್ದಾಣದೊಳಗೆ ಅಭಿಷೇಕ್ ಓಡಿ ಬಂದಿದ್ದಾನೆ. ಆದರೂ ಸಹ ಬಿಡದೆ ದುಷ್ಕರ್ಮಿಗಳು ಬಸ್ ನಿಲ್ದಾಣದ ಆವರಣದಲ್ಲಿ ಸಾರ್ವಜನಿಕ ಎದುರೇ ಮರಕಾಸ್ತ್ರಗಳಿಂದ ಅಭಿಷೇಕ್ ಮೇಲೆ ದಾಳಿ ಮಾಡಿದ್ದಾರೆ. ಮನಸೋ ಇಚ್ಛೆ ಕೊಚ್ಚಿ, ಹತ್ಯೆ ಮಾಡಿ ಹಂತಕರು ಪರಾರಿಯಾಗಿದ್ದಾರೆ. ಈ ಭೀಕರ ದೃಶ್ಯ ಕಂಡ ಸಾರ್ವಜನಿಕರು ಬೆಚ್ಚಿ ಬಿದ್ದಿದ್ದಾರೆ.

**ಇಂದಿನ ಚಿನ್ನ-ಬೆಳ್ಳಿ ಬೆಲೆ : ಕರ್ನಾಟಕ10 ಗ್ರಾಂ ಶುದ್ಧ ಚಿನ್ನ: ರೂ.48,490/- ಅಭರಣ: ರೂ.44,450/-ಬೆಳ್ಳಿ 1 ಕೆಜಿ ಕರ್ನಾಟಕ: ರೂ.64,600/-ಮುಂಬೈ: ರೂ.64,600/-**

# ನಾವು ಕೇವಲ ಹೋರಾಟಕ್ಕೆ ಮಾತ್ರವಲ್ಲ, ರಾಜಕೀಯಕ್ಕೂ ಸೈ

**ಸಂಜೆ ಮುಗಿಲು ನ್ಯೂಸ್, ಪಿರಿಯಾಪಟ್ಟಣ :**

ರೈತ ಹಾಗೂ ಸಾಮಾಜಿಕ ಹೋರಾಟ ಮತ್ತು ಚಳುವಳಿ ಸೇರಿದಂತೆ ಸಮಾಜಕ್ಕೆ ಧ್ವನಿಯಾಗುತ್ತಿದ್ದ ರಾಜ್ಯ ರೈತ ಸಂಘ ಮುಂದಿನ ದಿನಗಳಲ್ಲಿ ರಾಜಕೀಯ ರಂಗ ಪ್ರವೇಶಿಸುವ ಮೂಲಕ ಉತ್ತಮರ ಆಯ್ಕೆಗೆ ಸಹಕಾರಿಯಾಗಲಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ರೈತ ಸಂಘದ ಸಭೆ ಹಾಗೂ ದಕ್ಷಿಣ ಪದವೀಧರ ಕ್ಷೇತ್ರದ ಬೆಂಬಲಿತ ಅಭ್ಯರ್ಥಿ ಪ್ರಸನ್ನಎನ್.ಗೌಡರ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ಉತ್ತಮರು ರಾಜಕೀಯಕ್ಕೆಬರುವ ಮೂಲಕ ಕೊಳಕಾಗಿರುವ ರಾಜಕೀಯ ಕ್ಷೇತ್ರವನ್ನು ಶುದ್ಧಿ ಮಾಡುವ ಕೆಲಸವಾಗಬೇಕಿದೆ. ಅನೇಕ ಹೋರಾಟಗಳ, ಚಳುವಳಿಗಳ ಫಲವಾಗಿ ಅನೇಕ ಕಾನೂನುಗಳು ರಚನೆಯಾಗಿವೆ ಆದರೆ ಶಾಸಕಾಂಗದಲ್ಲಿ ಹೋರಾಟಗಾರರ, ಚಳುವಳಿಗಾರರು ಆಯ್ಕೆಯಾಗಿ ಹೋದಾಗ ಮಾತ್ರ ಅಲ್ಲಿ ನಿಜವಾದ ನೊಂದವರ ಧ್ವನಿಯಾಗಲು ಸಹಾಯವಾಗುತ್ತದೆ. ಡಿ.ದೇವರಾಜೇ ಅರಸು ಕೂಡ ಸಮಾಜವಾದಿ ಚಳುವಳಿಯ ಫಲವಾಗಿಗೆ ಉಳುವವನೆ ಭೂಮಿಯ ಕಾನೂನು ಜಾರಿಮಾಡಿದ್ದರು. ರಾಜಕೀಯ ಶಕ್ತಿಗಾಗಿ ಸುಮಾರು 40 ಕ್ಕೂ ಹೆಚ್ಚು ರೈತಪರ ಸಂಘಟನೆಗಳಿಂದ ಬೆಂಬಲ ನೀಡಿ ದಕ್ಷಿಣ ಪಧವಿಧರ ಕ್ಷೇತ್ರಕ್ಕೆ ಪ್ರಸನ್ನ ಎನ್.ಗೌಡರನ್ನು ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಲಾಗಿದದ್ದು ಈಗಾಗಲೇ ನಾಲ್ಕು ಜಿಲ್ಲೆಗಳಿಂದ 10 ಸಾವಿರ ವಕೀಲರು, ಹೆಚ್ಚು ಮಂಸಿ ಶಿಕ್ಷಕರು ಹಾಗೂ ವಿವಿಧ ಹುದ್ದೆಗಳಲ್ಲಿರುವ ಅಧಿಕಾರಿಗಳು ಸೇರಿದಂತೆ ವಿದ್ಯಾವಂತ ನಿರುದ್ಯೋಗಿ ಪದವಿಧರರು ಪ್ರಸನ್ನಗೌಡರಿಗೆ ಬೆಂಬಲ ಸೂಚಿಸಿದ್ದು ಪಿರಿಯಾಪಟ್ಟಣ ತಾಲೂಕಿನಲ್ಲಿ 4 ಸಾವಿರ ಮತದಾರರ ನೋಂದಣಿ ಗುರಿ ಹೊಂದಲಾಗಿದೆ ಎಂದರು.

**ರಾಜ್ಯಾದ್ಯಂತ ಹೋರಾಟ:**

ಮುಂಬವುರ ದಿನಗಳಲ್ಲಿ ರಾಷ್ಟ್ರದಲ್ಲಿ ರೈತರ ಹೋರಾಟ ಒಂದು ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ನಂಬರ್ 26 ಕ್ಕೆ ಸಂಪೂರ್ಣ ಬಂದ್ ಆಚರಿಸಲು ನಿರ್ಧರಿಸಲಾಗಿದೆ. ಡಿಸಂಬರ್ 11 ಕ್ಕೆ ಕಿಸಾನ್ ಮಹಾಪಂಚಾಯತ್ ಆಚರಿಸಲಾಗುವುದು, 1 ವಾರಗಳಕಾಲ ಪಾದಯಾತ್ರೆ, ಜನವರಿ 26 ರಂದು 1ಲಕ್ಷ ಜನ ಸೇರಿಸಿ ಜನಾಧಿವೇಶನವನ್ನು ಕರೆಯಲಾಗುವುದು, ಇದರಲ್ಲಿ ಎಪಿಎಂಸಿ ಮುಚ್ಚುತ್ತಿರುವ ಸರಕಾರದ ಕ್ರಮ ಅದರ ಪರಿಣಾಮ, ರಾಜ್ಯ ಸರಕಾರದ ಕೃಷಿ ಭೂಮಿ ಖರೀದಿಗೆ ಅವಕಾಶ ನೀಡಿದ ಪರಿಣಾಮಗಳು ಈ ಬಗ್ಗೆ ವಿಸ್ತೃತ ಚರ್ಚೆಮಾಡಿ ನಿರ್ಣಯಗಳನ್ನು ಕೈಗೊಂಡು ಹೋರಾಟ ಮಾಡಲಾಗುವುದು ಎಂದರು.

ಅಭ್ಯರ್ಥಿ ಪ್ರಸನ್ನ ಎನ್.ಗೌಡ ಮಾತನಾಡಿ, ಜನಾಂದೋಲನದ ಎಲ್ಲಾ ಸಂಘಟನೆಗಳ ಅಭ್ಯರ್ಥಿಯಾಗಿ ನನ್ನನ್ನು ಆಯ್ಕೆ ಮಾಡಿರುವುದು ಸಂತೋಷದ ಸಂಘತಿಯಾಗಿದ್ದು ಈಗಾಗಲೆ 12 ಸಾವಿರ ಮತದಾರರ ನೋಂದಣಿಯನ್ನು ಮಾಡಲಾಗಿದೆ. ಅಲ್ಲದೆ ಎಲ್ಲಾ ಸಂಘಟನೆಗಳು ಕೂಡ ನಮಗೆ ಬೆಂಬಲ ನೀಡಿದ್ದು ಈ ಬಾರಿ ಚುನಾವಣೆಯಲ್ಲಿ ಗೆಲವು ಸಾಧಿಸುವ ವಿಶ್ವಾಸ ನಮಗಿದೆ ಎಂದರು.

ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ನೇತ್ರಾವತಿ, ತಾಲೂಕು ಅಧ್ಯಕ್ಷ ಶಿವಣ್ಣ ಶೆಟ್ಟಿ, ಪ್ರಧಾನಕಾರ್ಯದರ್ಶಿ ಸ್ವಾಮಿಗೌಡ, ಮುಖಂಡರಾದ ಸಿದ್ದೇಗೌಡ, ಪ್ರಕಾಶ್‌ರಾಜೇಅರಸ್, ಬಸವನಹಳ್ಳಿ ನಾರಾಯಣ, ಹಿಟ್ನೆಹೆಬ್ಬಾಗಿಲು ಪ್ರವೀಣ್ ಸೇರಿದಂತೆ ಮತ್ತಿತರರು ಹಾಜರಿದ್ದರು.

## ನಾಟಕವಾಡಿ ಶಾಸಕರಾದ ಮಹೇಶ್: ವ್ಯಂಗ್ಯ

**ಸಂಜೆ ಮುಗಿಲು ನ್ಯೂಸ್, ಕೆ.ಆರ್.ನಗರ:**



ಚುನಾವಣೆಯ ಸಮಯದಲ್ಲಿ ಕಣ್ಣೀರು ಹಾಕಿ ನಾಟಕ ಆಡಿದ್ದರಿಂದಲೇ ಮೂರು ಬಾರಿ ಸಾ.ರಾ. ಮಹೇಶ್‌ರವರು ಶಾಸಕರಾಗಿ ಆಯ್ಕೆಯಾಗಿದ್ದಾರೆ ಇವರ ರೀತಿ 2018ರ ಚುನಾವಣೆಯಲ್ಲಿ ನಾನು ನಾಟಕ ವಾಡಿದ್ದರೆ ಶಾಸಕನಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರ ಸಂಕಷ್ಟಕ್ಕೆ ಸ್ಪಂದಿಸುವುದನ್ನು ಶಾಸಕರಿಂದ ನಾನು ಕಲಿಯಬೇಕಾಗಿಲ್ಲ 2005ರಲ್ಲಿ ಜಿ.ಪಂ. ಸದಸ್ಯನಾಗಿದ್ದನಿಂದ ಈವರೆಗೂ ಕ್ಷೇತ್ರದ ಜನತೆಯ ಜೊತೆಯಲ್ಲಿದ್ದು ಅವರ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ ಎಂದರು.

ಪ್ರಚಾರಕ್ಕೆ ಹೋದಾಗ ಚಪ್ಪಲಿ ಎಸೆದಿದ್ದಾರೆ, ಅಡ್ಡಕಟ್ಟಿ ಹೊಡೆಯಲು ಬಂದರು, ಮತ್ತಿತರರ ಸಿಂಪತಿ ಬರುವಂತಹಾ ಸುಳ್ಳು ಅಪಪ್ರಚಾರ ಮಾಡಿ ಗೆಲುವು ಸಾಧಿಸಿರುವ ಸಾ.ರಾ.ಮಹೇಶ್ ಅವರಿಗೆ ಮಾತ್ರ ನಾಟಕ ಆಡುವುದು ಗೊತ್ತಿದೆ ಎಂದು ಟೀಕಿಸಿದ ರವಿಶಂಕರ್ ನಮ್ಮ ಕುಟುಂಬ ರಾಜಕೀಯ ಹಿನ್ನಲೆಯಿಂದ ಬಂದಿದ್ದು ನಮ್ಮ ತಂದೆಯವರು ಕಾಂಗ್ರೆಸ್ ಪಕ್ಷದ ಮುಖಂಡರಾಗಿ ಕೆಲಸ ಮಾಡಿರುವುದರ ಜತೆಗೆ ಒಂದು ಬಾರಿ ನನ್ನ ಸೋದರತ್ತೆಯವರು ಜಿ.ಪಂ. ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ನನ್ನ ಸೇವೆಯನ್ನು ಪರಿಗಣಿಸಿರುವ ಕ್ಷೇತ್ರದ ಜನತೆ 2018ರ ಚುನಾವಣೆಯಲ್ಲಿ ತಮ್ಮಗೆ ಸರಿಸಮನಾಗಿ ಮತ ನೀಡಿದ್ದಾರೆ ಅದಕ್ಕಾಗಿ ಜನತೆಯ ಋಣ ತೀರಿಸುವ ಉದ್ದೇಶದಿಂದ ಕೈಲಾಗುವ ಸೇವೆ ಸಲ್ಲಿಸುತ್ತಿದ್ದು ಕೊರೋನಾ ಸಂಕಷ್ಟ ಸಂದರ್ಭದಲ್ಲಿ ಔಷಧಿ ಕಿಟ್, ಫುಡ್‌ಕಿಟ್ ಮತ್ತು ಅಂಬುಲೆನ್ಸ್ ಸೇರಿದಂತೆ ಇತರ ಆರೋಗ್ಯ ಸೇವೆ ನೀಡುವ ಮೂಲಕ ಜನರ ಕಷ್ಟಕ್ಕೆ ಸ್ಪಂದಿಸಿದ್ದೇನೆ ಎಂದು ಹೇಳಿದರು.

ಶಾಸಕರು ಅಭಿವೃದ್ಧಿ ವಿಷಯವನ್ನು ಇಟ್ಟುಕೊಂಡು ಚುನಾವಣೆ ಎದುರಿಸುವುದರ ಜತೆಗೆ ರಾಜಕಾರಣ ಮಾಡಲಿ ಇಲ್ಲ ಸಲ್ಲದ ಆರೋಪ ಮಾಡುವುದು ಅವರಿಗೆ ಶೋಭೆ ತರುವುದಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಪುರಸಭೆ ಅಧ್ಯಕ್ಷ ಕೆ.ಜಿ.ಸುಬ್ರಮಣ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ವಕ್ಕಾರ ಸೈಯದ್‌ಜಾಬೀರ್, ನಗರಾಧ್ಯಕ್ಷ ಎಂ.ಜೆ.ರಮೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್, ಮುಖಂಡರಾದ ಪ್ರದೀಪ್, ಶ್ರೀಕಾಂತ್, ನವೀನ್, ಜಿ.ಎಲ್.ಧರ್ಮ, ವಕೀಲ ಮೂರ್ತಿ ಇದ್ದರು.

## ಹಿಟ್ನೆ ಹೆಬ್ಬಾಗಿಲು ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ



**ಸಂಜೆ ಮುಗಿಲು ನ್ಯೂಸ್, ಪಿರಿಯಾಪಟ್ಟಣ:**

ತಾಲ್ಲೂಕಿನ ಹಿಟ್ನೆಹೆಬ್ಬಾಗಿಲು ಸರ್ಕಾರಿ ಪ್ರೌಢಶಾಲೆಯಲ್ಲಿ 66ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಾಗೂ ಇತ್ತೀಚಿಗೆ ನಿಧನರಾದ ಕನ್ನಡ ಚಿತ್ರರಂಗದ ಉದಯೋನ್ಮುಖ ನಟ ದಿವಂಗತ ಪುನೀತ್ ರಾಜ್‌ಕುಮಾರ್ ರವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಮದ ಯಜಮಾನ ಜಯಶಂಕರ್, ಗ್ರಾ.ಪಂ.ಸದಸ್ಯ ಕಾಮರಾಜು, ಶಾಲಾ ಮುಖ್ಯಶಿಕ್ಷಕ ಶ್ರೀನಿವಾಸ್, ಎಸ್.ಡಿ.ಎಂ.ಸಿ ಅಧ್ಯಕ್ಷ ಮಹದೇವ್, ಶಾಲಾ ವಿದ್ಯಾರ್ಥಿಗಳು ಹಾಗೂ ಮಂತ್ರಿಮಂಡಲದ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಹಾಜರಿದ್ದರು.

## ಸಿ.ಕೆ.ರಾಮೇಗೌಡ ಬಿರುಸಿನ ಪ್ರಚಾರ

**ಸಂಜೆ ಮುಗಿಲು ನ್ಯೂಸ್, ಕೆ.ಆರ್.ಪೇಟೆ:**

ಇದೇ ನವೆಂಬರ್ 21 ರಂದು ನಡೆಯಲಿರುವ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿಯಾದ ಕನ್ನಡ ಜನ ಶಕ್ತಿ ಕೇಂದ್ರದ ಅಧ್ಯಕ್ಷರಾದ ಸಿ.ಕೆ.ರಾಮೇಗೌಡ ಅವರು ಕೆ.ಆರ್.ಪೇಟೆ ತಾಲ್ಲೂಕಿನ ವಿವಿಧೆಡೆ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರನ್ನು ಭೇಟಿ ಮಾಡಿ ಬಿರುಸಿನ ಪ್ರಚಾರ ನಡೆಸಿದರು.



ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಸಾಹಿತಿ ಡಾ.ವಿರೂಪಾಕ್ಷ ರಾಜಯೋಗಿ, ಜಿಲ್ಲಾ ರೈತಸಂಘದ ಅಧ್ಯಕ್ಷ ಕೆಂಪೂಗೌಡ, ಉಪಾಧ್ಯಕ್ಷ ಮರುವನಹಳ್ಳಿ ಶಂಕರ್, ಶಿಕ್ಷಣ ತಜ್ಞ ವಿಠಲಾಪುರ ಜಯರಾಂ, ನೋಟರಿ ವಕೀಲ ಬಂಡಿಹೊಳೆ ಗಣೇಶ್, ತಾಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅರವಿಂದ್ ಕಾರಂತ್, ತಾಲ್ಲೂಕು ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಬೇಲದಕೆರೆ ಚನ್ನೇಗೌಡ, ಕಸಾಪ ಮಾಜಿ ಅಧ್ಯಕ್ಷರಾದ ಕೆ.ಎಸ್.ಸೋಮಶೇಖರ್, ಕೆ.ಕಾಳೇಗೌಡ, ಎಂ.ಕೆ.ಹರಿಚರಣತಿಲಕ್, ಕೆ.ಆರ್.ನೀಲಕಂಠ, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ಚಾ.ಶಿ.ಜಯಕುಮಾರ್ ಮತ್ತಿತರರನ್ನು ಖುದ್ದು ಬೇಟಿ ಮಾಡಿ ಮತಯಾಚನೆ ಮಾಡಿದ ಸಿ.ಕೆ.ರಾಮೇಗೌಡ ಅವರು ರಾಜ್ಯಾಧ್ಯಂತ ಹಾಗೂ ಗಡಿ ನಾಡು ಪ್ರದೇಶಗಳಿಗೆ ಬೇಟಿ ನೀಡಿ ಮತಯಾಚನೆ ಮಾಡಿದ್ದು ಎಲ್ಲಾ ಕಡೆ ಉತ್ತಮ ಪ್ರತಿಕ್ರಿಯೆ ಹಾಗೂ ಅಭೂತಪೂರ್ವ ಬೆಂಬಲವು ಸಾಹಿತ್ಯಪರಿಷತ್ ಸದಸ್ಯರಿಂದ ವ್ಯಕ್ತವಾಗುತ್ತಿದೆ. ಅದೇ ರೀತಿ ಮಂಡ್ಯ ಜಿಲ್ಲೆಯಲ್ಲಿಯೂ ಅತಿ ಹೆಚ್ಚಿನ ಬೆಂಬಲ ಸಿಕ್ಕಿದೆ. ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ.ಜಯಪ್ರಕಾಶಗೌಡ ಅವರ ಸಂಪೂರ್ಣ ಬೆಂಬಲ ನನಗೆ ಸಿಕ್ಕಿದೆ. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿಯಾಗಿ, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷನಾಗಿ ಕನ್ನಡದ ಕೆಲಸ ಮಾಡಿರುವ ನನಗೆ ಸಮಸ್ತ ಕನ್ನಡಿಗರ ಗಟ್ಟಿ ಧ್ವನಿಯಾಗಿ ಕೇಂದ್ರ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿ ಸೇವೆ ಮಾಡಲು ಎಂದು ಅವಕಾಶ ಒದಗಿಸಿಕೊಡಬೇಕೆಂದು ಜಿಲ್ಲೆಯ ಕಸಾಪ ಆಜೀವ ಸದಸ್ಯರಲ್ಲಿ ಸಿ.ಕೆ.ರಾಮೇಗೌಡ ಮನವಿ ಮಾಡಿದರು.

ಮತಯಾಚನೆ ಸಂದರ್ಭದಲ್ಲಿ ಯುವ ಬರಹಗಾರರ ಒಕ್ಕೂಟದ ಅಧ್ಯಕ್ಷ ಸತೀಶ್ ಜವರೇಗೌಡ, ತಾಲ್ಲೂಕು ಜಾನಪದ ಪರ್ರಿಷತ್ ಅಧ್ಯಕ್ಷ ಕೆ.ಎಸ್.ಸೋಮಶೇಖರ್, ಕಸಾಪ ಮಾಜಿ ಅಧ್ಯಕ್ಷರಾದ ಕೆ.ಕಾಳೇಗೌಡ, ಡಾ.ಕೆ.ಆರ್.ನೀಲಕಂಠ, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ರೈತ ನಾಯಕರಾದ ಕೆಂಪೂಗೌಡ, ಮರುವನಹಳ್ಳಿ ಶಂಕರ್, ಮಂದಗೆರೆ ಜಯರಾಂ, ವಿಠಲಾಪುರ ಜಯರಾಂ, ಯುವ ಸಾಹಿತಿ ಮೊಹಮದ್ ಅಜರುದ್ದೀನ್, ಮರುಕನಹಳ್ಳಿ ಸಹನಾ ಮತ್ತಿತರರು ಭಾಗವಹಿಸಿದ್ದರು.

1ನೇ ಪುಟದಿಂದ

## ದೀಪಾವಳಿ ಬಂಪರ್

ಆದರೆ ಸದ್ಯ ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್‌ಗೆ 113.93 ರೂ. ದರವಿದೆ. ಡೀಸೆಲ್ ದರ ಲೀಟರ್‌ಗೆ 104.50 ರೂ. ಇದೆ. "ರಾಜ್ಯ ಸರಕಾರದ ಈ ನಿರ್ಧಾರ ಇಂದು ಸಾಯಂಕಾಲದಿಂದ ಅನ್ವಯವಾಗುವುದು. ಇದು ಕೇಂದ್ರ ಮತ್ತು ರಾಜ್ಯ ಸರಕಾರದಿಂದ ರಾಜ್ಯದ ಜನತೆಗೆ ದೀಪಾವಳಿಯ ಉಡುಗೊರೆ. ಸರ್ವರಿಗೂ ದೀಪಾವಳಿಯ ಹಾರ್ದಿಕ ಶುಭಾಶಯಗಳು," ಎಂದು ಮುಖ್ಯಮಂತ್ರಿ ಟ್ವೀಟ್ ಮಾಡಿದ್ದಾರೆ. ಜತೆಗೆ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರಕಾರ ಡೀಸಲ್ ಮೇಲೆ 10 ರೂ. ಹಾಗೂ ಪೆಟ್ರೋಲ್ ಮೇಲೆ 5 ರೂ. ಅಬಕಾರಿ ಸುಂಕ ಕಡಿಮೆ ಗೊಳಿಸಿದ್ದು ಸ್ವಾಗತಾರ್ಹ. ಜನರಿಗೆ ದೀಪಾವಳಿಯ ಉಡುಗೊರೆ ಕೊಟ್ಟಿದ್ದಾರೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಿಎಂ ಬೊಮ್ಮಾಯಿ ಅಭಿನಂದನೆ ಸಲ್ಲಿಸಿದ್ದಾರೆ.



## ಮೂವರು ದುರ್ಮರಣ

**ಸೈಟ್ ಮಾಲೀಕನ ನಿರ್ಲಕ್ಷ್ಯ? :**
ಅಲ್ಲಿಂದ ಸೀದಾ ಹೇರ್ ಕಟ್ಟಿಂಗ್ ಶಾಪ್ ಗೆ ಹೋಗಿದ್ರೆ ಪಾಪ ಜೀವ ಉಳಿತಿತ್ತು ಆದ್ರೆ ವಿಧಿ ಆಟ ಯಾರ ಬಲ್ಲವರು ಹೇಳಿ ಸಾವು ಆತನನ್ನ ಹೊಂಡಕ್ಕೆ ಕರ್ಕೊಂಡು ಹೋಗಿದೆ. ಮೂರು ಜನ ಸ್ನೇಹಿತರು ನೀರಿನ ಆಳ ಅರಿಯದೆ ಹೊಂಡಕ್ಕೆ ಬಿದ್ದು ದುರಂತ ಅಂತ್ಯ ಕಂಡಿದ್ದಾರೆ. ಇನ್ನು ಮನೆ ಮಾಲೀಕ ಅಷ್ಟೊಂದು ಆಳ ಅಗೆದು ಅದಕ್ಕೆ ಸೇಫ್ಟ್ ಪ್ರೀಕಾಶನ್ ತಗೆದುಕೊಂಡಿದ್ರೆ ಈ ದುರಂತ ಆಗ್ತಾ ಇಲ್ಲಿಲ್ಲ. ಸೈಟ್ ಮಾಲೀಕನ ನಿರ್ಲಕ್ಷ್ಯ ಕ್ಕೆ ತಮ್ಮ ಮಕ್ಕಳು ಬಲಿ ಆಗಿದ್ದಾರೆ ಅಂತ ಪೋಷಕರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

**ಹೆತ್ತವರು ಇಲ್ಲದ ಹುಡುಗನ ದುರ್ಮರಣ:** ಮೃತಪಟ್ಟ ಮೂವರು ಬಾಲಕರ ಪೈಕಿ ಪ್ರಶಾಂತ ತಂದೆ ತಾಯಿಯಿಲ್ಲದ ಬಾಲಕ. ಅಕ್ಕನ ಮನೆಯಲ್ಲಿ ಇದ್ದ ಬಾಲಕ ಶಾಲೆಗೆ ಹೋಗುತ್ತಿದ್ದ. ಆದರೆ ಇಂದು ರಜೆ ಇದ್ದ ಕಾರಣ ಬಡಾವಣೆಯ ಮೂವರು ಬಾಲಕರು ಪಕ್ಕದ ನಿರ್ಮಾಣ ಹಂತದ ಮನೆಯ ಬುನಾದಿಗೆ ಇಳಿದಿದ್ದಾರೆ.. ನೀರಿನ ಆಳ ಲೆಕ್ಕಿಸದೇ ನೀರಿಗಿಳಿದ ಬಾಲಕರು ಬಾರದ ಲೋಕಕ್ಕೆ ಹೋಗಿದ್ದರಿಂದ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ.

## ಟೀಂ ಇಂಡಿಯಾದ ಮುಖ್ಯ ಕೋಚ್ ಆಗಿ ಕನ್ನಡಿಗ

ದ್ರಾವಿಡ್ 2023ರ ವಿಶ್ವಕಪ್ ವರೆಗೆ ಕೋಚ್ ಆಗಿ ಇರಲಿದ್ದಾರೆ. ದ್ರಾವಿಡ್ ಅವರನ್ನು 2023ರಲ್ಲಿ ಭಾರತದಲ್ಲಿ ನಡೆಯಲಿರುವ 50 ಓವರ್‌ಗಳ ವಿಶ್ವಕಪ್‌ವರೆಗೆ ಎರಡು ವರ್ಷಗಳ ಕಾಲ ಈ ಹುದ್ದೆಗೆ ನೇಮಿಸಲಾಗಿದೆ. ದ್ರಾವಿಡ್ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರ ಮೊದಲ ಆಯ್ಕೆಯಾಗಿದ್ದು, ಅವರು ದುಬೈನಲ್ಲಿ ಅವರೊಂದಿಗೆ ಮಾತನಾಡಿ ಹುದ್ದೆಗೆ ಅರ್ಜಿ ಸಲ್ಲಿಸುವಂತೆ ಮನವೊಲಿಸಿದರು. ದ್ರಾವಿಡ್ ಅರ್ಜಿ ಸಲ್ಲಿಸಿದ ಬಳಿಕ ಬಿಸಿಸಿಐ ಬೇರೆ ಯಾವುದೇ ಅರ್ಜಿಯನ್ನು ಪರಿಶೀಲಿಸುವ ಅಗತ್ಯವಿರಲಿಲ್ಲ.

ಬಿಸಿಸಿಐ ಪತ್ರಿಕಾ ಪ್ರಕಟಣೆಯ ಪ್ರಕಾರ, 'ಕ್ರಿಕೆಟ್ ಸಲಹಾ ಸಮಿತಿಯು ಬುಧವಾರ ಅವಿರೋಧವಾಗಿ ರಾಹುಲ್ ದ್ರಾವಿಡ್ ಅವರನ್ನು ಟೀಮ್ ಇಂಡಿಯಾದ ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ. ಈ ಸಮಿತಿಯಲ್ಲಿ ಸುಲಕ್ಷಣ ನಾಯಕ್ ಮತ್ತು ಆರ್ ಪಿ ಸಿಂಗ್ ಇದ್ದಾರೆ.

**ಮುಖ್ಯ ಕೋಚ್ ಆಗಿ ನೇಮಕವಾಗಿರುವುದು ಗೌರವ:** ದ್ರಾವಿಡ್
ಅದೇ ವೇಳೆ ಭಾರತ ತಂಡದ ಮುಖ್ಯ ಕೋಚ್ ಆದ ಬಳಿಕ ದ್ರಾವಿಡ್, ಭಾರತ ಕ್ರಿಕೆಟ್ ತಂಡದ ನೂತನ ಮುಖ್ಯ ಕೋಚ್ ಆಗಿ ನೇಮಕಗೊಂಡಿರುವುದು ದೊಡ್ಡ ಗೌರವವಾಗಿದ್ದು, ಈ ಜವಾಬ್ದಾರಿಗೆ ನಾನು ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ. ಪ್ರಸ್ತುತ ಭಾರತ ತಂಡವನ್ನು ಈ ಹಂತಕ್ಕೆ ಕೊಂಡೊಯ್ಯುವಲ್ಲಿ ಅವರ ಪಾತ್ರಕ್ಕಾಗಿ ಅವರು ತಮ್ಮ ಹಿಂದಿನ ಶಾಸ್ತ್ರಿ ಅವರಿಗೆ ಧನ್ಯವಾದ ಅರ್ಪಿಸಿದರು.

## ನ.6ಕ್ಕೆ ದೆಹಲಿಗೆ ಸಿಎಂ

ಹೀಗಾಗಿ ಬೊಮ್ಮಾಯಿಯವರು ಹಾನಗಲ್ ಸೋಲಿಗೆ ಕಾರಣಗಳನ್ನು ವರಿಷ್ಠರಿಗೆ ವಿವರಿಸುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ. ಜುಲೈ 26 ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನವದೆಹಲಿಗೆ ಭೇಟಿ ನೀಡುತ್ತಿರುವುದು ಇದು 5ನೇ ಬಾರಿಯಾಗಿದೆ. ಈ ನಡುವೆ ಮುಖ್ಯಮಂತ್ರಿಯಾಗಿ ಬೊಮ್ಮಾಯಿಯವರು ಗುರುವಾರ ಮೊದಲ ನೂರು ದಿನಗಳನ್ನು ಪೂರೈಸುತ್ತಿದ್ದು, ದೆಹಲಿ ಭೇಟಿ ವೇಳೆ ಬೊಮ್ಮಾಯಿಯವರು 100 ದಿನಗಳ ಆಡಳಿತ ಪ್ರಗತಿ ಕಾರ್ಯಗಳ ಕುರಿತು ವರಿಷ್ಠರಿಗೆ ವರದಿ ನೀಡಲಿದ್ದಾರೆಂದು ತಿಳಿದುಬಂದಿದೆ. ಕಾರ್ಯಕಾರಿಣಿ ಸಭೆಯಲ್ಲಿ ಕೇವಲ ಬೊಮ್ಮಾಯಿ ಮಾತ್ರವಷ್ಟೇ ಅಲ್ಲದೆ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿಟಿ ರವಿ ಕೂಡ ಭಾಗವಹಿಸಲಿದ್ದಾರೆ. ಪಕ್ಷವು ನವೆಂಬರ್ 8 ರಿಂದ ಬೆಂಗಳೂರಿನಲ್ಲಿ ಪರಿಶೀಲನಾ ಸಭೆಯನ್ನು ನಡೆಸಲಿದ್ದು, ಈ ವೇಳೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಉಸ್ತುವಾರಿ ಅರುಣ್ ಸಿಂಗ್ ಅವರು ಪಕ್ಷದ ಪದಾಧಿಕಾರಿಗಳನ್ನು ಭೇಟಿ ಮಾಡಿ ಉಪಚುನಾವಣೆ ಫಲಿತಾಂಶಗಳನ್ನು ಪರಿಶೀಲಿಸಲಿದ್ದಾರೆಂದು ಮೂಲಗಳು ತಿಳಿಸಿವೆ.

## ಕಾನ್‌ಸ್ಟೇಬಲ್ ಪರೀಕ್ಷೆ ಅಕ್ರಮ: ಸಿಐಡಿಗೆ ತನಿಖೆ

ಈ ಪರೀಕ್ಷಾರ್ಥಿಗಳು ಬ್ಲೂಟೂತ್ ಬಳಸಿ ಪ್ರಶ್ನೆ ಪತ್ರಿಕೆ ಮಾಹಿತಿಯನ್ನು ತಮ್ಮ ತಂಡಕ್ಕೆ ರವಾನೆ ಮಾಡಿದ್ದು, ಅವರಿಂದ ಉತ್ತರ ಪಡೆದುಕೊಂಡು ಬರೆಯುತ್ತಿದ್ದರು. ಈ ಬಗ್ಗೆ ಪೊಲೀಸರು ಖಚಿತ ಮಾಹಿತಿ ಪಡೆದು ದಾಳಿ ನಡೆಸಿದ್ದರು. ಈ ವೇಳೆ 12 ಜನರನ್ನು ಸಿಕ್ಕಿಬಿದ್ದಿದ್ದು, 33 ಮೊಬೈಲ್, 9 ಮಾಸ್ಟರ್ ಕಾರ್ಡ್ ಡಿವೈಸ್, 13 ಬ್ಲೂಟೂತ್, ಮೂರು ಟ್ಯಾಬ್, ಒಂದು ಲ್ಯಾಪ್ ಟಾಪ್ ವಶಕ್ಕೆ ಪಡೆದುಕೊಂಡಿದ್ದರು. ಈ ವೇಳೆ ಪೊಲೀಸರು ಇಬ್ಬರು ಪರೀಕ್ಷಾರ್ಥಿಗಳನ್ನು ಬಂಧಿಸಿದ್ದರು. ಪ್ರಕರಣದಲ್ಲಿ ಓರ್ವ ಪೊಲೀಸ್ ಪೇದೆ ಕೈವಾಡ ಇದೆ ಎಂಬ ಶಂಕೆ ವ್ಯಕ್ತವಾಗುತ್ತಿದೆ. ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲು ರಾಜ್ಯ ಗೃಹ ಇಲಾಖೆ ಆದೇಶ ನೀಡಿದ್ದು, ಸರ್ಕಾರ ಪೊಲೀಸ್ ಪೇದೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಕಲು ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದೆ.

## ಬಿ ಪ್ಯಾಕ್ ವತಿಯಿಂದ ದೀಪಾವಳಿಗೆ ಸ್ವೀಟ್ ಬಾಕ್ಸ್ ವಿತರಣೆ

**ಸಂಜೆ ಮುಗಿಲು ನ್ಯೂಸ್, ಪೀಣ್ಯ ದಾಸರಹಳ್ಳಿ**

ಎಲ್ಲಾ ಪೌರ ಕಾರ್ಮಿಕರಿಗೆ ದೀಪಾವಳಿ ಅವರ ಬಾಳಿನಲ್ಲಿ ನವ ಚೈತನ್ಯ ತರಲಿ ಹರುಷ ನೆಮ್ಮದಿ ಹಾಗೂ ದೀಪದಂತೆ ನಿಮ್ಮ ಬಾಳು ಪ್ರಕಾಶಮಾನವಾಗಿ ಬೆಳಗಲಿ ಭವಿಷ್ಯ ಉಜ್ವಲವಾಗಲಿ ಎಂದು ಉಮೇಶ್ ಬೋರೇಗೌಡ ಹೇಳಿದರು. ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದ ಹೆಗ್ಗನಹಳ್ಳಿ ವಾರ್ಡ್ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಆವರಣದಲ್ಲಿ ಬಿಬಿಎಂಪಿ ಪೌರಕಾರ್ಮಿಕರಿಗೆ ಬಯೋಕಾನ್ ಸಂಸ್ಥೆಯ ಅಧ್ಯಕ್ಷೆ ಕಿರಣ್ ಮಜುಂಧಾರ್ ಷಾ ಅವರ ನೇತೃತ್ವದಲ್ಲಿ ಬಿ-ಪ್ಯಾಕ್ ವತಿಯಿಂದ ದೀಪಾವಳಿ ಪ್ರಯುಕ್ತ ಸಿಹಿಪೊಟ್ಟಣಗಳನ್ನು ವಿತರಿಸಿದರು. ಈ ವೇಳೆ ಉಮೇಶ್ ಬೋರೇಗೌಡ, ಏರ್ ಟೆಲ್ ಸೋಮಣ್ಣ, ಡಿಬಿ ಸುಕೀರ್ತಿ ,ರಮೇಶ್, ಜಗದೀಶ್, ಅನಂದ್ ಶೆಟ್ಟಿಕೆರೆ, ಜಾನಪದ ಗಾಯಕ ಟಿ.ರಾಮಚಂದ್ರ, ಪ್ರಕಾಶ್, ರಾಜು ಮತ್ತಿತರರು ಭಾಗವಹಿಸಿದ್ದರು.



# ಕೊರೋನಾ ಲಸಿಕೆ ವಿತರಣೆಯಲ್ಲಿ ಭಾರತ ಮುಂದು

**ಸಂಜೆ ಮುಗಿಲು ನ್ಯೂಸ್, ಮಾಲೂರು:**

ವಿಶ್ವದಲ್ಲಿ ಎರಡು ಬಾರಿ ಕೊರೋನ ಮಾರಿ ಆವರಿಸಿತ್ತು ಅದರಲ್ಲಿ ಲಕ್ಷಾಂತರ ಜನರ ಅಸು ನೀಗಿದರು. ನಂತರ ಕೋರೋನ ಕಾಯಿಲೆಗೆ ಔಷಧಿ ಕಂಡು ಹಿಡಿಯಲು ಅನೇಕ ರಾಷ್ಟ್ರಗಳು ಮುಂದೆ ಬಂದು ತಯಾರಿಸಲು ಸಿದ್ಧತೆ ನಡೆಸಿದ್ದವು. ಅದರಲ್ಲಿ ನಮ್ಮ ಭಾರತ ದೇಶವು ಒಂದಾಗಿತ್ತು. ಭಾರತವು ಲಸಿಕೆಗಳ ತಯಾ–ರಿಕೆಯಲ್ಲಿ ಮುಂಚೂಣಿಗೆ ಬಂತು ಅದರಂತೆಯೇ 130 ಕೋಟಿ ಜನರಿರುವ ದೇಶದಲ್ಲಿ 100 ಕೋಟಿಗೂ ಅಧಿಕ ಮಂದಿಗೆ ಎರಡು ಬಾರಿ 2 ಡೋಸ್ ಲಸಿಕೆ ಹಾಕಿ ವಿಶ್ವವೇ ಭಾರತದತ್ತ ನೋಡುವಂತೆ ಪ್ರಧಾನಿ ಮೋದಿ ಮಾಡಿದ್ದಾರೆಂದು ಕೋಲಾರ ಸಂಸದ ಎಸ್.ಮುನಿಸ್ವಾಮಿ ತಿಳಿಸಿದರು.

ಅವರು ಟೇಕಲ್‌ನಲ್ಲಿ ಭಾರತೀಯ ಜನತಾ ಪಕ್ಷ ಏರ್ಪಡಿಸಿದ್ದ ಬೂತ್ ಮಟ್ಟದ ಸಮಿತಿ ಕಾರ್ಯಕರ್ತರಿಗೆ ತಲಾ ಒಂದು ಮೂಟೆ (25ಕೆ.ಜಿ) ಯಂತೆ ಬುಲೆಟ್ ಅಕ್ಕಿಯನ್ನು ವಿತರಿಸಿ ಮಾತನಾಡುತ್ತಿದ್ದರು. ಮುಂಬರುವ ದಿನಗಳಲ್ಲಿ ಪಕ್ಷದ ಕಾರ್ಯಕರ್ತರು ಹುಮ್ಮಸ್ಸಿನಿಂದ ಕೆಲಸ ಮಾಡಿ ತಾ.ಪಂ., ಜಿ.ಪಂ.ನಿಂದ ಹಿಡಿದು ಲೋಕಸಭೆವರೆಗೂ ಚುನಾವಣೆಯಲ್ಲಿ ಭಾಜಪ ಅಭ್ಯರ್ಥಿಗಳನ್ನುಗೆಲ್ಲಿಸಲು ಶ್ರಮವಹಿಸಿ ಕೆಲಸ ಮಾಡಬೇಕೆಂದರು.

ರಾಜ್ಯದಲ್ಲಿನ ಗ್ರಾಮ ಪಂಚಾಯ್ತಿಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಕೇಂದ್ರ ಸರ್ಕಾರದಿಂದ ಬರುತ್ತಿರುವ ಅನುದಾನವೇ ಪಂಚಾಯ್ತಿಗಳಿಗೆ ಜೀವದಾನವಾಗಿದೆ. 15ನೇ ಹಣಕಾಸಿನ ಯೋಜನೆಯಲ್ಲಿ ಈ ಹಿಂದೆ ನೀಡುತ್ತಿದ್ದ ಅನುದಾನಕ್ಕಿಂತಲೂ ಮೂರು ಪಟ್ಟು ಹೆಚ್ಚು ಹಣ ಕೇಂದ್ರದಿಂದಲೇ ಬರುತ್ತಿದೆ. ಇದರ ಬಗ್ಗೆ ಅರಿವಿಲ್ಲದವರು ನನ್ನ ಅನುದಾನವೆಂದು ಹಳ್ಳಿಗಳಲ್ಲಿ ಜನರಿಗೆ ಮಂಕು ಬೂದಿ ಎರಚುತ್ತಿದ್ದಾರೆ.

ಕೋಲಾರ–ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್‌ನಿಂದ ನೀಡುತ್ತಿರುವ ಮಹಿಳಾ ಸ್ವಸಹಾಯ ಸಂಘಗಳಿಗೆ ಮತ್ತು ಸಣ್ಣ ರೈತರಿಗೆ ಬೆಳೆ ಸಾಲದ ಹಣವನ್ನು ನಬಾರ್ಡ್ ಬ್ಯಾಂಕ್‌ನಿಂದ ಅಫೆಕ್ಸ್ ಬ್ಯಾಂಕಿಗೆ, ಅಪೆಕ್ಸ್ ಬ್ಯಾಂಕಿನಿಂದ ಡಿಸಿಸಿ ಬ್ಯಾಂಕಿಗೆ ನೀಡಲಾಗಿದೆ. ಇದನ್ನು ಬ್ಯಾಂಕಿನ ಅಧ್ಯಕ್ಷರು ಮತ್ತು ಸ್ಥಳೀಯ ಶಾಸಕರು ಪ್ರೋಟೋಕಾಲ್ ಪ್ರಕಾರ ವಿತರಣೆ ಮಾಡದೆ ಸರ್ವಾಧಿಕಾರಿ ಧೋರಣೆಯಂತೆ ನಾವೇ ನೀಡುತ್ತಿದ್ದೇವೆ ಎಂದು ಸಭೆಗಳಲ್ಲಿನ ವೇದಿಕೆಗಳಲ್ಲಿ ಮಾತನಾಡುತ್ತಾರೆ. ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಗಳನ್ನು ಬ್ಯಾಂಕ್ ಮುಖ್ಯಸ್ಥರು (ಅಧಿಕಾರಿಗಳು) ಬಯಲಿಗೆಳೆದರೆ ಅವರನ್ನು ಇಲ್ಲಿಂದ ವರ್ಗಾಯಿಸುತ್ತಾರೆ. ಇದರಿಂದ ತಿಳಿಯುತ್ತದೆ ಡಿಸಿಸಿ ಬ್ಯಾಂಕಿನಲ್ಲಿ ಭ್ರಷ್ಟಾಚಾರ ಇದೆ ಎಂದರು.




ಮಾಲೂರು ತಾಲ್ಲೂಕಿನಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ನಡೆಯುತ್ತಿದ್ದು ಇದಕ್ಕೂ ಕೇಂದ್ರ ಸರ್ಕಾರದ ಹಣ ಮತ್ತು ಹಿಂದಿನ ಶಾಸಕರ ಅನುಮೋದನೆ ಮೇರೆಗೆ ಕಾಮಗಾರಿ ನಡೆಯುತ್ತಿದೆ ಎಂದರು. ಈಗಿನ ಶಾಸಕರ ಅನುದಾನ ಬಿಡುಗಡೆಯಾಗಿದ್ದರೆ ಬಹಿರಂಗ ಪಡಿಸಲಿ ಎಂದರು. ಪತ್ರಕರ್ತ ನಿಷ್ಪಕ್ಷವಾಗಿ ವಸ್ತು ನಿಷ್ಟ ವರದಿ ಮಾಡಿದರೆ ಭ್ರಷ್ಟಾಚಾರ ತಡೆಗಟ್ಟಬಹುದು ತಪ್ಪಿತಸ್ಥರನ್ನು ಕಂಡು ಹಿಡಿಯಲು ಸಾಧ್ಯವಾಗುತ್ತದೆ ಎಂದರು. ಮಾಲೂರು ತಾಲ್ಲೂಕಿನಲ್ಲಿ ಮುಂದಿನ ದಿನಗಳಲ್ಲಿ ಬಿಜೆಪಿ ಕಾರ್ಯಕರ್ತರು ವಿರೋಧ ಪಕ್ಷಗಳ ನಾಯಕರ ಮಾತಿಗೆ ಮರುಳಾಗದೆ ಆಮಿಷಗಳಿಗೆ ಒಳಗಾಗದೆ ನಿಷ್ಠೆಯಿಂದ ಕೆಲಸ ಮಾಡಿದರೆ ಮಾಲೂರಿನಲ್ಲಿ ಭಾಜಪ ಶಾಸಕರನ್ನು ಗೆಲ್ಲಿಸಲು ಸುಲಭವಾಗುತ್ತದೆ ಎಂದರು.

**ಹಿರಿಯರನ್ನು ಕಡೆಗಣಿಸಿದ ಸಿದ್ದರಾಮಯ್ಯ :** ಪ.ಜಾತಿ. ಪ.ಪಂಗಡ, ಅಲ್ಪಸಂಖ್ಯಾತರು ಜೊತೆಗೆ ಹಿಂದುಳಿದ ವರ್ಗಗಳ ಮತಗಳನ್ನು ಪಡೆದು ಈ ಹಿಂದೆ ಕಾಂಗ್ರೆಸ್ ಪಕ್ಷ ಆಡಳಿತ ನಡೆಸಿದ್ದು ಆ ಜನಾಂಗಗಳಿಗೆ ಯಾವುದೇ ಸೌಲಭ್ಯ ಕಲ್ಪಿಸಿಲ್ಲ. ಅವರನ್ನು ಓಟ್ ಬ್ಯಾಂಕ್ ಆಗಿ ಉಪಯೋಗಿಸಿಕೊಂಡರು. ಇತ್ತೀಚೆಗೆ ಸಿದ್ದರಾಮಯ್ಯನವರು ಅಹಿಂದ ಮೂಲಕ ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿಯಾದರು ಆದರೆ ಅವರು ಪಕ್ಷಕ್ಕಾಗಿ ದುಡಿದು ಹಿರಿಯ ಧುರೀಣರನ್ನು ಜೊತೆಗೆ ಮೂಲ ಕಾಂಗ್ರೆಸ್ಸಿಗರನ್ನು ಬದಿಗೊತ್ತಿ ಮುಖ್ಯಮಂತ್ರಿಯಾದು. ಕಾಂಗ್ರೆಸ್ ಪಕ್ಷದ ಸಿದ್ಧಾಂತ ಸರಿಯೇ ಎಂದು ಕಾಂಗ್ರೆಸ್ಸಿಗೆ ತಿರುಗೇಟು ನೀಡಿದರು.

ತಾಲ್ಲೂಕು ಬಿಜೆಪಿ ಅಧ್ಯಕ್ಷ ಪುರ ನಾರಾಯಣ ಸ್ವಾಮಿ ಕೋರೊನಾ ಸಂದರ್ಭದಲ್ಲಿ ಭಾಜಪ ಕಾರ್ಯಕರ್ತರು ಹಳ್ಳಿಗಳಲ್ಲಿ ಶ್ರಮವಹಿಸಿ ಆರೋಗ್ಯದ ಅರಿವು ಮೂಡಿಸಿದ್ದು ಅದರಂತೆ ಬೂತ್ ಮಟ್ಟದ ಕಾರ್ಯಕರ್ತರಿಗೆ ಪ್ರಥಮ ಹಂತವಾಗಿ ಪ್ರತಿ ಬೂತ್‌ಗೆ 10 ಮಂದಿ ಕಾರ್ಯಕರ್ತರಿಗೆ ಬುಲೆಟ್ ಅಕ್ಕಿ ನೀಡಿ ಮುಂದಿನ ದಿನಗಳಲ್ಲಿ 50 ಸಾವಿರ ಕಾರ್ಯಕರ್ತರಿಗೆ ವಿತರಣೆ ಮಾಡುವ ಗುರಿ ಇದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಬಿಜೆಪಿ ಮುಖಂಡ ಹನುಮಪ್ಪ, ಮಾಜಿ ತಾ.ಪಂ.ಅಧ್ಯಕ್ಷ ಆನಂದ್, ಪುರಸಭೆ ಸದಸ್ಯ ವೇಮನ, ಜಿ.ಪಂ. ಮಾಜಿ ಉಪಾಧ್ಯಕ್ಷ ಪಿ.ನಾರಾಯಣಸ್ವಾಮಿ, ಬಂಡೂರು ಡಾ.ಪಿ.ನಾರಾಯಣಸ್ವಾಮಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಗೋಪಾಲಕೃಷ್ಣ, ಎಸ್‌ಎಫ್‌ಎಸ್‌ಸಿ ನಿರ್ದೇಶಕ ಟಿ.ಪಿ.ವೆಂಕಟೇಶ, ಓಜರಹಳ್ಳಿ ಮುನಿಯಪ್ಪ, ಮಾಕಾರಾಹಳ್ಳಿ, ಮಂಜುನಾಥ, ಮರಲಹಳ್ಳಿ ಅಂಬರೀಷ್, ಗ್ರಾ.ಪಂ.ಸದಸ್ಯ ಸೋಮಶೇಖರ್, ಮುಖಂಡರಾದ ಕೆ.ರಾಮಚಂದ್ರಪ್ಪ, ಪದ್ಮಾವತಿ, ಪ್ರಶಾಂತ್, ಸುರೇಶ್, ಕೆಂಬೋಡಿ ನಾರಾಯಣಪ್ಪ, ರೈತ ಮೋರ್ಚಾ ಅಧ್ಯಕ್ಷ ವೆಂಕಟರಮಣಪ್ಪ, ಪುರಸಭೆ ಸದಸ್ಯೆ ಸುಮಿತ್ರಾ ಮೂರ್ತಿ, ಮುಖಂಡ ರಾಜೇಂದ್ರ, ಪಕ್ಷದ ವಿವಿಧ ಮೋರ್ಚಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕನ್ನಡ ರಾಜ್ಯೋತ್ಸವ



**ಸಂಜೆ ಮುಗಿಲು ನ್ಯೂಸ್, ಮಾಲೂರು:**

ಕರವೇ ಯುವ ಸೇನೆ ಆಟೋ ಘಟಕ ಅಧ್ಯಕ್ಷ ಎಂ.ಜೆ. ಶ್ರೀನಿವಾಸ್ ಅವರ ನೇತೃತ್ವದಲ್ಲಿ ಡಾ: ರಾಜ್ ವೃತ್ತದಲ್ಲಿ 66ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ವಿಶೇಷ ಪೂಜೆ ನಡೆಸಿದರು.ನಂತರ ಸಾರ್ವಜನಿಕರಿಗೆ ಸಿಹಿ ಹಂಚಿಕೆ ಹಾಗೂ ಅನ್ನದಾನ ಕಾರ್ಯಕ್ರಮ ಮಾಡಲಾಯಿತು.

ಈ ಸಂದರ್ಭದಲ್ಲಿ ಕರವೇ ಯುವ ಸೇನೆ ತಾಲ್ಲೂಕು ಅಧ್ಯಕ್ಷ ಎಸ್.ಎಂ ರಾಜು, ಪ್ರಧಾನ ಕಾರ್ಯದರ್ಶಿ, ಬಡಗಿ ಶ್ರೀನಿವಾಸ್,ಕೆ.ಎನ್ ಜಗದೀಶ್,ಶಾಮ್,ದ್ಯಾಪಸಂದ್ರಅಮರೇಶ್, ನೊಸಗೆರೆ ಸಂಪತ್, ಡಿ.ಎನ್ ಗೋಪಾಲ್, ಹರೀಶ್, ಚನ್ನಕೃಷ್ಣ, ಮಂಗಾಪುರ ಸ್ವಾಮಿ, ಲೋಕೇಶ್, ಲಿಂಗಪ್ಪ, ಸೇರಿದಂತೆ ಇನ್ನಿತರರು ಹಾಜರಿದ್ದರು

# ಕೆರೆಗೆ ತ್ಯಾಜ್ಯ ನೀರು: ಗ್ರಾಮಸ್ಥರ ಆಕ್ರೋಶ

**ಸಂಜೆ ಮುಗಿಲು ನ್ಯೂಸ್, ದೇವನಹಳ್ಳಿ:**

ತೀವ್ರ ಬರಗಾಲಕ್ಕೆ ತುತ್ತಾಗಿದ್ದ ತಾಲ್ಲೂಕಿನಲ್ಲಿ ಇತ್ತಿಚೆಗೆ ಸುರಿದ ವಾಡಿಕೆ ಮಳೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆ ಸುರಿದಿರುವ ಪರಿಣಾಮವಾಗಿ ಕೆರೆಗಳು ಭರ್ತಿಯಾಗಿರುವುದು ಒಂದು ಕಡೆ ಸಂತಸ ತಂದಿದ್ದರೆ, ಮತ್ತೊಂದು ಕಡೆ ಸಾದಹಳ್ಳಿ ಸಮೀಪದ ರೋನಾಲ್ಡೋ ಕೊಲಾಸೋ ಎಂಬುವವರಿಗೆ ಸೇರಿದ ಹಾಲಿವುಡ್ ಟೌನ್‌ನಲ್ಲಿ ಉಪಯೋಗ ಮಾಡಿ ಹೊರಗೆ ಬಿಡುತ್ತಿರುವ ನೀರು, ನೇರವಾಗಿ ಕೆರೆಗೆ ಹರಿಯುತ್ತಿರುವುದರಿಂದ ಕೆರೆಯ ನೀರು ಕಪ್ಪು ಬಣ್ಣಕ್ಕೆ ತಿರುಗುತ್ತಿದೆ ಎಂದು ಇಲತೊರೆ ಹಾಗೂ ಚೌಡನಹಳ್ಳಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನ ಕನ್ನಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಹಾಲಿವುಡ್ ಟೌನ್ ಆಪಾರ್ಟ್ ಮೆಂಟ್ ನಲ್ಲಿನ ಜನರು ಉಪಯೋಗಿಸಿದ ನೀರನ್ನು ಶುದ್ಧೀಕರಣ ಮಾಡಿ ಹೊರಗೆ ಬಿಡುವ ಬದಲಿಗೆ ನೇರವಾಗಿ ಪೈಪುಗಳ ಮೂಲಕ ರಾಜಕಾಲುವೆಗೆ ಬಿಟ್ಟಿದ್ದಾರೆ. ರಾಜಕಾಲುವೆಯ ಮೂಲಕ ಹರಿದು ಬರುತ್ತಿರುವ ನೀರು, ಕೆರೆಗೆ ಸೇರುತ್ತಿವೆ. ಕೆರೆಯ ನೀರೂ ಕೂಡಾ ದುರ್ನಾತ ಬೀರುತ್ತಿದೆ.

ಬೆಳಗಿನ ಜಾವ ಹಾಗೂ ಸಂಜೆಯ ವೇಳೆಯಲ್ಲಿ ಸುತ್ತಮುತ್ತಲಿನ ಪ್ರದೇಶದಲ್ಲಿ ಓಡಾಡಲಿಕ್ಕೂ ಸಾಧ್ಯವಾಗಲ್ಲ, ಈ ಭಾಗದಲ್ಲಿ ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಈಗ ಕೊಳಚೆ ನೀರು ಕೆರೆಗೆ ಸೇರುತ್ತಿರುವುದರಿಂದ ನೀರು ಕಪ್ಪು ಬಣ್ಣಕ್ಕೆ ತಿರುಗುತ್ತಿವೆ. ದನಕರುಗಳು ಕುಡಿಯಲಿಕ್ಕೆ ಯೋಗ್ಯವಿಲ್ಲದಂತಾಗಿದೆ. ಕೆರೆಯಲ್ಲೆ ಪಂಚಾಯಿತಿಯಿಂದ ಕುಡಿಯುವ ನೀರಿಗಾಗಿ ಕೊಳವೆಬಾವಿ ಕೊರೆಯಿಸಿದ್ದಾರೆ. ಈ ಕೊಳವೆಬಾವಿಯಿಂದಲೇ ಜನರಿಗೆ ಕುಡಿಯುವ ನೀರು ಕೊಡುತ್ತಿದ್ದೇವೆ. ಆದರೆ, ಈಗ ನೀರು ಕಲುಷಿತವಾಗುತ್ತಿರುವುದರಿಂದ ಕೊಳವೆಬಾವಿಯಲ್ಲಿನ ನೀರೂ ಕೂಡಾ ಕಲುಷಿತವಾಗುವಂತಹ ಸಾಧ್ಯತೆಗಳು ಹೆಚ್ಚಾಗಿವೆ. ಇದು ಜನರ ಆರೋಗ್ಯದ ಮೇಲೆಯೂ ಕೂಡಾ ಗಂಭೀರ ಪರಿಣಾಮ ಬೀರಲಿದೆ.

ಕೆರೆಯಲ್ಲಿ ನೀರು ಸಂಗ್ರಹಗೊಂಡಿದ್ದು, ಮೀನುಗಾರಿಕೆ ಮಾಡಲಿಕ್ಕೂ ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ವೆಂಕಟೇಶ್ ಒತ್ತಾಯಿಸಿದರು.

ಚೌಡನಹಳ್ಳಿ ಗ್ರಾಮದ ಮಹಿಳೆ ನಾರಾಯಣಮ್ಮ ಮಾತನಾಡಿ, ನಾವು ಬೆಳಗಿನ ಜಾವ ವಾಯುವಿಹಾರಕ್ಕೆ ಹೋಗುವಾಗ ಮೂಗು ಮುಚ್ಚಿಕೊಂಡು ಓಡಾಡಬೇಕಾಗಿದೆ. ಕೆರೆಯ ನೀರು ಕುಡಿದು ದನಕರುಗಳು ಸತ್ತಿವೆ, ಕೆಲವು ದನಗಳು ಕಾಯಿಲೆಗೆ ಒಳಗಾಗಿವೆ. ಈ ಬಗ್ಗೆ ಹಾಲಿವುಡ್ ಟೌನ್ ನವರಿಗೂ ಹೇಳಿದ್ದೇವೆ. ಅವರು ಕಾಲುವೆಯಲ್ಲಿ ಹರಿದುಕೊಂಡು ಹೋಗುತ್ತೆ ಬಿಡಮ್ಮ ನಿಮಗೇನು ಸಮಸ್ಯೆಯಾಗಲ್ಲ ಎಂದು ಹೇಳುತ್ತಿದ್ದಾರೆ. ಯಾರಾದರೂ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಈ ಕುರಿತು ಪ್ರತಿಕ್ರಿಯೆ ನೀಡಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಡಿ.ವಸಂತ್ ಕುಮಾರ್ ಮಾತನಾಡಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದ್ದು, ಸ್ಥಳ ಪರಿಶೀಲನೆ ನಡೆಸಿ, ಮಳೆ ನೀರು ಹೊರತು ಪಡಿಸಿ, ಹಾಲಿವುಡ್ ಟೌನ್ ನಲ್ಲಿ ಉಪಯೋಗವಾಗುತ್ತಿರುವ ನೀರು ಶುದ್ಧೀಕರಿಸದೇ ಹೊರಗೆ ಬಿಡುತ್ತಿದ್ದರೆ ಅವರಿಗೆ ನೋಟೀಸ್ ಜಾರಿ ಮಾಡುವಂತೆ ಸೂಚನೆ ನೀಡಲಾಗಿದೆ. ನೀರು ಹೊರಗೆ ಬಿಡುವ ಮುನ್ನಾ ಶುದ್ಧೀಕರಣ ಮಾಡಿ ಹೊರಗೆ ಬಿಡುವಂತೆಯೂ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿದ್ದೇನೆ ಎಂದರು.

ನಮ್ಮ ಹಾಲಿವುಡ್ ಟೌನ್‌ನಲ್ಲಿ ಉಪಯೋಗವಾಗುತ್ತಿರುವ ನೀರನ್ನು ನಾವು ಹೊರಗೆ ಬಿಡುತ್ತಿಲ್ಲ, ಈ ನೀರನ್ನು ಶುದ್ಧೀಕರಿಸಿ, ನಾವು ಗಿಡಗಳಿಗೆ ಬಳಕೆ ಮಾಡಿಕೊಳ್ಳುತ್ತಿದ್ದೇವೆ. ಕೆರೆಗೆ ಹರಿಯುತ್ತಿರುವ ನೀರು ಎಲ್ಲಿಂದ ಹರಿಯುತ್ತಿವೆ ಎನ್ನುವುದನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ಪತ್ತೆ ಹಚ್ಚಬೇಕು. ರೊನಾಲ್ಡೋ ಕೊಲಾಸೋ ಅವರು, ಉತ್ತಮ ಸಮಾಜ ಸೇವಾ ಕಾರ್ಯಕ್ರಮಗಳನ್ನು ಈ ಭಾಗದಲ್ಲಿ ಮಾಡುತ್ತಿದ್ದು, ಅವರ ಹೆಸರಿಗೆ ಕಳಂಕ ತರಲಿಕ್ಕೆ ಇಂತಹ ಹುನ್ನಾರ ನಡೆಸಿದ್ದಾರೆ ಎಂದು ಅನಿವಾಸಿ ಭಾರತೀಯ ರೋನಾಲ್ಡೋ ಕೊಲಾಸೋ ಅವರ ಆಪ್ತ ಕಾರ್ಯದರ್ಶಿ ನಾಗರಾಜ ಪೂಜಾರಿ ಹೇಳಿದರು.

# ಮಾತಾಡ್ ಮಾತಾಡ್ ಕನ್ನಡ ಕಾರ್ಯಕ್ರಮ

**ಸಂಜೆ ಮುಗಿಲು ನ್ಯೂಸ್, ಬೆಂಗಳೂರು–**

ಶರಣ ಸಾಹಿತ್ಯ ಪರಿಷತ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮ ಪುನೀತ್ ರಾಜಕುಮಾರ್ ಅವರ ನಿಧನದಿಂದ ರದ್ದಾದ ಮಾತಾಡ್ ಮಾತಾಡ್ ಕನ್ನಡ ಕಾರ್ಯಕ್ರಮವನ್ನು ನಿರ್ದೇಶಕರ ಅನುಮತಿ ಪಡೆದು ಮರು ನಿಗದಿ ಮಾಡಲಾಗಿತ್ತು,

ಕಲಾವಿದರು ಮತ್ತು ಪ್ರೇಕ್ಷಕರು ಮತ್ತು ಅತಿಥಿಗಳು ಸಹಕರಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಮುಖ್ಯ ಅತಿಥಿಗಳಾಗಿ ಸ್ಥಳೀಯ ಶಾಸಕರಾದತಿ ಸೌಮ್ಯ ರೆಡ್ಡಿ ಹಾಗೂ ವಿಧಾನಪರಿಷತ್ ಸದಸ್ಯರಾದ ಯು.ಬಿ. ವೆಂಕಟೇಶ್ ಭಾಗವಹಿಸಿದ್ದರು.

ಬೆಂಗಳೂರು ಶರಣ ಸಾಹಿತ್ಯ ಪರಿಷತ್‌ನ ಉಪಾಧ್ಯಕ್ಷೆ ಶಾಂತಮಣಿ ಅವರನ್ನು ಹಾಗೂ ಸೌಮ್ಯರೆಡ್ಡಿ ಅವರನ್ನು ಸನ್ಮಾನಿಲಾಯಿತು. ಸಂಗೀತ, ನತ್ಯ, ಹಾಗೂ ನಾಟಕ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಶರಣ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರದ ಅಧ್ಯಕ್ಷರು ನಾಗರಾಜಮೂರ್ತಿ, ಪ್ರೇಮಾ ಸೋಮಸುಂದರ್, ಜಯನಗರದ ಅಧ್ಯಕ್ಷ ಉಮೇಶ್, ಕೆ.ಎಸ್. ನಾಗರಾಜ್, ಗುರುಮೂರ್ತಿ, ನಾ.ಮಲ್ಲಿಕಾರ್ಜುನ, ಜಗದೀಶ್ ಜಾಲ,ಬಸವರಾಜ್,ಅ.ಭಾ.ಶ.ಪರಿಷತ್‌ನ ಕಾರ್ಯದರ್ಶಿ ಅಂಗಡಿ ಮುಂತಾದವರು ಉಪಸ್ಥಿರಿದ್ದರು.

## ಅಭಿಮಾನಿ ಮುನಿರಾಜುಗೆ ಗೌರವ ಡಾಕ್ಟರೇಟ್

**ಸಂಜೆ ಮುಗಿಲು ನ್ಯೂಸ್, ಹೊಸಕೋಟೆ:**



ತಾಲೂಕಿನ ಖಾಜಿ ಹೊಸಹಳ್ಳಿ ಗ್ರಾಮ ಪಂಚಾಯತ್ ಸದಸ್ಯ ಹಾಗೂ ಸಮಾಜ ಸೇವಕ ಕಾಮರಸನಹಳ್ಳಿ ಅಭಿಮಾನಿ ಮುನಿರಾಜು ಅವರಿಗೆ ಗೌರವ ಡಾಕ್ಟರೇಟ್ ಲಭಿಸಿದೆ.

ತಮಿಳುನಾಡಿನ ಆಸಿಯಾ ವೇದಿಕ್ ಕಲ್ಚರ್ ರಿಸರ್ಚ್ ಯೂನಿವರ್ಸಿಟಿ ವತಿಯಿಂದ ಮುನಿರಾಜು ಅವರ ಸಮಾಜ ಸೇವೆಯನ್ನು ಪರಿಗಣಿಸಿ "ಬಿಜಿನೆಸ್ ಡೌಲಪ್‌ಮೆಂಟ್ ಅಂಡ್ ಸೋಷಿಯಲ್ ಸರ್ವಿಸಸ್"ಗೆ ಗೌರವ ಡಾಕ್ಟರೇಟ್ ಪ್ರಧಾನ ಮಾಡಿದೆ.

ಗೌರವ ಡಾಕ್ಟರೇಟ್ ಪಡೆದ ಅಭಿಮಾನಿ ಮುನಿರಾಜ್ ಅವರನ್ನು ಶಾಸಕ ಶರತ್ ಬಚ್ಚೇಗೌಡ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಕೋಡಿಹಳ್ಳಿ ಸುರೇಶ್ ಸೇ–ರಿದಂತೆ ಹಲವರು ಅಭಿನಂದಿಸಿದ್ದಾರೆ.

## ನಾಡಪ್ರಭು ಕೆಂಪೇಗೌಡ ಪ್ರಶಸ್ತಿ

**ಸಂಜೆ ಮುಗಿಲು ನ್ಯೂಸ್, ಹೊಸಕೋಟೆ :**

ಕರ್ನಾಟಕ ಚಲನಚಿತ್ರರಂಗಮತ್ತುಮಾಡೆಲಿಂಗ್‌ಹಾಗೂ ಗಾಯಕರು ನಿರೂಪಕರಾಗಿ ಕಳೆದ ಹಲವಾರು ವರ್ಷಗಳಿಂದ ವಿನೂತನವಾಗಿ ಚಾಪುಮೂಡಿಸಿ.



ಮನೆಮಾತಾಗಿರುವ ನಗರದ ಜೀತ್ ಜೈನ್‌ರವರನ್ನು ಶುಭ ಗುರುಟ್ರಸ್ಟ್ ವತಿಯಿಂದ ಗುರುತಿಸಿ "ನಾಡ ಪ್ರಭುಕೆಂಪೇಗೌಡ" ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಇವರನ್ನು ದಕ್ಷಿಣ್ ನಾಕೋಡ ಬೈರವಾ ಭಕ್ತ ಮಂಡಲ್ ಮಿತೇಶ್ ಸುರಾನಾಜೈನ್ ಸಮೆ ಸಂಪಾದಕ ಅಶೋಕ್ ನಾಗೋರಿ, ದಕ್ಷಣ್ ಭಾರತ್ ರಾಷ್ಟ್ರ ಮಟ್ ಶ್ರೀಕಾಂತ್ ಪರಾಶರ್, ಕಮಲೇಶ್‌ಕುಮಾರ್ ಶುಭಲಾಬ್ ಇವರ ಕುಟುಂಬ ವರ್ಗ ಸ್ನೇಹಿತರು.

# ದಲಿತರ ಬಗ್ಗೆ ಸಿದ್ದು ಹೇಳಿಕೆಗೆ ಖಂಡನೆ

**ಸಂಜೆ ಮುಗಿಲು ನ್ಯೂಸ್, ದೇವನಹಳ್ಳಿ:**

ದಲಿತರು ಹೊಟ್ಟೆಪಾಡಿಗಾಗಿ ಬಿಜೆಪಿಗೆ ಸೇರಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದು ಬಿಜೆಪಿ ಎಸ್.ಸಿ.ಮೋರ್ಚಾ ರಾಜ್ಯ ಖಜಾಂಚಿ ಎ.ಕೆ.ಪಿ.ನಾಗೇಶ್ ಹೇಳಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಸಿದ್ದರಾಮಯ್ಯ ಅವರೂ ಕೂಡಾ ಜೆಡಿಎಸ್ ಪಕ್ಷದಲ್ಲಿ ಬೆಳೆದು ಕಾಂಗ್ರೆಸ್ ಪಕ್ಷಕ್ಕೆ ಹೋಗಿರುವುದು ಹೊಟ್ಟೆಪಾಡಿಗಾಗಿಯಾ? ಬಿಜೆಪಿ ಪಕ್ಷದಲ್ಲಿ ದಲಿತರನ್ನು ಬೆಳೆಸುತ್ತಿರುವ ರೀತಿಯನ್ನು ಸಿದ್ದರಾಮಯ್ಯ ಸಹಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇದರಿಂದ ಹತಾಶರಾಗಿ ಈ ರೀತಿಯಾಗಿ ದಲಿತರನ್ನು ಕಡೆಗಣಿಸಿ ಮಾತನಾಡಿದ್ದಾರೆ ಈ ಹೇಳಿಕೆಯನ್ನು ಅವರು ವಾಪಸ್ಸು ಪಡೆಯಬೇಕು. ರಾಜ್ಯದಲ್ಲಿ ಈಗಾಗಲೇ ಸಿದ್ದರಾಮಯ್ಯ ಅವರಿಂದಾಗಿ ಕಾಂಗ್ರೆಸ್ ತಳಕಚ್ಚಿದೆ. ಈಗ ಹೇಳಿಕೆಯಿಂದ ಕಾಂಗ್ರೆಸ್ ನ ಮತ ಬ್ಯಾಂಕ್ ಆಗಿದ್ದ, ದಲಿತರನ್ನು ಈ ರೀತಿಯಾಗಿ ಕಡೆಗಣಿಸುತ್ತಿರುವುದು ಖಂಡನೀಯ ಎಂದರು.

ಬಿಜೆಪಿ ಯುವ ಮುಖಂಡ ಸುರೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಖರ್ಗೆಯವರನ್ನು ಸೇರಿದಂತೆ ಹಲವಾರು ನಾಯಕರನ್ನು ಸೋಲಿಸಲಿಕ್ಕೆ ಮೂಲ ಕಾರಣರಾಗಿರುವವರು ಸಿದ್ದರಾಮಯ್ಯ ಅವರು. ಅವರು, ಆತ್ಮಾವಲೋಕನ ಮಾಡಿಕೊಳ್ಳುವುದರ ಬದಲಿಗೆ, ದಲಿತರು ಬಿಜೆಪಿಯ ಕಡೆಗೆ ಹೋಗುತ್ತಿದ್ದಾರೆ ಎನ್ನುವುದನ್ನು ಸಹಿಸದೇ ಈ ರೀತಿಯಾಗಿ ಬಾಲಿಶ ಹೇಳಿಕೆ ನೀಡುವುದು ಖಂಡನೀಯವಾಗಿದೆ. ಅವರು ದಲಿತರ ಕ್ಷಮೆ ಕೇಳಬೇಕು. 2024 ರಲ್ಲಿ ದಲಿತರು ನರೇಂದ್ರಮೋದಿ ಅವರಿಗೆ ಬೆಂಬಲ ನೀಡುತ್ತಿದ್ದಾರೆ. ಬಿಜೆಪಿ ಬಂದರೆ ಮೀಸಲಾತಿ ಕಿತ್ತುಕೊಳ್ಳುತ್ತಾರೆ ಎನ್ನುವ ಅಪವಾದವಿತ್ತು, ಆದರೆ, ಬಿಜೆಪಿ ಈ ಅಪವಾದದಿಂದ ದೂರವಿದ್ದು ಕೆಲಸ ಮಾಡುತ್ತಿದೆ ಎಂದರು.




ವಿಜಯಪುರ ಟೌನ್ ಬಿಜೆಪಿ ಅಧ್ಯಕ್ಷ ಆರ್.ಸಿ.ಮಂಜುನಾಥ್ ಮಾತನಾಡಿ, ರಾಜಕೀಯವಾಗಿ ದಲಿತರು ಬಿಜೆಪಿಯಲ್ಲಿ ಬೆಳೆಯುತ್ತಿರುವುದನ್ನು ಸಿದ್ದರಾಮಯ್ಯ ಅವರು ಸಹಿಸುತ್ತಿಲ್ಲ. ಅವರು ಜವಾಬ್ದಾರಿಯುತ ಸ್ಥಾನದಲ್ಲಿದ್ದು ಈ ಹೇಳಿಕೆಯನ್ನು ನೀಡಬಾರದು. 2014 ರಿಂದ 2021 ರವರೆಗೆ ದಲಿತ ವರ್ಗಕ್ಕೆ ಎಷ್ಟು ಅವಕಾಶಗಳು ಕೊಟ್ಟಿದ್ದಾರೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಸಿದ್ದರಾಮಯ್ಯನವರು ದಲಿತ ಮುಖ್ಯಮಂತ್ರಿಯಾಗಬಾರದು ಎಂದು ಸೋಲಿಸಿದರು. ಯಡಿಯೂರಪ್ಪ ಅವರು ದಲಿತರನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡಿದರು. ಸಿದ್ದರಾಮಯ್ಯ ಅವರು, ಹಳ್ಳಿ ಭಾಷೆಯನ್ನು ಬಿಟ್ಟು ಸಂಸ್ಕೃತಿಯನ್ನು ಕಲಿತುಕೊಳ್ಳಬೇಕಾಗಿದೆ ಎಂದರು.

ಬಿಜೆಪಿ ಮುಖಂಡರಾದ ರಾಜ್ಯ ಎಸ್.ಸಿ. ಮೋರ್ಚಾ ಕಾರ್ಯದರ್ಶಿ ಹನುಮಂತಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ತಾಲ್ಲೂಕು ಎಸ್.ಸಿ.ಮೋರ್ಚಾ ಅಧ್ಯಕ್ಷ ಮುನಿರಾಜು, ಗಣೇಶ್ ಬಾಬು, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬೂದಿಗೆರೆ ನಾಗವೇಣಿ, ತಾಲ್ಲೂಕು ಉಪಾಧ್ಯಕ್ಷೆ ಪುನೀತಾ, ಲಕ್ಷ್ಮೀ, ದ್ರಾಕ್ಷಾಯಿಣಿ, ಯುವಮೋರ್ಚಾದ ಮೋಹನ್, ಹಾಜರಿದ್ದರು.

# ಪಟಾಕಿಗಳ ಸಹವಾಸ, ಹಾವಿನೊಂದಿಗೆ ಸರಸ!

ಮತ್ತೊಮ್ಮೆ ದೀಪಾವಳಿ ಹಬ್ಬ ಬಂದಿದೆ. ಈ ಸಂದರ್ಭದಲ್ಲಿ ಹಬ್ಬದ ಸಡಗರವನ್ನು ಹೆಚ್ಚಿಸುವುದು ವೈವಿಧ್ಯಮಯವಾದ ಪಟಾಕಿಗಳು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಮನೆಯಲ್ಲಿ ದೊಡ್ಡವರು ಪೂಜಾದಿ ಕಾರ್ಯಗಳು, ತಳಿರು ತೋರಣ, ಹೊಸ ಬಟ್ಟೆಗಳು, ದೇಗುಲ ದರ್ಶನ, ಮುಂತಾದವುಗಳ ಕಡೆ ಗಮನ ನೀಡಿದರೆ, ಪುಟಾಣಿ ಮಕ್ಕಳಿಗೆ ಪಟಾಕಿಗಳನ್ನು ಸುಟ್ಟು, ಸುರ್ ಸುರ್ ಬತ್ತಿ ಉರಿಸಿ, ಕೃಷ್ಣ ಚಕ್ರ ತಿರುಗಿಸಿ, ಹೂ ಕುಂಡ ಚಿಮ್ಮಿಸಿ, ಆಟಂಬಾಂಬ್ ಸಿಡಿಸಿ ಖುಷಪಡುತ್ತಾರೆ. ಮುಗ್ಧ ಮಕ್ಕಳು ಹಬ್ಬದ ನೆಪದಲ್ಲಿ ಹೀಗೆ ಸಂತೋಷಪಡುವುದು ಸಹಜವೇ. ಆದರೂ ಅಜಾಗರೂಕತೆಂದ ಅಗ್ನಿ ಅವಘಡ, ಅನಾಹುತ, ಅಪಾಯಗಳಿಗೆ ತುತ್ತಾಗುವ ಅವಕಾಶವಿರುತ್ತದೆ. ಹೇಗೆ ಎಂಬುದರ ಬಗ್ಗೆ ಕೆಲವು ಅನುಭವಕ್ಕೆ ಬಂದ ನಿದರ್ಶನಗಳು, ಅಲ್ಲಿಲ್ಲಿ ಕಂಡು ಕೇಳಿದ, ನೋಡಿದ ಘಟನೆಗಳನ್ನು ವಿವರಿಸುವುದರೊಂದಿಗೆ ಪಟಾಕಿಗಳ ಹಾವಳಿಯ ಸಂದರ್ಭಗಳನ್ನು ತಿಳಿಸುತ್ತಾ, ಇಂತಹವುಗಳ ಮೇಲೆ ಎಚ್ಚರವಾಗಿರಬೇಕೆಂದು ಕೋರುತ್ತೇನೆ.

ನಮ್ಮ ಊರಿನಲ್ಲಿ ದೀಪಾವಳಿ ಹಬ್ಬದ ಸಂದರ್ಭವೊಂದರಲ್ಲಿ ರಾಜಣ್ಣ ಎಂಬುವರೊಬ್ಬರು ಪಟಾಕಿ ಸಿಡಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ಹಾಗಾಗಿ ಪ್ರತಿ ದೀಪಾವಳಿಯ ಅಮವಾಸ್ಯೆಯಂದು ಸಂಜೆ ಸಾವಿರಾರು ರೂ.ಗಳ ಪಟಾಕಿಗಳನ್ನು ತಂದು ಅವರ ಮನೆಯ ಮುಂದೆ ನೆರೆಹೊರೆಯವರೆದುರು ಸಿಡಿಸಿ ಸಂಭ್ರಮಿಸುತ್ತ ಹೀರೋ ಅನಿಸಿಕೊಳ್ಳುತ್ತಿದ್ದರು. ಪಳಗಿದ ಕೈ ಎನಿಸಿದರೂ ಒಮ್ಮೆ ಆಟಂಬಾಂಬ್ ಹಚ್ಚುವ ಸಂದರ್ಭದಲ್ಲಿ ಬತ್ತಿಗೆ ಬೆಂಕಿ ಕಿಡಿ ತಾಕಿದ ತಕ್ಷಣ ಕೈ ತೆಗೆಯುವಷ್ಟರಲ್ಲಿಯೇ 'ಢಮಾರ್!' ಎಂದು ಸದ್ದು ಮಾಡಿ ಅವರ ಹಸ್ತದ ಹೆಬ್ಬೆರಳನ್ನೇ ಬಲಿ ಪಡೆದುಕೊಂಡಿತು. ನೋವಿನಿಂದ ಚೀರಾಡಿದ ರಾಜಣ್ಣನ ಗರ್ವಭಂಗಕ್ಕೆ ಕೆಲವರು ಮರುಗಿದರೂ, ಅವರಿಗೆ ಆಗದವರು 'ತಕ್ಕ ಶಾಸ್ತಿಯಾಯಿತು' ಎಂದು ಆಡಿಕೊಂಡರು.

ಬಾಲ್ಯದಲ್ಲಿ ನಾನು ಮತ್ತು ಗೆಳೆಯರಿಬ್ಬರು ದೊಡ್ಡವರ ಕಣ್ಣು ತಪ್ಪಿಸಿ ಮನೆಯ ಹಿತ್ತಲಿನಲ್ಲಿ ಪಟಾಕಿ ಹೊಡೆಯಲು ಭಯದಿಂದಲೇ ಧೈರ್ಯ ಮಾಡಿದೆವು. ಒಬ್ಬ ಗೆಳೆಯ ಸುಮ್ಮನಿರಲಾರದೆ ಒಂದು ಪುಟ್ಟ ಮಡಿಕೆಯನ್ನು ತಂದು ಲಕ್ಷ್ಮೀಪಟಾಕಿಯೊಂದನ್ನು ಅದರೊಳಗೆ ಇಟ್ಟು ಸಿಡಿಸಿ, ಅದು ಚೂರು ಚೂರಾಗಿ ಸಿಡಿಯುವುದನ್ನು ಕಾಣಬೇಕೆಂದನು. ನಾನು ಏನಾದರೂ ಅಪಾಯವಾದರೆ ಗತಿಯೇನು? ಈ ಸಾಹಸ ಬೇಡವೆಂದು ಬೇಡಿಕೊಂಡರೂ ಕೇಳದ ತರಲೆ ಗೆಳೆಯ ಪಟಾಕಿಯನ್ನು ಮಣ್ಣಿನ ಸಣ್ಣ ಗುಡ್ಡೆಗೆ ನೆಟ್ಟು, ಬೆಂಕಿ ಹಚ್ಚಿ, ಮಡಕೆಯನ್ನು ಬೋರಲಾಗ ಮುಚ್ಚಿ ಅವಸರದಲ್ಲಿ ಓಡುವಾಗ ಕಲ್ಲಿಗೆ ಎಡವಿ ಬಿದ್ದುಬಿಟ್ಟನು. ಅದರ ಜೊತೆ ಜೊತೆಗೇ ಸಿಡಿದ ಮಡಕೆ ಮುಚ್ಚಿದ ಪಟಾಕಿಯು, ಚೂರುಗಳನ್ನು ರಭಸವಾಗಿ ಎಲ್ಲಾ ಕಡೆ ತೂರಿಬಿಟ್ಟಿತು. ಅದರ ಚೂರುಗಳು ತರಲೆ ಗೆಳೆಯನ ಮೈಕೈಗಳಿಗೂ ತಾಗಿ ಗಾಯ ಮಾಡಿದವು. ಪಾಪ! ದಯನೀಯ ಸ್ಥಿತಿಗೆ ತಾನೇ ಒಳಗಾಗಿದ್ದ ಅವನ ತರಲೆ ಬುದ್ಧಿಗೆ ತಕ್ಕ ಶಾಸ್ತಿಯಾಯ್ತು ಅನಿಸಿದರೂ ಬಹಳ ಬೇಜಾರಾಯ್ತು. ಈ ವಿಚಾರವನ್ನು ಮನೆಯವರಿಗೆ ಯಾರೂ ಹೇಳಬಾರದೆಂದು ನಮ್ಮ ನಮ್ಮಲೇ ಮಾತಾಡಿಕೊಂಡರೂ, ಯಾರೋ ಪಕ್ಕದ ಮನೆಯ ಅಜ್ಜಿ ನೋಡಿ ಊರಿಗೆಲ್ಲಾ ಹೇಳಿಬಿಟ್ಟಿತ್ತು. ನಮ್ಮ ಶಾಲೆಯ ಮೇಷ್ಟ್ರಿಗೆ ಈ ವಿಷಯ ಗೊತ್ತಾಗಿ "ಛಡೀ ಚಂಚಂ" ಮಾಡಿಬಿಟ್ಟರು.



ನಮ್ಮ ಮನೇಲಿ ಒಂದು ನಿಷ್ಠೆಯ ನಾಯಿತ್ತು. ಅದನ್ನು ಮನೆಯವರೆಲ್ಲರೂ ಪ್ರೀತಿಂದ 'ಭೈರ' ಅಂತಾ ಕರೆಯುತ್ತಿದ್ದೆವು. ಒಂದು ದೀಪಾವಳಿ ಸಂದರ್ಭದಲ್ಲಿ ಪಟಾಕಿ ಹೊಡೆಯುವಾಗ, ನಮ್ಮಣ್ಣನಿಗೆ ಒಂದು ಯೋಚನೆ ಹೊಳೆತು. ಹುಡುಗಾಟಿಕೆ ವಯಸ್ಸಲ್ವ. ಸುಮ್ಮನೇ ಮಲಗಿದ್ದ ನಾಯಿ ಭೈರನ ಬಾಲಕ್ಕೆ ದಾರ ಕಟ್ಟಿ, ಅದರ ತುದಿಗೆ ಪಟಾಕಿಯನ್ನು ಸಿಕ್ಕಿಸಿ ಬೆಂಕಿ ತಾಗಿಸಿದನು. ಪಾಪ! ನಿದ್ರೆ ಮಾಡುತ್ತಿದ್ದ ನಾಯಿ ಸಿಡಿದ ಪಟಾಕಿ ಶಬ್ದಕ್ಕೆ ಬೆಚ್ಚಿಬಿದ್ದು ಮನ ಬಂದ ಕಡೆ ದಿಕ್ಕಾಪಾಲಾಗಿ ಓಡಿ ಬಿಟ್ಟಿತು. ಅದರ ಮನಸ್ಸಿಗೆ ಎಷ್ಟು ಘಾಸಿಯಾಯ್ತೋ ಏನೋ! ಮನೆಗೆ ಮೂರ್ನಾಲ್ಕು ದಿನ ಕಳೆದ ಮೇಲೆ ವಾಪಾಸಾಯ್ತು. ಮಾಡಿದ್ದ ತಪ್ಪಿನ ಅರಿವಾಗಿದ್ದ ನನ್ನಣ್ಣ ಪ್ರೀತಿಂದ ನಾಯಿಯ ಮೈ ನೇವರಿಸಿ, ಊಟ ತಿನ್ನಿಸಿ ಸಮಾಧಾನ ಮಾಡಿದರು. ಮುಂದೆ ಆ ನಾಯಿಯ ಮೇಲಿನ ಅಕ್ಕರೆ ಮತ್ತಷ್ಟು ಹೆಚ್ಚಾಯ್ತು, ಜೊತೆಗೆ "ಪ್ರಾಣಿ ಹಿಂಸೆ ಮಾಡುವುದು ಮಹಾ ಪಾಪ" ಎಂಬುದು ಸ್ಪಷ್ಟವಾಗಿ ಅರಿವಾಯ್ತು.

ಇನ್ನೊಮ್ಮೆ ಇದೇ ದೀಪಾವಳಿ ಸಂದರ್ಭದಲ್ಲಿ ಪಕ್ಕದೂರಿನಲ್ಲಿ ಆದ ಅವಘಡ ಮರೆಯುವಂತಿಲ್ಲ. ಆ ಊರಿನ ಯುವಕನೊಬ್ಬ ಬಾಣವನ್ನು ಕೈಯಲ್ಲಿ ಹಿಡಿದು ಹಚ್ಚಲು ಭಯಪಟ್ಟುಕೊಂಡು, ನೆಲದ ಮೇಲೆ ಮಣ್ಣಿನ ಗುಡ್ಡೆ ಮಾಡಿ, ಅದರಲ್ಲಿ ಬಾಣವನ್ನು ಮೇಲ್ಮುಖವಾಗಿ ನಿಲ್ಲಿಸಿ ಬುಡದ ಬತ್ತಿಗೆ ಬೆಂಕಿ ತಾಗಿಸಿದ್ದಾನೆ. ಭಯದಿಂದ ನಡುಗಿದ ಅವನ ಕೈ ಸ್ವಲ್ಪ ಸೋಕಿದಾಗ ಬಾಣದ ದಿಕ್ಕು ಬದಲಾಗಿದೆ. ಕೆಳಗೆ ಬತ್ತಿ ಉರಿಯುತ್ತಿದ್ದಂತೆ ವೇಗವಾಗಿ ದಿಕ್ಕಾಪಾಲಾಗಿ ಹೊರಟ ಬಾಣವು ಊರಿನ ದೇವಾಲಯಕ್ಕೆ ಬಂದಿದ್ದ ಹೆಂಗಸರ ಸೀರೆಯನ್ನು ಸವರಿಕೊಂಡೇ ಹೋಗಿ ಪಕ್ಕದಲ್ಲಿದ್ದ ಹುಲ್ಲಿನ ಗುಡ್ಡೆಗೆ ತಾಕಿ ಬೆಂಕಿ ಹೊತ್ತಿಕೊಂಡಿತ್ತು. ಅಲ್ಲೇ ಇದ್ದ ಊರಿನ ಜನರೆಲ್ಲ ಸೇರಿ ನೀರು ಹಾಕಿ ಹುಲ್ಲಿನ ಬೆಂಕಿಯನ್ನು ಆರಿಸಿದರು. ಆದರೆ ಬೆಲೆ ಬಾಳುವ ವರ್ಣ ರಂಜಿತ ಸೀರೆಗಳ ಮೇಲೆ ಸೋಕಿದ ಬೆಂಕಿ ಕಿಡಿಯಿಂದಾದ ತೂತುಗಳು ಕೆಲವರು ಹೆಂಗಸರ ಹೊಟ್ಟೆ ಉರಿಸಿಬಿಟ್ಟವು.

ಒಮ್ಮೆ ಸಂಜೆ ಮಬ್ಬುಗತ್ತಲಿನ ಸಮಯ, ಸಮೀಪದ ಕೊಣನೂರಿನಲ್ಲಿ ನಮ್ಮೂರಿನ ಬಸ್ ಗೋಸ್ಕರ ಕಾಯುತ್ತಾ ನಿಂತಿದ್ದೆ. ದೀಪಾವಳಿ ದಿನ ಎಲ್ಲರ ಮನೆ ಮುಂದೆ ಸಾಲು ಹಣತೆಗಳು ಬೆಳಗುತ್ತಿದ್ದವು. ಸ್ವಲ್ಪ ಸಮಯದಲ್ಲಿಯೇ ಯುವಕರ ಗುಂಪೊಂದು ಹಲವಾರು ಪಟಾಕಿ ಸರಗಳನ್ನು ತಂದು ಒಂದಕ್ಕೊಂದು ತಳಕು ಹಾಕಿ, ರಸ್ತೆಯ ಉದ್ದಕ್ಕೂ ಹಾಸಿದರು. ಒಂದು ತುದಿಯಲ್ಲಿ ಬೆಂಕಿ ಹಚ್ಚಿದ ತಕ್ಷಣವೇ ಪಟಾಕಿಗಳೆಲ್ಲವೂ ಢಂ ಢಮಾರ್ ಶಬ್ದ ಮಾಡುತ್ತಾ ಇಕ್ಕೆಲಗಳಲ್ಲಿ ನಿಂತಿದ್ದ ನನ್ನಂಥವರನ್ನು ಹೆದರಿಸುತ್ತಾ ಮುನ್ನುಗ್ಗುತ್ತಿದ್ದವು. ಹೆಂಗಸರು, ಮಕ್ಕಳು ಭಯದಿಂದ ಅತ್ತಿತ್ತ ಓಡಾಡುತ್ತಾ ಪಟಾಕಿ ಹಚ್ಚಿದ ತರುಣರ ಗುಂಪನ್ನು ಬೈಯ್ದುಕೊಂಡರು. ನೋಡು ನೋಡುತ್ತಿದ್ದಂತೆ ತುಂಡಾದ ಪಟಾಕಿ ಸರವೊಂದು ಪಕ್ಕದಲ್ಲಿ ನಿಲ್ಲಿಸಿದ್ದ ಬೈಕ್ ಮೇಲೆ ಹಾರಿ ಕುಳಿತು ಸಿಡಿಯಲಾರಂಭಿಸಿತು. ಪೆಟ್ರೋಲ್ ಟ್ಯಾಂಕ್ ಲ್ಲಿ ಸ್ವಲ್ಪವೇ ಪೆಟ್ರೋಲ್ ಇದ್ದುದರಿಂದ ಸಣ್ಣ ಪ್ರಮಾಣದ ಸ್ಫೋಟವಾಯಿತು. ಭಾರೀ ಸ್ಫೋಟದ ನಿರೀಕ್ಷೆಂದ ಜನರೆಲ್ಲರೂ ಭಯಭೀತರಾಗಿ ಉಸಿರು ಬಿಗಿ ಹಿಡಿದಿದ್ದರು. ಅದೃಷ್ಟವಶಾತ್ ಭಾರೀ ಅನಾಹುತ ಆಗಲಿಲ್ಲವೆಂಬುದು ಸಮಾಧಾನಕರವಾದರೂ, ಇಂತಹ ಅಚಾತುರ್ಯಗಳು ಘಟಿಸುವ ಸಾಧ್ಯತೆ ಇರುತ್ತದೆ.

ಮತ್ತೊಂದು ಬಾರಿ ಮನೆ ಮುಂದೆ ಪುಟ್ಟ ಮಕ್ಕಳು ಪಟಾಕಿ ಹೊಡೆಯುತ್ತಿದ್ದರು. ಅಂದು ಮೂರ್ನಾಲ್ಕು ದಿನ ಸೋನೆ ಮಳೆ ಸುರಿದು ವಾತಾವರಣ ತಂಪಾಗಿತ್ತು. ಹಾಗಾಗಿ ಪಟಾಕಿಗಳು ಮೆತ್ತಗಾಗಿ 'ಠುಸ್!' ಎನ್ನುತ್ತಿದ್ದವು. ಒಬ್ಬ ಪುಟಾಣಿಯು ಹಚ್ಚಿದ ಪಟಾಕಿಯ ಬತ್ತಿ ಮಾತ್ರ ಸುರ್ ಎಂದು ಸದ್ದು ಮಾಡಿ ಸಿಡಿಯದೆ ಬಿದ್ದುಕೊಂಡಿತು. ನಿರಾಸೆಂದ ಪುಟ್ಟನು ಸ್ವಲ್ಪ ಹೊತ್ತಿನ ನಂತರ ಸಿಡಿಯದ ಪಟಾಕಿಯನ್ನು ಎತ್ತಿಕೊಂಡು ಮದ್ದಿನ ಭಾಗದಲ್ಲಿ ಹಿಚುಕಿ ನೋಡಿದ ತಕ್ಷಣ ದೊಡ್ಡ ಸದ್ದಿನೊಂದಿಗೆ ಸಿಡಿದು ಆ ಹುಡುಗನ ಹಸ್ತವನ್ನು ಗಾಯಗೊಳಿಸಿತು. ಇಂಥ ಹುಡುಗಾಟಿಕೆಯಿಂದಲೇ ಹೆಚ್ಚು ಮಕ್ಕಳು ಅನಾಹುತ ಮಾಡಿಕೊಳ್ಳುತ್ತಾರೆ.

ಮೇಲೆ ವಿವರಿಸಿದ ಅವಘಡಗಳು ದೀಪಾವಳಿ ಮತ್ತು ಇತರೆ ಸಂಭ್ರಮಾಚರಣೆಗಳಲ್ಲಿ ಅಲ್ಲಿ ನಡೆದ ಬಗ್ಗೆ ಮಾಧ್ಯಮಗಳಲ್ಲಿ ನೋಡಿರುತ್ತೇವೆ, ಕೇಳಿರುತ್ತೇವೆ ಅಥವಾ ಓದಿಯೂ ಇರುತ್ತೇವೆ. ಅಷ್ಟೇ ಅಲ್ಲದೆ ಪಟಾಕಿಗಳ ಹಾವಳಿಂದ ದೃಷ್ಟಿ ಕಳೆದುಕೊಂಡು ಬದುಕನ್ನೇ ಕತ್ತಲು ಮಾಡಿಕೊಂಡ ದುರ್ದೈವಿಗಳ ಉದಾಹರಣೆಗಳು ತಿಳಿದಿದ್ದರೂ ಮತ್ತೆ ಮತ್ತೆ ಮರುಕಳಿಸುತ್ತವೆ ಎಂಬುದು ನಮ್ಮ ನಿರ್ಲಕ್ಷ್ಯ ವಲ್ಲದೆ ಮತ್ತೇನೂ ಅಲ್ಲ. ಹಬ್ಬಗಳು ನಮ್ಮ ಬದುಕಿನ ಬೇಸರವನ್ನು ಕಳೆದು ಜೀವನೋತ್ಸಾಹವನ್ನು ಹೆಚ್ಚಿಸಬೇಕೇ ವಿನಃ ಬದುಕಿನ ಮೇಲೆ ಬರೆ ಎಳೆಯಬಾರದಲ್ಲವೇ?

"ದೀಪದ ಹಬ್ಬ"ವೆಂದೇ ಪೌರಾಣಿಕ ಮಹತ್ವ ಹೊಂದಿರುವ ದೀಪಾವಳಿಯ ಆಚರಣೆಯ ವೈಜ್ಞಾನಿಕ ಉದ್ದೇಶವನ್ನು ಪುಟಾಣಿಗಳಾದಿಯಾಗಿ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಬರಲಿರುವ ಛಳಿಗಾಲದಲ್ಲಿ ವಾತಾವರಣವು ತುಂಬಾ ಶೀತಾಂಶದಿಂದ ಕೂಡಿರುತ್ತದೆ. ಅದರಲ್ಲೂ ರಾತ್ರಿ ವೇಳೆಯಲ್ಲಿ ಛಳಿ ಹೆಚ್ಚಾಗಿರುತ್ತದೆ. ಆದ್ದರಿಂದ ನಾಡಿನ ಪ್ರತಿಯೊಂದು ಮನೆಯಲ್ಲಿಯೂ ಸಾಲು ಹಣತೆಗಳನ್ನು ಕಾರ್ತಿಕ ಮಾಸ ಪೂರ್ತಿಯಾಗಿ ಬೆಳಗಿಸುವ ಸತ್ಸಂಪ್ರದಾಯದಿಂದ ವಾತಾವರಣದ ಉಷ್ಣತೆಯನ್ನು ಹೆಚ್ಚಿಸುವ ಉದ್ದೇಶವು ಈ ಹಬ್ಬದ ಆಚರಣೆಯಲ್ಲಿ ಅಡಗಿದೆ. ಅದು ಬಿಟ್ಟು ಹಬ್ಬದ ನೆಪದಲ್ಲಿ ಕಷ್ಟ ಪಟ್ಟು ದುಡಿದ ಹಣವನ್ನು ಪಟಾಕಿಗಳ ಸುಡುವಿಕೆಗೆ ಬಳಸಿ ಹಾಳು ಮಾಡುವುದು, ಅಗ್ನಿ ಅವಘಡಗಳನ್ನು ನಮಗೆ ನಾವೇ ತಂದುಕೊಳ್ಳುವುದು ಎಷ್ಟು ಸರಿ ಎಂದು ಪುಟಾಣಿಗಳು, ಯುವಕರು ಅರ್ಥ ಮಾಡಿಕೊಳ್ಳಬೇಕು. ಅಲ್ಲದೆ ಪರಿಸರ ಮಾಲಿನ್ಯವೂ (ವಾಯು, ಶಬ್ದ) ಈ ಪಟಾಕಿಗಳ ಹಾವಳಿಂದ ಉಂಟಾಗುವ ಮೂಲಕ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ.

ಆದ್ದರಿಂದ "ಪಟಾಕಿಗಳ ಸುಡುವ ಬದಲು ಪ್ರಣತಿಗಳ ಬೆಳಗಿಸೋಣ"



-ಹೊ.ರಾ.ಪರಮೇಶ್ ಹೊಡೇನೂರು
ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ
#7022765372

# ರಾಜೀವ್ ಗಾಂಧಿ ಸೇವಾ ಕೇಂದ್ರಕ್ಕೆ ಅಡಿಗಲ್ಲು



**ಸಂಜೆ ಮುಗಿಲು ನ್ಯೂಸ್, ಚಿಕ್ಕನಾಯಕನಹಳ್ಳಿ :**
ಬೆಳಗುಲಿ ಗ್ರಾ.ಪಂ ಕಟ್ಟಡಕ್ಕೆ ಹೊಂದಿಕೊಂಡಿರುವ ನಿವೇಶನದಲ್ಲಿ ಮೂವತ್ತು ಲಕ್ಷ ರೂ. ವೆಚ್ಚದ ರಾಜೀವ್ ಗಾಂಧಿ ಸೇವಾ ಕೇಂದ್ರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ ಅಡಿಗಲ್ಲು ಹಾಕಿದರು.

ಸ್ಥಳೀಯ ಗ್ರಾಮೀಣ ಮಟ್ಟದಲ್ಲಿರುವ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಗ್ರಾಮ ಪಂಚಾಯತ್ ಅಧಿಕಾರಿಗಳು ಗಮನ ಹರಿಸಿ ಪರಿಹಾರಕ್ಕೆ ಮುಂದಾಗಬೇಕೆಂದು ಈ ವೇಳೆ ಸಚಿವರು ಸೂಚಿಸಿದರು.

ಇಓ ವಸಂತ್ ಕುಮಾರ್ ಮಾತನಾಡಿ ಹಳೆಯ ಕಟ್ಟಡ ಸಂಪೂರ್ಣ ಶಿಥಿಲವಾಗಿದ್ದು ಅದನ್ನು ಕೆಡವಲಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಈ ಹೊಸ ಕಟ್ಟಡ ತಲೆ ಎತ್ತಲಿದ್ದು, ಒಟ್ಟು 28.6 ಲಕ್ಷ ಹಣ ವಿನಿಯೋಗಿಸಲಾಗುವುದು. ಉಳಿಕೆ ಹಣವನ್ನು 15 ನೇ ಹಣಕಾಸಿನ ಯೋಜನೆಯಡಿ ಮಂಜೂರು ಮಾಡಲಾಗುತ್ತದೆ ಎಂದರು.

ರಾಜೀವ್ ಗಾಂಧಿ ಸೇವಾ ಕೇಂದ್ರದಲ್ಲಿ ಅತ್ಯಾಧುನಿಕ ಕಂಪ್ಯೂಟರ್, ಇಂಟರ್‌ನೆಟ್ ಸೇರಿದಂತೆ ಎಲ್ಲಾ ಸೌಲಭ್ಯ ಅಳವಡಿಸಲಾಗುವುದು. ಪ್ರತ್ಯೇಕವಾಗಿ ಅಧ್ಯಕ್ಷರಿಗೆ ಮತ್ತು ಪಿಡಿಓಗೆ ಕಚೇರಿ, ತರಬೇತಿ, ಸಭೆ ಸಮಾರಂಭ, ಗ್ರಾಮಸಭೆ, ರೈತರಿಗೆ ಮಾಹಿತಿ ನೀಡುವ ಕಾರ್ಯಕ್ರಮ, ಆರೋಗ್ಯ ಕಾರ್ಡ್, ಆಧಾರ್ ತಿದ್ದುಪಡಿ ಇನ್ನು ಮುಂತಾದ ಸೇವೆಗಳು ಈ ಸೇವಾ ಕೇಂದ್ರದಲ್ಲಿ ಸಿಗಲಿದೆ.

ಸಮಾರಂಭದಲ್ಲಿ ಗ್ರಾ.ಪಂ ಅಧ್ಯಕ್ಷೆ ಶಾರದಮ್ಮ, ಉಪಾಧ್ಯಕ್ಷ ಶಾಂತರಾಜು, ಸದಸ್ಯರಾದ ಬಸವರಾಜು, ಉದಯ್ ಕುಮಾರ್, ಅಂಜನಪ್ಪ, ರಾಮಯ್ಯ, ರಂಜಿತ, ಜಯಲಕ್ಷ್ಮಮ್ಮ, ದೇವಿರಮ್ಮ, ಲಕ್ಕಮ್ಮ, ಕೆಂಪಮ್ಮ, ಹಾಗು ಗ್ರಾಮಸ್ಥರಿದ್ದರು.



**ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ರಾಮನಹಳ್ಳಿ ಗ್ರಾ.ಪಂ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭ ನೆರವೇರಿತು. ಈ ವೇಳೆ ಮುಖ್ಯ ಶಿಕ್ಷಕ ಬಸವರಾಜು, ಸಹ ಶಿಕ್ಷಕ ಕುಮಾರ್, ಗ್ರಾ.ಪಂ ಸದಸ್ಯ ಶಿವಣ್ಣ, ಚಂದ್ರಶೇಖರ್, ಹನುಮಯ್ಯ, ಸಿಬ್ಬಂದಿಗಳಾದ ಗಂಗಾಧರಯ್ಯ, ಮಂಜುನಾಥ್, ಸಣ್ಣಪ್ಪ, ಗಿರೀಶ್, ಚಂದ್ರಕಲಾ, ಗ್ರಂಥಪಾಲಕ ಸರ್ವಣ್ಣ ಹಾಗೂ ವಿದ್ಯಾರ್ಥಿಗಳಿದ್ದರು.**

# ಜನರ ಸಂಕಷ್ಟಕ್ಕೆ ಸ್ಪಂದಿಸುವವರನ್ನು ಬೆಂಬಲಿಸಿ

**ಸಂಜೆ ಮುಗಿಲು ನ್ಯೂಸ್, ಕೆ.ಆರ್.ನಗರ:**
ಜನರ ಸಂಕಷ್ಟಕ್ಕೆ ಸ್ಪಂದಿಸುವವರನ್ನು ಬೆಂಬಲಿಸಬೇಕೊ ಅಥವಾ ಚುನಾವಣೆ ಸಮಯದಲ್ಲಿ ಬಂದು ಕಣ್ಣೀರು ಹಾಕಿ ನಾಟಕವಾಡುವವರ ಪರ ಇರಬೇಕು ಎಂಬುದನ್ನು ಕ್ಷೇತ್ರದ ಮತದಾರರು ತೀರ್ಮಾನಿಸಬೇಕು ಎಂದು ಶಾಸಕ ಸಾ.ರಾ. ಮಹೇಶ್ ಹೇಳಿದರು.

ತಾಲೂಕಿನ ಮಾರಗೌಡನಹಳ್ಳಿ ಗ್ರಾಮದಲ್ಲಿ ನಬಾರ್ಡ್ ಯೋಜನೆಯ ಆರ್‌ಐಡಿಎಫ್ ನಿರ್ಮಾಣ ಮಾಡಿರುವ ಮೂರು ಮತ್ತು ಮಾವತ್ತೂರು ಗ್ರಾಮದ ಶಾಲೆಯಲ್ಲಿ ನಿರ್ಮಾಣ ಮಾಡಲಾಗಿರುವ 9 ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು.

ನನಗೆ ಮತ ನೀಡಿ ಮೂರು ಬಾರಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದರಿಂದ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ದುಡಿಯುವುದರ ಜತೆಗೆ ಸದಾ ಮತದಾರರ ಸಂಕಷ್ಟಕ್ಕೆ ಸ್ಪಂದಿಸಿದ್ದೇನೆ ಎಂದ



ಸಾ.ರಾ.ಮಹೇಶ್ ನಾಟಕ ಆಡುವವರನ್ನು ಬೆಂಬಲಿಸಿದರೆ ಕ್ಷೇತ್ರದ ಬದಲು ಅವರು ಆರ್ಥಿಕವಾಗಿ ಅಭಿವೃದ್ಧಿಯಾಗುತ್ತಾರೆ ಎಂದರು.

ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳ ಇದ್ದ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ 964 ಕೋಟಿ ರೂ.ಗಳ ಅನುದಾನ ನೀಡಿದರು. ಆ ಪೈಕಿ 21 ಕೋಟಿ ರೂ.ವೆಚ್ಚದಲ್ಲಿ 155 ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಿದ್ದು ಇದಕ್ಕಾಗಿ ಕ್ಷೇತ್ರದ ಪರವಾಗಿ ಮಾಜಿ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಎಂದು ಶಾಸಕರು ತಿಳಿಸಿದರು.

ಮಾರಗೌಡನಹಳ್ಳಿ ಗ್ರಾಮದಲ್ಲಿ 18 ಕೋಟಿ ರೂ.ವೆಚ್ಚದಲ್ಲಿ ಮೊರಾರ್ಜಿ ವಸತಿ ಶಾಲೆ ಕಟ್ಟಡ ನಿರ್ಮಾಣವಾಗುತ್ತಿದ್ದು ಅದರ ಜತೆಗೆ ಇಲ್ಲಿ ವಿದ್ಯುತ್ ಉಪಕೇಂದ್ರ ಕಾಮಗಾರಿಯನ್ನು ಶೀಘ್ರದಲ್ಲಿ ಆರಂಭಿಸಲಿದ್ದು ಈಗಾಗಲೇ ಕಾವೇರಿ ನದಿಯಿಂದ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಗ್ರಾ.ಪಂ. ಅಧ್ಯಕ್ಷೆ ಸ್ಮಿತಾ, ಉಪಾಧ್ಯಕ್ಷ ಎಂ.ಎಸ್.ನಟರಾಜು, ಸದಸ್ಯರಾದ ಎಂ.ಎಸ್. ಹರಿಚಿದಂಬರ, ರತ್ನಮ್ಮ, ಮೀನಾಕ್ಷಿ, ಬಿಇಓ ಟಿ.ಎನ್.ಗಾಯಿತ್ರಿ, ಯಜಮಾನರಾದ ಸಣ್ಣಪ್ಪ, ಬಸವರಾಜು, ನಾಗರಾಜು, ಗುತ್ತಿಗೆದಾರ ಹೆಚ್.ಎಸ್.ಜಗದೀಶ್, ಲೋಕೋಪಯೋಗಿ ಇಲಾಖೆಯ ಎಇಇ ಜಿ.ಅರವಿಂದ್ ಇದ್ದರು.

# ಹಣ ದುರುಪಯೋಗ: ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

**ಸಂಜೆ ಮುಗಿಲು ನ್ಯೂಸ್, ಮಧುಗಿರಿ :**
ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 6 ವರ್ಷಗಳಿಂದ ವಾರ್ಷಿಕ ಮತ್ತು ಮಾಸಿಕ ಸಭೆಗಳನ್ನು ನಡೆಸದೇ ಇರುವುದು ಮತ್ತು ಕಾರ್ಯದರ್ಶಿ ಹಣ ದುರುಪಯೋಗ ಪಡೆಸಿಕೊಂಡಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ ಮುಂದೆ ಹಾಲು ಉತ್ಪಾದಕರು ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.




ತಾಲ್ಲೂಕಿನ ದೊಡ್ಡೇರಿ ಹೋಬಳಿ, ಕಾರ್ಪೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕಳೆದ 5 ರಿಂದ 6 ವರ್ಷಗಳಿಂದ ವಾರ್ಷಿಕ ಮಹಾಸಭೆಗಳನ್ನು ನಡೆಸಿಲ್ಲ, ಮತ್ತು ಸಹಕಾರ ಸಂಘದ ಬೈಲ ನಿಯಮದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರನ್ನು ಸದಸ್ಯರನ್ನಾಗಿ ತೆಗೆದುಕೊಂಡಿಲ್ಲ, ಹಾಲಿ ಕಾರ್ಯನಿರ್ವಹಿಸುತ್ತಿದ್ದ, ಕಾರ್ಯದರ್ಶಿ ಯಾವುದೇ ಲೆಕ್ಕಪತ್ರ ನೀಡದೆ ಇದ್ದರು, ಕಾನೂನು ಬಾಹಿರವಾಗಿ ನೇಮಿಸಿಕೊಳ್ಳಲಾಗಿದೆ. ಉನ್ನತ ಶಿಕ್ಷಣ ಪಡೆದ ಮಹಿಳೆಯೊಬ್ಬರು ಕಾರ್ಯದರ್ಶಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು, ಪ್ರೌಢಶಿಕ್ಷಣ ಪಡೆದ ವ್ಯಕ್ತಿಯೊಬ್ಬರನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ.

ಹಾಲಿ ಕಾರ್ಯದರ್ಶಿ 5 ಲಕ್ಷದ 80 ಸಾವಿರ ಹಣ ದುರುಪಯೋಗ ಪಡಿಸಿಕೊಂಡಿರುವುದು ಅಧಿಕಾರಿಗಳ ತನಿಖೆಯಿಂದ ತಿಳಿದುಬಂದಿದ್ದು, ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಹಕಾರ ಸಂಘಗಳ ಉಪನಿಬಂಧಕರಿಗೆ ಮತ್ತು ಸಹಕಾರ ಸಚಿವರಿಗೆ ಮನವಿ ಸಲ್ಲಿಸಲಾಗಿದೆ.

ಸಹಕಾರ ಸಂಘಗಳ ನಿಯಮದಂತೆ ವಾರ್ಷಿಕ ಮಹಾಸಭೆ ನಡೆಸದೇ ಇದ್ದರೆ, ಸಂಬಂಧಪಟ್ಟ ಕಾರ್ಯದರ್ಶಿಗೆ ದಂಡ ಹಾಕುವನಿಯಮವಿದೆ. ಆದರೆ ಹಾಲು ಒಕ್ಕೂಟದ ಅಧಿಕರಿಗಳ ಅಸಡ್ಡೆ ಮತ್ತು ನಿರ್ಲಕ್ಷ್ಯ ಮನೋಭಾವದಿಂದ ಕಾರ್ಯದರ್ಶಿಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ದೂರಿದ್ದಾರೆ.

ಪ್ರತಿಭಟನೆಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಕೆ.ಸಿ. ದೇವಣ್ಣ, ರಾಮಚಂದ್ರಪ್ಪ, ಗೋವಿದಂರಾಜು, ಹಾಲು ಉತ್ಪಾದಕರರಾದ ತಿಪ್ಪೇಸ್ವಾಮಿ, ನಿಂಗಪ್ಪ, ರಂಗನಾಥಪ್ಪ, ನಾಗರಾಜು, ಭಾಗವಹಿಸಿದ್ದರು.

## ಮಕ್ಕಳೊಂದಿಗೆ ಬಿಸಿಯೂಟ ಸೇವನೆ



**ಸಂಜೆ ಮುಗಿಲು ನ್ಯೂಸ್, ಚಳ್ಳಕೆರೆ**

ಒಂದರಿಂದ ಐದನೇ ತರಗತಿಯ ಮಕ್ಕಳಿಗೆ ಶಾಲೆಗಳಲ್ಲಿ ಬಿಸಿಯೂಟ ಪ್ರಾರಂಭವಾದ ಪ್ರಯುಕ್ತ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ತಿಪ್ಪೇಸ್ವಾಮಿ ಮಕ್ಕಳೊಂದಿಗೆ ಬಿಸಿಊಟ ಮಾಡಿ ಅಡುಗೆಯ ರುಚಿ ಸವಿದರು.

ತಾಲೂಕಿನ ಚಿಗೇತನಹಳ್ಳಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಬಾಳೆ ಎಲೆಯಲ್ಲಿ ಹೋಳಿಗೆ ಊಟ ಸವಿದಿದ್ದಾರೆ. ಶಾಲೆಯ ಕೈತೋಟಕ್ಕೆ ಭೇಟಿ ನೀಡಿ ಪ್ರಶಂಸಿಸಿದ ಅಧಿಕಾರಿ ತಿಪ್ಪೇಸ್ವಾಮಿ, ಪ್ರತಿಯೊಂದು ಶಾಲೆಯಲ್ಲಿ ಈತರ ಶಾಲಾ ಕೈತೋಟ ನಿರ್ಮಿಸಬೇಕು ಮಕ್ಕಳು ದಿನ ನಿತ್ಯದ ತರಕಾರಿ ಪರಿಚಯವಾಗುತ್ತ ಅದನ್ನು ತಿನ್ನುವ ಆಹಾರ ಪದ್ಧತಿ ನೋಡಿ ಕಲಿಯಬೇಕು ಎಂದಿದ್ದಾರೆ.

ಈ ಸಂಧರ್ಭದಲ್ಲಿ ದಿನೇಶ್ ರೆಡ್ಡಿ, ಸಹಶಿಕ್ಷಕ ಗಂಗಾಧರ ಮುಖ್ಯಶಿಕ್ಷಕ ರಂಗನಾಥ್ ಹೆಚ್, ಹಾಗೂ ಮುಖ್ಯ ಅಡುಗೆಯವರಾದ ಶಾಂತಮ್ಮ ಹಾಜರಿದ್ದರು.

## ಪರಿಸರ ಸ್ನೇಹಿ ದೀಪಾವಳಿ ಆಚರಿಸಿ

**ಸಂಜೆ ಮುಗಿಲು ನ್ಯೂಸ್, ಚಳ್ಳಕೆರೆ**

ದೀಪಾವಳಿ ಹಬ್ಬದ ಸಂದರ್ಭದಲ್ಲಿ ದಿನ ನಿತ್ಯದ ಪಟಾಕಿಗಳನ್ನು ಸಿಡಿಸದೆ ಕೇವಲ ಹಸಿರು, ಪರಿಸರ ಸ್ನೇಹಿ ಪಟಾಕಿಗಳನ್ನು ಹಚ್ಚಿ, ದೀಪವಾಳಿ ಹಬ್ಬ ಆಚರಿಸಿ ಎಂದು ತಹಶೀಲ್ದಾರ್ ಎನ್.ರಘಮೂರ್ತಿ ಕರೆ ನೀಡಿದರು.



ಅವರು ತಾಲೂಕಿನ ತಹಶೀಲ್ದಾರ್ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹಸಿರು ಪಟಾಕಿ ಸಿಡಿಸುವಾಗ ಮಕ್ಕಳು ಜಾಗ್ರತಿಯಿಂದ ಇರಬೇಕು, ಹಬ್ಬದ ಖುಷಿಯಲ್ಲಿ ಪಟಾಕಿ ಸಿಡಿಸುವಾಗ ಎಷ್ಟೋ ಮಕ್ಕಳು ಕಣ್ಣುಗಳನ್ನು ಕಳೆದುಕೊಂಡ ನಿದರ್ಶನಗಳು ಇವೆ ಆದ್ದರಿಂದ ಹಬ್ಬವನ್ನು ಕೇವಲ ಬೆಳಕಿನ ಮೂಲಕ ದೀಪಗಳನ್ನು ಹಚ್ಚುವ ಮೂಲಕ ಆಚರಿಸಿ, ಜಿಲ್ಲಾಧಿಕಾರಿಗಳ ಆದೇಶ ಮೇರೆಗೆ ಪ್ರತಿ ಪಟಾಕಿ ಅಂಗಡಿಗಳಿಗೆ ಕಟ್ಟುನಿಟ್ಟಿನ ಕ್ರಮಕ್ಕೆ ಸೂಚಿಸಲಾಗಿದೆ, ಈಗಾಗಲೇ ಕೋವಿಡ್‌ನಿಂದ ಹಲವು ಜನರು ವಯಸ್ಸಾದವರು ಚೇತರಿಸಿಕೊಂಡು ಗುಣಮುಖರಾಗಿದ್ದಾರೆ. ಆದರೆ ಈ ಪಟಾಕಿ ಹೊಡೆಯುವುದರಿಂದ ಶ್ವಾಸಕೋಶಗಳ ಮೇಲೆ ಪರಿಣಾಮ ಬೀರುತ್ತದೆ ಆದ್ದರಿಂದ ಪಟಾಕಿ ಹೊಡೆಯಲೇಬೇಕು ಎನ್ನುವ ಹಂಬಲವಿದ್ದರೆ ಹಸಿರು ಪಟಾಕಿಯನ್ನು ಒಂದು ದಿನ ಮಾತ್ರ ಹೊಡೆಯಬಹುದು ಎಂದು ಹೇಳಿದ್ದಾರೆ.

ಕೊವಿಡ್ ಮೂರನೇ ಅಲೆ ಮಕ್ಕಳ ಮೇಲೆ ಪರಿಣಾಮ ಬೀರುವುದು ಎಂಬ ತಜ್ಞರ ಅಭಿಪ್ರಾಯದಂತೆ ದೀಪಾವಳಿ ಹಬ್ಬಕ್ಕೆ ಈ ಪಟಾಕಿಯಿಂದ ಮತ್ತೆ ಕೊವಿಡ್ ಮರುಕಳಿಸುವುದು ಬೇಡ. ಈಗಾಗಲೇ ಮೊದಲನೇ ಅಲೆ ಹಾಗೂ ಎರಡನೇ ಅಲೆಯ ಸಾವು–ನೋವುಗಳನ್ನು ಕಣ್ಣಾರೆ ಕಂಡಿದ್ದೇವೆ. ಆದ್ದರಿಂದ ತಾಲೂಕಿನ ಜನತೆ ಯಾರು ಕೂಡ ಪಟಾಕಿ ಸಿಡಿಸದೆ ದೀಪಗಳನ್ನು ಬೆಳಗಿಸುವುದರ ಮೂಲಕ ದೀಪಾವಳಿ ಆಚರಿಸಿ ಎಂದರು.

## ಸರ್ಕಾರಿ ಶಾಲೆಗೆ ಸ್ಮಾರ್ಟ್ ಟಿವಿ ಕೊಡುಗೆ




**ಸಂಜೆ ಮುಗಿಲು ನ್ಯೂಸ್, ಹುಳಿಯಾರು**

ಹುಳಿಯಾರು ಸಮೀಪದ ಕಿಡುಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಇದೇ ಶಾಲೆಯ ಶಿಕ್ಷಕ ಜಿ.ಮಹೇಶ್‌ರವರು 25 ಸಾವಿರ ರೂ ಮೌಲ್ಯದ ಸ್ಮಾರ್ಟ್ ಟಿವಿ ಹಾಗೂ ಚಂದನ ಡಿಶ್‌ನ್ನು ಕೊಡುಗೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಸಿಆರ್‌ಪಿ ಆನಂದ್ ಕುಮಾರ್ ಮಾತನಾಡಿ ಸರ್ಕಾರದಿಂದ ಚಂದನವಾಹಿನಿಯಲ್ಲಿ ಸಂವೇದ ಇ ತರಗತಿಗಳು ಪ್ರಸಾರವಾಗುತ್ತಿದೆ. ಹಳ್ಳಿ ಮಕ್ಕಳು ಈ ಕಾರ್ಯಕ್ರಮ ವೀಕ್ಷಿಸಿ ಬೌದ್ಧಿಕ ಸಾಮರ್ಥ ಬೆಳಸಿಕೊಳ್ಳಲು ದಾನಿಗಳು ನೀಡಿರುವ ಟಿವಿ ನೆರವಾಗುತ್ತದೆ ಎಂದು ತಿಳಿಸಿದರು.

ಯಳನಾಡು ಸಿಆರ್‌ಪಿ ನಾಗರಾಜು ಮಾತನಾಡಿ ಕನ್ನಡಭಾಷೆಯ ಸೊಗಡು ಹಳ್ಳಿಗಳಲ್ಲಿ ಕಾಣಬಹುದು ಅನ್ಯಭಾಷೆಯನ್ನು ನಾವು ಕಲಿಯುತ್ತೇವೆ ಹೊರತು ಅನ್ಯ ಭಾಷಿಕರಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡುತ್ತಿಲ್ಲ. ಇನ್ನಾದರೂ ಈ ಪ್ರಯತ್ನಕ್ಕೆ ಮುಂದಾಗಬೇಕು ಎಂದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಅನುಸೂಯಮ್ಮನವರು ಮಾತನಾಡಿ, ಕಿಡುಕನಹಳ್ಳಿ ಶಾಲೆಯಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡುವ ಮೂಲಕ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮುಂದಾಗುತ್ತಿರುವುದು ಸಂತೋಷಕರ ಸಂಗತಿ ಎಂದರು,

ಮುಖ್ಯಶಿಕ್ಷಕ ಶಶಿಧರ್, ಎಸ್‌ಡಿಎಂಸಿ ಉಪಾಧ್ಯಕ್ಷೆ ಪ್ರತಿಭಾ, ಮಧುರ, ಸುನಂದಾ, ದಕ್ಷಿಣಮೂರ್ತಿ, ಮೋಹನ್‌ಕುಮಾರ್, ಮಲ್ಲಿಕಾರ್ಜುನಯ್ಯ, ರವಿ, ರೇಣುಕಮ್ಮ, ಪಾಲಕ್ಷಮ್ಮ, ದೇವೀರಮ್ಮ, ಚಿಕ್ಕಮ್ಮ, ರವಿಕುಮಾರ್, ಪೋಷಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪರಿಸರ ಅಧ್ಯಯನಕ್ಕೆ ಜೋಗಿಮಟ್ಟಿ ಸೂಕ್ತ ಸ್ಥಳ

**ಸಂಜೆ ಮುಗಿಲು ನ್ಯೂಸ್, ಚಿತ್ರದುರ್ಗ**

ಚಿತ್ರದುರ್ಗದ ಜನತೆಗೆ ಪರಿಸರ ನೀಡಿರುವ ಅತ್ಯುತ್ತಮ ಉಡುಗೊರೆ ಜೋಗಿಮಟ್ಟಿ ಅರಣ್ಯ ಧಾಮ, ಮುಂದಿನ ಜನಾಂಗಕ್ಕೆ ಅರಣ್ಯದ ಬಗ್ಗೆ ಅಭಿಮಾನ ಮೂಡಿಸಲು, ಅದರಲ್ಲೂ ಜೀವ ವೈವಿಧ್ಯಗಳ ಬಗ್ಗೆ ತಿಳುವಳಿಕೆ ಹೆಚ್ಚಿಸಲು ಅತ್ಯುತ್ತಮವಾದ ಸಂಶೋಧನಾ ಕ್ಷೇತ್ರ ಜೋಗಿಮಟ್ಟಿ. ಪ್ರಾಣಿಗಳ ಅಧ್ಯಯನಕ್ಕೆ ಆಡುಮಲ್ಲೇಶ್ವರ. ಸಸ್ಯ ಜಾತಿಗಳ, ಸಸ್ಯ ವೈವಿಧ್ಯದ ಬಗ್ಗೆ, ಔಷಧ ಸಸ್ಯಗಳ ಬಗ್ಗೆ ಅಧ್ಯಯನಕ್ಕಾಗಿ ಜೋಗಿಮಟ್ಟಿಯನ್ನ ಸೂಕ್ತ ವಾದ ಸಂಶೋಧನಾ ಸ್ಥಳವನ್ನಾಗಿ ಜನರಿಗೆ ಪರಿಚಯಿಸಬೇಕು ಎಂದು ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾಧ್ಯಕ್ಷ ಡಾ. ಎಚ್. ಕೆ. ಎಸ್. ಸ್ವಾಮಿ ನುಡಿದರು.

ಅವರು ನಗರದ ಬಳಿ ಇರುವ ಜೋಗಿಮಟ್ಟಿ ಅರಣ್ಯ ಧಾಮದಲ್ಲಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ರೊಟರ್‍ಯಾಕ್ಟ್ ಮತ್ತು ಕಲ್ಪವೃಕ್ಷ ಟ್ರಸ್ಟ್ ಆಯೋಜಿಸಿದ್ದ "ಪರಿಸರ ಸಂರಕ್ಷಣೆ ಬಗ್ಗೆ ಜನಜಾಗೃತಿ" ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೋಗಿಮಟ್ಟಿಗೆ ವೀಕ್ಷಣೆಗೆ ಬರುವ ಸಾಮಾನ್ಯ ಜನರಿಂದ ಹಿಡಿದು, ವಿದ್ಯಾರ್ಥಿಗಳಿಗೆ, ಮಕ್ಕಳಿಗೆ ಪರಿಸರದ ಬಗ್ಗೆ ಜ್ಞಾನ ಹೆಚ್ಚಿಸಲು, ಪರಿಸರದ ಬಗ್ಗೆ ಪ್ರೀತಿ, ಅಭಿಮಾನ ಮೂಡಿಸಲು ಸುಂದರವಾದ, ಪ್ರಕೃತಿಯ ಕೊಡುಗೆ ಜೋಗಿಮಟ್ಟಿ. ಲಕ್ಷಾಂತರ ವೈವಿಧ್ಯಮಯ ಜೀವಿಗಳನ್ನ ಗುರುತಿಸಿ, ಪೋಷಿಸಿ, ಸಂರಕ್ಷಿಸಿದಂತ ಅರಣ್ಯ. ಅದನ್ನ ನಾವು ಬಹಳ ಎಚ್ಚರಿಕೆಯಿಂದ ಉಳಿಸಿಕೊಳ್ಳಬೇಕು. ಜೋಗಿಮಟ್ಟಿಗೆ ಪ್ರವೇಶ ಮಾಡುವ ವೀಕ್ಷಕರು, ಗಲಾಟೆ ಮಾಡದೆ, ಪರಿಸರಕ್ಕೆ ಹೊಂದಿಕೊಂಡಂತ ಜೀವನಶೈಲಿ ಅಳವಡಿಸಿಕೊಂಡು ಒಳಬರಬೇಕು. ಒಳ ಬರುವಾಗ ಕಿರುಚಾಡುವುದು, ಗಲಾಟೆ ಮಾಡುವುದು, ಶಬ್ದ ಮಾಡುವುದು, ಪ್ಲಾಸ್ಟಿಕ್ ಕಸವನ್ನು ಎಸೆಯುವುದು, ಎಲ್ಲೆಂದರಲ್ಲಿ ಬೆಂಕಿ ಹಾಕುವುದು ಮಾಡದಂತೆ, ಅವುಗಳನ್ನ ಸಂರಕ್ಷಿಸಿ ಕೊಳ್ಳುವಂತಹ ಮಾರ್ಗೋಪಾಯಗಳನ್ನು ತಿಳಿದುಕೊಂಡಿರಬೇಕು ಎಂದರು.




ದಾರಿಯಲ್ಲಿ ಸಿಗುವ ವೈವಿಧ್ಯಮಯ ಪ್ರಾಣಿಗಳನ್ನ ತೊಂದರೆಗೊಳಿಸದೇ, ಅವುಗಳು ಹಾದು ಹೋಗಲು ಅವಕಾಶ ಮಾಡಿಕೊಡಬೇಕು. ಕರಡಿ, ಚಿರತೆ, ಜಿಂಕೆ, ಮೊಲ, ಹಾವುಗಳು, ನರಿಗಳು ಸಹ ಅಲ್ಲಿ ರಸ್ತೆ ದಾಟುವ ಅಂತಹ ಸಂದರ್ಭಗಳಲ್ಲಿ, ಜನರು ಸೂಕ್ಷ್ಮವಾಗಿ ಹಿಂದಕ್ಕೆ ಬಂದು, ಸುರಕ್ಷಿತ ಸ್ಥಳವನ್ನು ತಲುಪಿಕೊಳ್ಳಬೇಕು. ತಮ್ಮ ಸುರಕ್ಷತೆ ಬಗ್ಗೆ ಯೋಚಿಸಿದಂತೆಯೇ, ಅವುಗಳ ಸುರಕ್ಷತೆಯ ಬಗ್ಗೆಯೂ ನಾವು ಯೋಚಿಸಬೇಕು. ನಾವು ಅವುಗಳನ್ನು ಗಾಬರಿಪಡಿಸಿದಾಗ, ಅವು ನಮ್ಮ ಮೇಲೆ ಆಕ್ರಮಣ ಮಾಡುವ ಸಂಭವ ಇರುತ್ತದೆ. ಇಂತಹ ಸಾಮಾನ್ಯ ತಿಳುವಳಿಕೆಗೆ ಜನರಿಗೆ ನೀಡಿ ಪರಿಸರ ಅಧ್ಯಯನಕ್ಕೆ ಜನರನ್ನ ಸಿದ್ಧಗೊಳಿಸಬೇಕಾಗಿದೆ ಎಂದರು.

ಪ್ರಾಣಿಗಳ ವಾಸಸ್ಥಳವಾಗಿರುವುದರಿಂದ ಹೆಚ್ಚು ಪ್ರವಾಸಿಗರನ್ನು ಸಹ ಅಲ್ಲಿ ಒಳಗೆ ಬಿಡದಂತೆ, ಸಂರಕ್ಷಣೆ ಮಾಡುತ್ತಿರುವ ಅರಣ್ಯ ಇಲಾಖೆ, ಸೂಕ್ಷ್ಮವಾಗಿ ಹಂತ ಹಂತವಾಗಿ ಜನರನ್ನ, ಪ್ರವಾಸಿಗರನ್ನ, ಅಧ್ಯಯನಕ್ಕೆ ಬಂದಂತವರಿಗೆ ಅವಕಾಶ ಕಲ್ಪಿಸಿಕೊಡುತ್ತಿದೆ. ಶಾಲಾ ಮಕ್ಕಳು, ವೃದ್ಧರು, ಜೋಗಿಮಟ್ಟಿಯನ್ನ ಸುತ್ತಾಡಲು ಕಷ್ಟಕರವಾಗಿರುವುದರಿಂದ, ವಿದ್ಯುತ್ ಚಾಲಿತ, ಸಣ್ಣ ವಾಹನಗಳನ್ನು ಬಳಕೆ ಮಾಡುವಂಥ ವ್ಯವಸ್ಥೆ ಮಾಡಿಕೊಂಡರೆ ಉತ್ತಮ ಎಂದರು.

ಕಾರ್ಯಕ್ರಮದಲ್ಲಿ ರೊಟರ್‍ಯಾಕ್ಟ್ ಎಸ್. ಎಸ್. ರಚನಾ ಮತ್ತು ಹೆಚ್.ಎಸ್, ಪ್ರೇರಣಾ ಪರಿಸರದ ಗೀತೆಗಳನ್ನು ಹಾಡಿ ಜನ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಪ್ರಾಣಿ ಸಂಗ್ರಹಾಲಯದ ಮುಖ್ಯಸ್ಥರಾದ ಆರ್‌ಎಫ್‌ಓ ಶ್ರೀ ವಾಸುದೇವ್, ಅರಣ್ಯ ಇಲಾಖೆಯ ಕಣವಪ್ಪ, ಈರಪ್ಪ, ಪೋಲಿಸ್ ಇಲಾಖೆಯ ವೈರ್‌ಲೆಸ್ ನಿಯಂತ್ರಕರಾದ ಪ್ರದೀಪ್, ಪೈನಾನ್ಸ ನಾಗರಾಜ್, ಆಕಾಶ್ ಕುಮಾರ್, ಹಾಜರಿದ್ದರು.

# ಮಣ್ಣು ಸಾಗಾಟ: ವಾಹನಗಳ ವಶ

**ಸಂಜೆ ಮುಗಿಲು ನ್ಯೂಸ್, ಚಳ್ಳಕೆರೆ**

ಅಕ್ರಮವಾಗಿ ಕೆರೆಯಂಗಳದಲ್ಲಿ ಮಣ್ಣು ಸಾಗಾಟ ಮಾಡುವ ಐದು ವಾಹನಗಳನ್ನು ಚಳ್ಳಕೆರೆ ತಹಶೀಲ್ದಾರ್ ಎನ್. ರಘುಮೂರ್ತಿ ವಶಪಡಿಸಿಕೊಂಡು ದಂಡ ವಿಧಿಸಿದ್ದಾರೆ.



ನಗರದ ಬಳ್ಳಾರಿ ರಸ್ತೆ ಮಾರ್ಗವಾಗಿ ಕರೆಕಲ್ ಕೆರೆಯಂಗಳದಲ್ಲಿ ನಿಯಮ ಬಾಹಿರವಾಗಿ ಕೆರೆಯ ಮಣ್ಣು ಟ್ರಾಕ್ಟರ್ ಹಾಗೂ ಜೆಸಿಬಿ ಮೂಲಕ ಮಣ್ಣು ಸಾಗಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಬಲೆ ಬೀಸಿದ ತಹಶೀಲ್ದಾರ್ ಎನ್.ರಘುಮೂರ್ತಿ ಐದು ವಾಹನಗಳಿಗೆ ಚೇಸ್ ಮಾಡಿ ವಶಕ್ಕೆ ಪಡೆದು ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿ ದಂಡ ವಿಧಿಸಿದ್ದಾರೆ.

ಪ್ರತ್ರಿಕೆಯೊಂದಿಗೆ ಮಾತನಾಡಿದ ತಹಶೀಲ್ದಾರ್ ಎನ್.ರಘುಮೂರ್ತಿ, ಕೆರೆ, ಹಳ್ಳ ಕುಂಟೆ, ಗೋಮಾಳದಲ್ಲಿ ಅಕ್ರಮವಾಗಿ ಖನಿಜ ಸಂಪತ್ತು ತೆಗೆಯುವ ದಂಧೆಕೊರರ ಮೇಲೆ ಕ್ರಮಕ್ಕೆ ಗೊಳ್ಳಲಾಗಿದೆ ಎಂದಿದ್ದಾರೆ.

ಈಗಾಗಲೆ ತಾಲೂಕಿನಲ್ಲಿ ಗೋಮಾಳ ಒತ್ತುವರಿಯಾಗಿರುವ 120 ಎಕರೆ ಸರಕಾರಿ ಜಮೀನನ್ನು ಸರಕಾರದ ಸುಪರ್ದಿಗೆ ಪಡೆದಿವೆ. ಯಾರಾದರೂ ಸರಕಾರಿ ಜಮೀನು ಒತ್ತುವರಿ ಮಾಡಿದರೆ ಕ್ರಿಮಿನಲ್ ಪ್ರಕರಣ ಭೂ ಕಂದಾಯ 192ಎ ಕಾಯ್ದೆಯಲ್ಲಿ ಕಟ್ಟುನಿಟ್ಟಿನ ಕ್ರಮಗೊಳ್ಳಲಾಗುವುದು. ಚಳ್ಳಕೆರೆ ನಗರದ ಕೆರೆ ಹಾಗೂ ಗೋಮಾಳ ಸರಕಾರಿ ರಜಾ ದಿನಗಳಲ್ಲಿ ಅನ್ಯ ಉದ್ದೇಶಗಳಿಗೆ, ಲೇಔಟ್‌ಗಳಿಗೆ ಖನಿಜ ಸಂಪತ್ತು ಬಳಕೆ ಮಾಡುವುದು ಕಂಡು ಬಂದಿದೆ. ಈ ಹಿನ್ನಲೆಯಲ್ಲಿ ಇಂದು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳಲಾಗುವುದು. ಆದ್ದರಿಂದ ತಾಲೂಕಿನಲ್ಲಿ ಈಗಾಗಲೇ ನಮ್ಮ ಚಳ್ಳಕೆರೆ ವಾಟ್ಸಪ್ ಗ್ರೂಪ್ ಹಾಗೂ ಫೇಸ್‌ಬುಕ್‌ಗೆ ಸಾರ್ವಜನಿಕರು ಇಂತಹ ಕಾನೂನು ಬಾಹಿರ ಚಟುವಟಿಕೆಗಳ ಕಂಡು ಬಂದರೆ ಫೋಟೋ ಸಮೇತ ಹಾಕಿದರೆ ಫೋಟೋ ಹಾಕಿದ ಅರ್ಧ ಗಂಟೆಯೊಳಗೆ ಶಿಸ್ತುಕ್ರಮ ವಹಿಸಲಾಗುತ್ತದೆ.

ಆದ್ದರಿಂದ ತಾಲೂಕಿನ ಜನತೆ ಅಧಿಕಾರಿಗಳೊಂದಿಗೆ ಕೈ ಜೋಡಿಸಬೇಕು ಎಂದಿದ್ದಾರೆ.

## ವ್ಯಕ್ತಿ ಆತ್ಮಹತ್ಯೆ

**ಸಂಜೆ ಮುಗಿಲು ನ್ಯೂಸ್, ಚಳ್ಳಕೆರೆ**

ಚೌಳೂರು ಬ್ಯಾರೇಜ್‌ಗೆ ವ್ಯಕ್ತಿಯೊಬ್ಬ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

ತಾಲೂಕಿನ ಪರಶುರಾಂಪುರ ಹೋಬಳಿಯ ಚೌಳೂರು ಗ್ರಾಮದ ಬ್ಯಾರೇಜ್ ನಲ್ಲಿ ಈ ದುರ್ಘಟನೆ ನಡೆದಿದೆ. ಟಿವಿಎಸ್ ಸ್ಕೂಟರ್ ವಾಹನಕ್ಕೆ ತನ್ನನ್ನ ಕಟ್ಟಿಕೊಂಡು ವೇಗವಾಗಿ ಬಂದು ಬ್ಯಾರೇಜ್‌ಗೆ ಸ್ಕೂಟರ್ ಸಮೇತ ಹಾರಿದ್ದು ಸ್ಥಳೀಯರು ನೋಡಿ ಬರುವಷ್ಟರಲ್ಲಿ ವ್ಯಕ್ತಿ ಸಾವನಪ್ಪಿದ್ದಾನೆ ಎನ್ನಲಾಗಿದೆ.

ಮೃತ ವ್ಯಕ್ತಿಯು ಚಳ್ಳಕೆರೆ ನಗರದ ಚಿತ್ರಯ್ಯನಹಟ್ಟಿಯ ಕೊರಮ ಜನಾಂಗದ ರಾಮಕೃಷ್ಣ (45) ಎನ್ನಲಾಗಿದೆ, ಸಾವಿಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಈ ಪ್ರಕರಣ ಚಳ್ಳಕೆರೆ ತಾಲೂಕಿನ ಪರುಶುರಾಂಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

## ನ.15 ರಿಂದ ಶಬರಿಮಲೆ ಭಕ್ತಾಧಿಗಳಿಗೆ ಮುಕ್ತ

**ಸಂಜೆ ಮುಗಿಲು ನ್ಯೂಸ್, ಕೊಚ್ಚಿ**



ಕೇರಳದ ಶಬರಿಮಲೆಯ ಅಯ್ಯಪ್ಪ ದೇವಾಲಯವು ನ. 15 ರಿಂದ ಎರಡು ತಿಂಗಳು ತೀರ್ಥಯಾತ್ರೆಗಾಗಿ ತೆರೆಯಲಿದೆ ಎಂದು ದೇವಾಲಯದ ದೈನಂದಿನ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳುವ ತಿರುವಾಂಕೂರು ದೇವಸ್ವಂ ಬೋರ್ಡ್ ತಿಳಿಸಿದೆ.

ವೇಳೆ ಭಕ್ತಾದಿಗಳು ತಮ್ಮೊಂದಿಗೆ ಕೋವಿಡ್ ಲಸಿಕೆಯ ಪ್ರಮಾಣಪತ್ರವನ್ನು, ಜತೆಗೆ 72 ಗಂಟೆಗಳೊಳಗಿನ ಕೋವಿಡ್ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹಾಜರು ಪಡಿಸಬೇಕು ಎಂದು ಟಿಡಿಬಿ ತಿಳಿಸಿದೆ.

ಕೇರಳದ ಪಟ್ಟನಂತಿಟ್ಟ ಜಿಲ್ಲೆಯ ದೇವಾಲಯವು ಬುಧವಾರ ಚಿತಿರಾ ಅಟ್ಟವಿಶೇಷ ಪೂಜೆಗಾಗಿ ಭಕ್ತಾದಿಗಳಿಗೋಸ್ಕರ ತೆರೆಯಲ್ಪಟ್ಟಿತ್ತು. ಪೂಜೆಯ ನಂತರ ರಾತ್ರಿ 9 ಘಂಟೆಗೆ ಮುಚ್ಚಲಾಯಿತು. ಭಕ್ತಾದಿಗಳನ್ನು ವರ್ಚುವಲ್ ಕ್ಯೂ ಬುಕಿಂಗ್ (ಃಠಠಇಟಿರ) ವ್ಯವಸ್ಥೆಯ ಮೂಲಕ ಅನುಮತಿಸಲಾಗಬಹುದು ಎಂದು ಬೋರ್ಡ್ (ಃಠಚಿಡಿಜ) ತಿಳಿಸಿದೆ.

ನಿರಂತರವಾಗಿ ಭಾರಿ ಮಳೆ ಸುರಿದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಕೇರಳದ ಪತ್ತನಂತಿಟ್ಟಜಿಲ್ಲೆಯಲ್ಲಿರುವ ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಅ.21ರವರೆಗೆ ಭಕ್ತರಿಗೆ ಪ್ರವೇಶ ನಿಷೇಧಿಸಲಾಗಿತ್ತು. ತುಲಾಮಾಸ ಹಿನ್ನೆಲೆಯಲ್ಲಿ ಕೆಲವು ದಿನಗಳ ಹಿಂದಷ್ಟೇ ಅಯ್ಯಪ್ಪಸ್ವಾಮಿ ದೇವಸ್ಥಾನ ತೆರೆಯಲಾಗಿತ್ತು. ಅದರ ಬೆನ್ನಲ್ಲೆ ಮಳೆ, ಪ್ರವಾಹದಿಂದಾಗಿ ಭಕ್ತರ ಪ್ರವೇಶ ನಿರಾಕರಿಸಿದ್ದಕ್ಕೆ ಲಕ್ಷಾಂತರ ಭಕ್ತರಿಗೆ ನಿರಾಸೆ ಉಂಟಾಗಿದೆ. ಅಯ್ಯಪ್ಪನ ದರ್ಶನ ಪಡೆಯಲು ಹಾಗೂ ತುಲಾಮಾಸದ ವಿಶೇಷ ಪೂಜೆ ಅರ್ಪಿಸಲು ಬರುವ ಭಕ್ತರಿಗೆಲ್ಲ ವಾಪಸ್ ತೆರಳುವಂತೆ ಸೂಚಿಸಲಾಗಿದೆ ಎಂದು ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಕರ್ನಾಟಕ ರಸ್ತೆ ಸುರಕ್ಷತಾ ನೀತಿ ಜಾರಿ: ಮಾನೆ

**ಸಂಜೆ ಮುಗಿಲು ನ್ಯೂಸ್, ಮೈಸೂರು**

ಸರ್ವೋಚ್ಛ ನ್ಯಾಯಾಲಯದ ಸರ್ವೋಚ್ಛ ನ್ಯಾಯಾಲಯದ ರಸ್ತೆ ಸುರಕ್ಷತಾ ಸಮಿತಿಯ ನಿರ್ದೇಶನದಂತೆ ಕರ್ನಾಟಕ ಸರ್ಕಾರವು 21–09–2015 ರನ್ವಯ "ಕರ್ನಾಟಕ ರಸ್ತೆ ಸುರಕ್ಷತಾ ನೀತಿ"ಯನ್ನು ಜಾರಿಗೆ ತಂದಿದೆ ಎಂದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರು ಹಾಗೂ ನ್ಯಾಯಧೀಶರಾದ ಮಾನೆಯವರು ತಿಳಿಸಿದರು.



ಅವರು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಬಸ್ ನಿಲ್ದಾಣದಲ್ಲಿ ರಸ್ತೆ ಸುರಕ್ಷತೆ ಹಾಗೂ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ತಿಳಿಸಿದರು.

ಈ ನೀತಿಯು ಇಲಾಖೆಯ ಪಾಲುದಾರ ಸಂಸ್ಥೆಗಳಿಗೆ ಮತ್ತು ಸಾರ್ವಜನಿಕರಿಗೆ (ಎ) ರಸ್ತೆ ಬಳಕೆದಾರರಿಗೆ ಸುರಕ್ಷಿತ ರಸ್ತೆ ಜಾಲವನ್ನು ಒದಗಿಸುವ ದೃಷ್ಟಿಯಿಂದ, ಪಾದಚಾರಿಗಳಿಗೆ ಮತ್ತು ಸೈಕಲ್ ಸವಾರರಿಗೆ ಆದ್ಯತೆ ನೀಡಿ, ಮುಂಬರುವ ದಿನಗಳಲ್ಲಿ ಶೇಕಡ 0% ರಷ್ಟು ಅಪಘಾತಗಳನ್ನು ಸಾಧಿಸಲು ಮತ್ತು (ಬಿ) 2020 ರೊಳಗೆ 25% ರಷ್ಟು ಅಪಘಾತಗಳನ್ನು ಮತ್ತು 30% ಜೀವಹಾನಿಗಳನ್ನು ಕಡಿಮೆ ಮಾಡುವ ಗುರಿ ಹೊಂದಿದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ದೇಶದಾದ್ಯಂತ ರಸ್ತೆ ಸುರಕ್ಷತಾ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಸರ್ಕಾರ ಒಂದು ಸಮಿತಿಯನ್ನು "ಸರ್ವೋಚ್ಛ ನ್ಯಾಯಾಲಯದ ರಸ್ತೆ ಸುರಕ್ಷತಾ ಸಮಿತಿ" ಯನ್ನು ರಚಿಸಿದೆ. ಈ ಸಮಿತಿಯು ದೇಶಾದ್ಯಂತ ರಸ್ತೆ ಸುರಕ್ಷತಾ ಚಟುವಟಿಕೆಯಲ್ಲಿ ಭಾಗವಹಿಸಿದವರನ್ನು ಉಸ್ತುವಾರಿ ಮಾಡುತ್ತದೆ. ಸದರಿ ರಸ್ತೆ ಸುರಕ್ಷತಾ ಸಮಿತಿಯು ರಾಜ್ಯಗಳಿಗೆ ಅಪಘಾತ ಸಂಭವಿಸುವ ಜಾಗಗಳನ್ನು ಅಭಿವೃದ್ಧಿಪಡಿಸಲು ಮಾರ್ಗೋಪಾಯಗಳನ್ನು ಕೈಗೊಳ್ಳಲು ನಿರ್ದೇಶನ ನೀಡಿರುತ್ತದೆ ಹಾಗೂ ಕಾಲಮಿತಿಯೊಳಗೆ ಗುರುತಿಸಲಾಗಿರುವ ಕಪ್ಪು ಸ್ಥಳಗಳನ್ನು ಸರಿಪಡಿಸಲು ಯೋಜನೆಗಳನ್ನು ಕೈಗೊಳ್ಳಲು ನಿರ್ದೇಶಿಸಿರುತ್ತದೆ. ಈ ಸಮಿತಿಯು ರಾಜ್ಯಗಳಿಗೆ ವಾರ್ಷಿಕ ಕ್ಯಾಲೆಂಡರ್ ತಯಾರಿಸಲು/ ಕಪ್ಪು ಸ್ಥಳಗಳನ್ನು ನಿರ್ವಹಿಸಲು ಕ್ರಮಗಳನ್ನು ಕೈಗೊಳ್ಳಲು ನಿರಂತರವಾಗಿ ನಿರ್ದೇಶಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾರಿಗೆ ಸಂಸ್ಥೆಯಿಂದ ಲೆಕ್ಕಪತ್ರ ಅಧಿಕಾರಿಗಳು ಹಾಗೂ ಮೇಲ್ವಿಚಾರಕರಾದ ಗಂಗಾಧರಸ್ವಾಮಿ, ಮತ್ತು ಪ್ರಶಾಂತ್ ಎಟಿಐ ಹಾಗೂ ಕೊತ್ವಾಲ್ ನಾಯಕ್ ಸೇರಿದಂತೆ ಪ್ರಾದೇಶಿಕ ಸಾರಿಗೆ ಇಲಾಖೆರವರು ಭಾಗವಹಿಸಿದರು.

## ಪುನೀತ್‌ಗೆ ಶ್ರದ್ಧಾಂಜಲಿ

**ಸಂಜೆ ಮುಗಿಲು ನ್ಯೂಸ್, ಮೈಸೂರು:**

ಎಸ್ ಚಿಕ್ಕಮಾದು ಅಭಿಮಾನಿಗಳ ಬಳಗ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ . ಅಭಿಮಾನಿಗಳಿಂದ ದಿವಂಗತ ಚಿಕ್ಕಮಾದು ಸಾಹೇಬರ 4ನೇ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಕನ್ನಡದ ಖ್ಯಾತ ನಟ ದೊಡ್ಡಮನೆ ಹುಡುಗ ಮಕ್ಕಳಿಗೆಲ್ಲಾ ಪ್ರಿಯವಾದ ಅಪ್ಪು ಪುನೀತ್ ರಾಜಕುಮಾರ್ ರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.ನಾಡಿನ ಸಮಸ್ತ ಜನತೆಗೆ ಸಂಸ್ಕೃತ ರಾಮಾಯಣವನ್ನು ರಚಿಸಿದ ಆದಿಕವಿ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಹಾಗೂ ಕನ್ನಡ ರಾಜ್ಯೋತ್ಸವ ಪ್ರಯುಕ್ತ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಅರ್ಪಿಸಲಾಯಿತು.



ಈ ಸಂದರ್ಭದಲ್ಲಿ ಹುಣಸೂರು ಶಾಸಕ ಎಚ್.ಪಿ.ಮಂಜುನಾಥ್, ಎಂ.ಶಿವಣ್ಣ ಅಧ್ಯಕ್ಷರು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷರಾದ ದ್ಯಾವಪ್ಪನಾಯಕ, ಪ್ರಭಾಕರ ಹುಣಸೂರು, ಉಮಾಶಂಕರ್ ಮೈಸೂರು ದಿ ಕೋಪರೇಟಿವ್ ಬ್ಯಾಂಕ್ ಗಾಂಧಿ ಚೌಕ ಪಡುವಾರಹಳ್ಳಿ ಎಂ. ರಾಮಕೃಷ್ಣ ಉಪಾಧ್ಯಕ್ಷರು ಮಾಜಿ ಮೇಯರ್ ನಾರಾಯಣ ಮಹಾನಗರ ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಮೈಮುಲ್ ನಿರ್ದೇಶಕ ಕೆ ಈರೇಗೌಡ, ಎಚ್‌ಡಿ ಕೋಟೆ ತಾಲೂಕು ನಾಯಕರ ಸಂಘದ ಗೌರವಾಧ್ಯಕ್ಷ ಎಂ ಸಿ ದೊಡ್ಡನಾಯಕ, ಹುಣಸೂರು ಅಣ್ಣಯ್ಯ ನಾಯಕ ಇತರರಿದ್ದರು.

# ಬಿಟ್ ಕಾಯಿನ್ ಹಗರಣ ಇಡಿಗೆ ವಹಿಸಲು ಕಾಂಗ್ರೆಸ್ ಆಗ್ರಹ

**ಸಂಜೆ ಮುಗಿಲು ನ್ಯೂಸ್, ಬೆಂಗಳೂರು:**

ಅಂತಾರಾಷ್ಟ್ರೀಯ ಮಟ್ಟದ ಬಿಟ್ ಕಾಯಿನ್ ಹಗರಣ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿದ್ದು, ಪ್ರಕರಣದ ತನಿಖೆಗೆ ಇಡಿಗೆ ಬರೆದಿರುವ ಪತ್ರವನ್ನು ಬಹಿರಂಗಪಡಿಸಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.




ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಶಿವಕುಮಾರ್ ಅವರು, 'ರಾಜ್ಯ ಸರ್ಕಾರ ಈ ಪ್ರಕರಣ ಕುರಿತು ಆರೋಪಪಟ್ಟಿ ಸಲ್ಲಿಸಿರುವುದಾಗಿ ಹೇಳಿದೆ. ಆರೋಪ ಪಟ್ಟಿ ಸಲ್ಲಿಸಿದ್ದರೆ, ಈ ಪ್ರಕರಣದ ತನಿಖೆಯನ್ನು ಇಡಿಗೆ ನೀಡುವ ಅಗತ್ಯ ಏನಿತ್ತು?' ಎಂದು ಪ್ರಶ್ನಿಸಿದರು.

ಬಿಟ್‌ಕಾಯಿನ್ ವಿಚಾರವಾಗಿ ಸರ್ಕಾರ ಗೊಂದಲದ ಹೇಳಿಕೆ ನೀಡುತ್ತಿದೆ. ವಿರೋಧಪಕ್ಷವಾಗಿ ನೀವು ಯಾವುದೇ ಮಾಹಿತಿ ನೀಡುತ್ತಿಲ್ಲ ಎಂದು ಮಾಧ್ಯಮಗಳು ಪ್ರಸ್ತಾಪಿಸಿದಾಗ, 'ಈ ಪ್ರಕರಣವನ್ನು ಇಡಿ ತನಿಖೆಗೆ ನೀಡಲಾಗಿದೆ ಎಂದು ಸಿಎಂ ಹೇಳಿಕೆ ಕೊಟ್ಟಿದ್ದನ್ನು ನಾನು ಮಾಧ್ಯಮಗಳಲ್ಲಿ ನೋಡಿದ್ದೇನೆ. ರಾಜ್ಯ ಸರ್ಕಾರ ಕಳೆದ 15 ದಿನಗಳಲ್ಲಿ ಈ ಪ್ರಕರಣದ ತನಿಖೆ ಮಾಡುವಂತೆ ತನಿಖಾ ಸಂಸ್ಥೆಗೆ ಬರೆದಿರುವ ಪತ್ರವನ್ನು ಬಹಿರಂಗಪಡಿಸಲಿ. ಮುಖ್ಯಮಂತ್ರಿಗಳು ಹೇಳಿದ ಮಾತ್ರಕ್ಕೆ ನಂಬಲು ಸಾಧ್ಯವಿಲ್ಲ. ಅವರು ದಾಖಲೆ ಬಿಡುಗಡೆ ಮಾಡಲಿ. ಜತೆಗೆ ಈ ಪ್ರಕರಣದ ಬಗ್ಗೆ ಈ ಹಿಂದೆ ಯಾವ ತನಿಖಾ ಸಂಸ್ಥೆ ತನಿಖೆ ಮಾಡಿತ್ತು, ಯಾವ ಹಂತದಲ್ಲಿ ತನಿಖೆ ಇತ್ತು, ಯಾರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು, ಎಷ್ಟು ಜನರನ್ನು ಬಂಧಿಸಲಾಗಿದೆ, ತನಿಖೆ ಮಾಡಿದ ಅಧಿಕಾರಿಗಳು ಯಾರು? ಯಾವ ವರದಿ ನೀಡಲಾಗಿತ್ತು, ಆ ತನಿಖೆಯಲ್ಲಿ ಸಿಕ್ಕ ಮಾಹಿತಿ ಏನು? ಯಾರ್ಯಾರು ಭಾಗಿಯಾಗಿದ್ದಾರೆ ಎಂಬ ದಾಖಲೆಗಳನ್ನು ಸಿಎಂ ಬಿಡುಗಡೆ ಮಾಡಲಿ ಎಂದು ಆಗ್ರಹಿಸುತ್ತೇನೆ.

ಈ ಬಿಟ್ ಕಾಯಿನ್ ಅಂದರೆ ಏನು, ಇದರ ಮಾಲೀಕರು ಯಾರು, ಯಾವ ಕಾಯ್ದೆ, ಸೆಕ್ಷನ್ ಅಡಿ ಪ್ರಕರಣವನ್ನು ತನಿಖಾ ಸಂಸ್ಥೆಗೆ ನೀಡಲಾಗಿದೆ? ಎಂಬ ಮಾಹಿತಿ ನೀಡಲಿ. ಈ ಪ್ರಕರಣದ ಬಗ್ಗೆ ಆರೋಪಪಟ್ಟಿ ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಆರೋಪಪಟ್ಟಿ ಸಲ್ಲಿಸಿದ ಮೇಲೆ ಇಡಿಗೆ ಯಾಕೆ ಹೋಗಬೇಕು? ಹೀಗಾಗಿ ಈ ಬಗ್ಗೆ ಜನರಿಗೆ ಸ್ಪಷ್ಟ ಚಿತ್ರಣ ನೀಡಬೇಕು. ಯಾರು ಡ್ರಗ್ ನಲ್ಲಿ, ಬಿಟ್ ಕಾಯಿನ್ ನಲ್ಲಿ ಈಜಿದ್ದಾರೋ ಗೊತ್ತಿಲ್ಲ. ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಈ ಪ್ರಕರಣ ಇರುವುದರಿಂದ ಈ ಕುರಿತ ಮಾಹಿತಿಯನ್ನು ಸರ್ಕಾರವೇ ನೀಡಬೇಕು. ವಿರೋಧ ಪಕ್ಷದ ಕೆಲಸ ತನಿಖೆ ಮಾಡಿ ಎಂದು ಆಗ್ರಹಿಸುವುದಾಗಿದೆ. ಮೊದಲು ಅವರು ತನಿಖೆಗೆ ಕೊಟ್ಟಿರುವ ವಿವರಗಳನ್ನು ಬಹಿರಂಗಪಡಿಸಲಿ, ಆ ಮೇಲೆ ವಿರೋಧ ಪಕ್ಷವಾಗಿ ಏನು ಮಾಡಬೇಕು ಎಂದು ನಮಗೆ ಗೊತ್ತಿದೆ' ಎಂದು ಉತ್ತರಿಸಿದರು.

2018ರಲ್ಲಿ ಈ ಪ್ರಕರಣ ದಾಖಲಾಗಿದ್ದು, ಆಗ ಯಾರು ಮುಖ್ಯಮಂತ್ರಿಗಳಿದ್ದರು, ಆಗ ಶಿವಕುಮಾರ್ ಅವರು ಯಾವ ಸಚಿವರಾಗಿದ್ದರು ಎಂದು ಬಿಜೆಪಿ ನಾಯಕರು ಕೇಳಿರುವ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, 'ಅವರು ನನ್ನ ಹೆಸರು ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ನನ್ನ ಹೇಸರನ್ನೂ ಸೇರಿಸಿ ತನಿಖೆಗೆ ಆದೇಶಿಸಲಿ. ನಾನು ತಪ್ಪು ಮಾಡಿದ್ದರೆ ನನ್ನ ತನಿಖೆಯೂ ಆಗಬೇಕಲ್ಲವೇ? ನನ್ನ ಮೇಲೆ ಕೇಸ್ ದಾಖಲಿಸುವಾಗ ಆದಾಯ ಇಲಾಖೆ ಪತ್ರ ಪಡೆದು, ಜಾರಿ ನಿರ್ದೇಶನಾಲಯದ ಮಾಹಿತಿ ಪಡೆದು ನಂತರ ಸಿಬಿಐಗೆ ಸರ್ಕಾರ ಪ್ರಕರಣವನ್ನು ವಹಿಸಿತ್ತು. ಅದೇ ರೀತಿ ಈಗಲೂ ಇಡಿಗೆ ತನಿಖೆಗೆ ಆದೇಶಿಸಿರುವ ಪತ್ರ ಅಥವಾ ದಾಖಲೆ ನೀಡಲಿ' ಎಂದರು.

ಕಾಂಗ್ರೆಸ್ ಕೇವಲ ಆರೋಪ ಮಾಡುತ್ತಿದ್ದು, ಯಾರ ಹೆಸರನ್ನೂ ಸ್ಪಷ್ಟವಾಗಿ ಹೇಳುತ್ತಿಲ್ಲ ಯಾಕೆ? ಎಂದು ಕೇಳಿದಾಗ, 'ನಾನು ಯಾವುದೇ ಆರೋಪ ಮಾಡುತ್ತಿಲ್ಲ. ಕೇವಲ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ನೀಡಬೇಕಿರುವ ಮಾಹಿತಿ ಬಹಿರಂಗ ಪಡಿಸುವಂತೆ ಆಗ್ರಹಿಸುತ್ತಿದ್ದೇನೆ ಎಂದರು.

ಪುನೀತ್ ರಾಜ್ ಕುಮಾರ್ ಅವರ ಹೆಸರನ್ನು ನಗರದ ಪ್ರಮುಖ ರಸ್ತೆಗೆ ಇಡಬೇಕು, ಅವರಿಗೆ ಕರ್ನಾಟಕ ರತ್ನ ಹಾಗೂ ಪದ್ಮಶ್ರೀ ಪ್ರಶಸ್ತಿ ನೀಡಬೇಕು ಎಂಬ ಒತ್ತಾಯ ಕೇಳಿಬರುತ್ತಿರುವ ವಿಚಾರವಾಗಿ, 'ಪುನೀತ್ ಅವರು, ರಸ್ತೆಗೆ ಹೆಸರಿಡುವುದರಿಂದ ಕರ್ನಾಟಕ ರತ್ನ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿವರೆಗೂ ಎಲ್ಲದಕ್ಕೂ ಅರ್ಹರು ಎಂದರು.

ಹಿಂದೆ ನಮ್ಮ ಬಂಗಾರಪ್ಪನವರ ಸರಕಾರವಿದ್ದಾಗ ಪುನೀತ್ ಅವರ ತಂದೆ ರಾಜಕುಮಾರ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಲಾಗಿತ್ತು. ಪುತ್ರ ಪುನೀತ್ ಅವರಿಗೂ ಕರ್ನಾಟಕ ರತ್ನ, ಪದ್ಮಶ್ರೀ ಪ್ರಶಸ್ತಿ ನೀಡಲು ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿ ಅವರನ್ನು ಒತ್ತಾಯಿಸುತ್ತೇನೆ.

## ದೀಪಾವಳಿ ಶುಭಾಶಯಗಳು

ಪುನೀತ್ ರಾಜಕುಮಾರ್ ಅವರ ನಿಧನದಿಂದ ರಾಜ್ಯ ಈ ಬಾರಿ ಬಹಳ ಕೆಟ್ಟ ಕನ್ನಡ ರಾಜ್ಯೋತ್ಸವ ಕಂಡಿದೆ. ಬೆಳಕಿನ ಹಬ್ಬ ದೀಪಾವಳಿ ಆಗಮಿಸುತ್ತಿದ್ದು, ಕಳೆದ ಒಂದೂವರೆ ವರ್ಷದಿಂದ ಕೋವಿಡ್ ಪರಿಣಾಮ ರಾಜ್ಯ ಹಾಗೂ ದೇಶ ಕತ್ತಲೆಯಲ್ಲಿ ಮುಳುಗಿದ್ದು, ಈ ಹಬ್ಬದ ಮೂಲಕ ಎಲ್ಲರೂ ಬೆಳಕು ಪಡೆಯಲಿ ಎಂದು ವೈಯಕ್ತಿಕವಾಗಿ ಹಾಗೂ ಪಕ್ಷದ ಪರವಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ನಮ್ಮ ಧರ್ಮದ ಬಗ್ಗೆ ಕೆಲವರಿಗೆ ನಂಬಿಕೆ ಇಲ್ಲದಿರಬಹುದು. ಆದರೆ ಇಡೀ ಪ್ರಪಂಚದುದ್ದಗಲಕ್ಕೂ ನಮ್ಮ ಸಂಸ್ಕೃತಿಯ ಪ್ರತೀಕವಾಗಿರುವ ದೀಪಾವಳಿಯನ್ನು ಬೆಳಕಿನ ಹಬ್ಬ ಎಂದು ಆಚರಿಸುತ್ತಾರೆ. ಈ ಹಬ್ಬವನ್ನು ಅಮೆರಿಕದ ಶ್ವೇತಭವನದಲ್ಲೂ ಆಚರಣೆ ಮಾಡಲಾಗುತ್ತದೆ. ಈ ಹಬ್ಬವನ್ನು ಲಕ್ಷ್ಮಿ ಪೂಜೆಯಿಂದ ಬಲಿಪಾಡ್ಯಮಿವರೆಗೂ ಆಚರಿಸುತ್ತೇವೆ. ಈ ಸಜದರ್ಭದಲ್ಲಿ ಎಲ್ಲರಿಗೂ ಶುಭಾಶಯ ಕೋರುತ್ತೇನೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054



ಅಬುದಾಬಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಆಫ್ಘಾನಿಸ್ತಾನ ತಂಡವನ್ನು ನಿಗದಿತ 20 ಓವರ್ ಗಳಲ್ಲಿ 144/7ಕ್ಕೆ ಕಟ್ಟಿಹಾಕುವ ಮೂಲಕ ಭಾರತ ತಂಡ 66 ರನ್ ಗಳ ಬೃಹತ್ ಜಯ ಗಳಿಸಿದೆ. ಟೂರ್ನಿಯಲ್ಲಿ ಭಾರತಕ್ಕೆ ಇದು ಮೊದಲ ಗೆಲುವಾಗಿದೆ.

# ಆಫ್ಘಾನಿಸ್ತಾನ ವಿರುದ್ಧ ಭಾರತಕ್ಕೆ ಭರ್ಜರಿ ಜಯ




**ಸಂಜೆ ಮುಗಿಲು ನ್ಯೂಸ್, ಅಬುದಾಬಿ**

ಟಿ20 ವಿಶ್ವಕಪ್ ಟೂರ್ನಿಯ ಗ್ರೂಪ್ 2 ಹಂತದ ಪಂದ್ಯದಲ್ಲಿ ಭಾರತ ತಂಡ ಆಫ್ಘಾನಿಸ್ತಾನದ ವಿರುದ್ಧ 66 ರನ್ ಗಳ ಭರ್ಜರಿ ಜಯ ಸಾಧಿಸಿದೆ.

ಅಬುದಾಬಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಆಫ್ಘಾನಿಸ್ತಾನ ತಂಡವನ್ನು ನಿಗದಿತ 20 ಓವರ್ ಗಳಲ್ಲಿ 144/7ಕ್ಕೆ ಕಟ್ಟಿಹಾಕುವ ಮೂಲಕ ಭಾರತ ತಂಡ 66 ರನ್ ಗಳ ಬೃಹತ್ ಜಯ ಗಳಿಸಿದೆ. ಟೂರ್ನಿಯಲ್ಲಿ ಭಾರತಕ್ಕೆ ಇದು ಮೊದಲ ಗೆಲುವಾಗಿದೆ.

ಭಾರತ ನೀಡಿದ 211 ರನ್ ಗಳ ಬೃಹತ್ ಗುರಿಯನ್ನು ಬೆನ್ನು ಹತ್ತಿದ ಆಫ್ಘಾನಿಸ್ತಾನ ಆರಂಭಿಕ ಆಘಾತ ಎದುರಿಸಿತು. ಆರಂಭಿಕರಾದ ಮಹಮದ್ ಶಹ್ಜಾದ್ (0) ಮತ್ತು ಹಜ್ರತ್ತುಲ್ಲಾ (13) ಬೇಗನೆ ಔಟ್ ಆದರು. ಬಳಿಕ ಜೊತೆಗೂಡಿದ ಗುರ್ಬಾಜ್ ಮತ್ತು ನೈಬ್ ಜೋಡಿ ಕೊಂಚ ಪ್ರತಿರೋಧ ಒಡ್ಡಿದರಾದರೂ 37 ರನ್ ಈ ಜೊತೆಯಾಟ ಅಂತ್ಯವಾಯಿತು. ಅಂತಿಮ ಹಂತದಲ್ಲಿ ನಾಯಕ ನೈಬ್ (35 ರನ್)ಕರೀಮ್ ಜನತ್ (ಅಜೇಯ 42 ರನ್) ಭಾರತಕ್ಕೆ ಪ್ರತಿರೋಧ ತೋರಿದರೂ ಅಷ್ಟು ಹೊತ್ತಿಗಾಗಲೇ ಪಂದ್ಯ ಕೈ ಜಾರಿತ್ತು. ಅಂತಿಮವಾಗಿ ಆಫ್ಘಾನಿಸ್ತಾನ 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಿ 66 ರನ್ ಗಳ ಅಂತರದಲ್ಲಿ ಭಾರತದ ಎದುರು ಮಂಡಿಯೂರಿತು. 74 ರನ್ ಸಿಡಿಸಿ ಭಾರತದ ಬೃಹತ್ ಮೊತ್ತಕ್ಕೆ ಕಾರಣರಾದ ರೋಹಿತ್ ಶರ್ಮಾ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಿನಿ ಕಾರ್ನರ್

# ತಾರೆಯರು ಒಗ್ಗಟ್ಟಾಗಿರೋಣ

ನಟ ಪುನೀತ್ ರಾಜ್‌ಕುಮಾರ್ ಹಠಾತ್ ನಿಧನವು ಕನ್ನಡ ಚಿತ್ರರಂಗವನ್ನು ದಿಗ್ಭ್ರಮೆಗೊಳಿಸಿದೆ. ಚಿತ್ರರಂಗದ ಎಲ್ಲ ನಟರೊಂದಿಗೆ ಸ್ನೇಹ ಬಾಂಧವ್ಯದಿಂದ ಇರುತ್ತಿದ್ದ ನಟ ನಿಧನಕ್ಕೆ ಎಲ್ಲರೂ ಕಂಬನಿ ಮಿಡಿದಿದ್ದಾರೆ. ಅಲ್ಲದೇ ಇನ್ಮುಂದೆ ಚಿತ್ರರಂಗದ ಪ್ರತಿ ನಟರು ಸ್ಟಾರ್‌ವಾರ್, ಫ್ಯಾನ್‌ವಾರ್ ಎಂಬ ವೈಮನಸ್ಸನ್ನು ಪಕ್ಕಕ್ಕಿಟ್ಟು ಒಟ್ಟಾಗಿ ಬಾಳೋಣ ಎಂಬಂತಹ ಸಂದೇಶ ಸಾರಲಾಗಿದೆ.



ಸ್ಯಾಂಡಲ್‌ವುಡ್‌ನ ಪ್ರಮುಖ ನಟರ ಭಾವಚಿತ್ರಗಳು ಒಟ್ಟಿಗೆ ಇರುವ ಫೋಟೊವೊಂದು ಟ್ವಿಟರ್‌ನಲ್ಲಿ ವೈರಲ್ ಆಗಿದೆ. "ಯುನೈಟೆಡ್ ಕೆಎಫ್‌ಐ ಕನ್ನಡ ಚಿತ್ರರಂಗ, ಯುನೈಟೆಡ್ ಕೆಎಫ್‌ಐ ಫ್ಯಾನ್ಸ್" ಎಂಬ ಸಾಲುಗಳು ಆ ಫೋಟೊದಲ್ಲಿದ್ದು, ನಾವೆಲ್ಲರೂ ಒಗ್ಗಟ್ಟಾಗಿರೋಣ ಎಂಬ ಸಂದೇಶವನ್ನು ಬಿಂಬಿಸುತ್ತಿದೆ.

ಈ ಫೋಟೊವನ್ನು ತಮ್ಮ ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ನಟ ಜಗ್ಗೇಶ್, "ಈ ಭಾವ ನನ್ನ ಕಣ್ಣಲ್ಲಿ ಆನಂದಭಾಷ್ಪ ತರಿಸಿತು. ಮಾನ್ಯರೆ ನಾವೆಲ್ಲಾ ಶಾರದೆಯ ಮಕ್ಕಳು ಚಿತ್ರರಂಗ ನಮ್ಮ ಮನೆ. ಕನ್ನಡಿಗರು ನಮ್ಮ ಬಂಧುಗಳು. ನಮ್ಮ ಈ ಒಗ್ಗಟ್ಟು ರಾಜಣ್ಣನ ಕಾಲದಲ್ಲಿ ಇತ್ತು. ಮತ್ತೆ ಬರೋದಿಲ್ಲವೆ ಎಂಬ ಕೊರಗು ಕಾಡುತ್ತಿತ್ತು. ಈಗ ಇದನ್ನ ನೋಡಿ ಹಾಲುಜೇನು ಸವಿದಂತೆ ಆಯಿತು. ಈ ಒಗ್ಗಟ್ಟಿನ ಮಂತ್ರ ಯಾವ ಅಡೆತಡೆ ಇಲ್ಲದೆ ಮುಂದುವರಿಯಲಿ. ಲವ್ ಆಲ್" ಎಂದು ಆಶಯ ವ್ಯಕ್ತಪಡಿಸಿದ್ದಾರೆ. ಚಿತ್ರರಂಗದಲ್ಲಿ ನಟರು, ಅಭಿಮಾನಿಗಳು ಪರಸ್ಪರ ವೈಮನಸ್ಸು ಸಾಧಿಸುವುದು ಸಾಮಾನ್ಯ. ಕನ್ನಡ ಚಿತ್ರರಂಗದಲ್ಲೂ ಅಂತಹ ಹಲವಾರು ಸನ್ನಿವೇಶಗಳು ನಡೆದಿವೆ. ಆಗ ಚಿತ್ರರಂಗದ ಹಿರಿಯರು ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸುತ್ತಿದ್ದ ಉದಾಹರಣೆಗಳೂ ಇವೆ. ಇತ್ತೀಚೆಗೆ ಸ್ಯಾಂಡಲ್‌ವುಡ್‌ನಲ್ಲಿ ಪ್ರತಿಭಾನ್ವಿತ ನಟರ ಸಾಲು ಸಾಲು ಸಾವುಗಳು (ಚಿರಂಜೀವಿ ಸರ್ಜಾ, ಸಂಚಾರಿ ವಿಜಯ್, ಪುನೀತ್ ರಾಜ್‌ಕುಮಾರ್) ಚಿತ್ರರಂಗದಲ್ಲಿ ಬೇಸರ ಮೂಡಿಸಿದೆ. ಇರುವಷ್ಟು ದಿನ ನಾವೆಲ್ಲ ಒಟ್ಟಾಗಿ, ಯಾವುದೇ ವಿವಾದಗಳಿಗೆ ಆಸ್ಪದ ನೀಡದೇ ಬಾಳೋಣ ಎಂಬ ಆಶಯಗಳನ್ನು ಹಿರಿಯ ನಟರು ವ್ಯಕ್ತಪಡಿಸುತ್ತಿದ್ದಾರೆ.

# ಆರ್‌ಆರ್‌ಆರ್ ಚಿತ್ರದಲ್ಲಿ ದೃಶ್ಯ ವೈಭವ



ರಾಜಮೌಳಿ ನಿರ್ದೇಶನದ ಬಹುನಿರೀಕ್ಷಿತ ಸಿನಿಮಾ 'ಆರ್ ಆರ್‌ಆರ್'ನ ವಿಡಿಯೋ ತುಣುಕೊಂದನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು 'ಬಾಹುಬಲಿ' ಸಿನಿಮಾವನ್ನೂ ಮೀರಿಸುವ ದೃಶ್ಯ ವೈಭವ 'ಆರ್‌ಆರ್‌ಆರ್'ನಲ್ಲಿದೆಯೆಂಬ ಸುಳಿವನ್ನು ವಿಡಿಯೋ ತುಣುಕು ನೀಡುತ್ತಿದೆ.

ಇದೀಗ ಬಿಡುಗಡೆ ಮಾಡಲಾಗಿರುವ ವಿಡಿಯೋ ತುಣುಕಿನಲ್ಲಿ ಆಕ್ಷನ್ ದೃಶ್ಯಗಳು ಮೈನವಿರೇಳುವಂತೆ ಇವೆ. ಕೇವಲ 45 ಸೆಕೆಂಡ್‌ನ ಈ ವಿಡಿಯೋ ತುಣುಕು ಸಿನಿಮಾದಲ್ಲಿನ ಅದ್ಭುತ ಆಕ್ಷನ್ ದೃಶ್ಯಗಳ ಕಿರು ಪರಿಚಯ ನೀಡುತ್ತಿವೆ.

ವಿಡಿಯೋದ ಆರಂಭದಲ್ಲಿಯೇ ಜೂ.ಎನ್‌ಟಿಆರ್ ಕಣ್ಣ ಮೇಲಿಂದ ನೆತ್ತರು ಜಾರಿದರೆ, ರಾಮ್ ಚರಣ್ ಕಣ್ಣ ಮುಂದೆ ಅಗ್ನಿ ನರ್ತಿಸುತ್ತದೆ. ಆ ನಂತರದ ವಿಡಿಯೋ ರೋಲರ್ ಕೋಸ್ಟರ್ ರೈಡ್. ಅದ್ಭುತ ಗ್ರಾಫಿಕ್ಸ್, ಫೈಟ್ ದೃಶ್ಯಗಳು, ಅದ್ಧೂರಿತನ, ಸಿನಿಮಾಗಳ ಪ್ರಮುಖ ಪಾತ್ರಗಳ ಝಲಕ್ ಎಲ್ಲವೂ ಈ 45 ಸೆಕೆಂಡ್‌ನ ವಿಡಿಯೋನಲ್ಲಿ ಅಡಕವಾಗಿದೆ. ಭಾರತೀಯ ಸಿನಿಮಾದ ವೈಭವವನ್ನು ಮತ್ತೆ ಮರುಕಳಿಸಲು ಸಿನಿಮಾವು ಜನವರಿ 07ಕ್ಕೆ ಚಿತ್ರಮಂದಿರಗಳಿಗೆ ಅಪ್ಪಳಿಸಲಿದೆ ಎಂದು 'ಆರ್‌ಆರ್‌ಆರ್' ಚಿತ್ರತಂಡ ವಿಡಿಯೋದ ಕೊನೆಯಲ್ಲಿ ಹೇಳಿದೆ.

# ಓಹ್ ಮೈ ಗಾಡ್-2 ಗೆ ಚಿತ್ರೀಕರಣ ಆರಂಭ



ಸೂಪರ್ ಸ್ಟಾರ್ ಅಕ್ಷಯ್ ಕುಮಾರ್ ಅವರ ಓ ಮೈ ಗಾಡ್ ಸಿನಿಮಾದ ಸೀಕ್ವೆಲ್ ಓಹ್ ಮೈ ಗಾಡ್–2 ಸಿನಿಮಾ ಚಿತ್ರೀಕರಣ ಪ್ರಾರಂಭಿಸಿರುವುದಾಗಿ ಘೋಷಿಸಿದ್ದಾರೆ.

2012 ರ ಜನಪ್ರಿಯ ಓಎಂಜಿ ಓಹ್ ಮೈ ಗಾಡ್ ಸಿನಿಮಾದ ಸೀಕ್ವೆಲ್ ಸಿನಿಮಾಗೆ ಅಮಿತ್ ರೈ ಚಿತ್ರಕಥೆ–ನಿರ್ದೇಶನ ಇರಲಿದೆ. 'ಓ ಮೈ ಗಾಡ್–2ಗೆ ನಿಮ್ಮ ಆಶೀರ್ವಾದ ಹಾಗೂ ಶುಭಾಶಗಳು ಅಗತ್ಯ. ಇದು ಪ್ರಮುಖ ಸಾಮಾಜಿಕ ವಿಷಯವನ್ನು ತೆರೆ ಮೇಲೆ ತರುವ ಪ್ರಾಮಾಣಿಕ ಹಾಗೂ ವಿನಮ್ರ ಯತ್ನವಾಗಿದೆ. ಆದಿಯೋಗಿಯ ಅಧ್ಯಾತ್ಮಿಕ ಶಕ್ತಿ ಸಿನಿಮಾ ಪ್ರಯಾಣದಾದ್ಯಂತ ಇರಲಿ" ಎಂದು ಅಕ್ಷಯ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ಇದೇ ವೇಳೆ ಸಿನಿಮಾದ ಪೋಸ್ಟರ್‌ನ್ನೂ ಅಕ್ಷಯ್ ಕುಮಾರ್ ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ. ಸಿನಿಮಾ ಪ್ರೊಡಕ್ಷನ್ ನ ಮೂಲಗಳ ಪ್ರಕಾರ ಉಜ್ಜೈನ್ ನಲ್ಲಿ ಸಿನಿಮಾ ಶೂಟಿಂಗ್ ನಡೆಯುತ್ತಿದೆ. ಸೀಕ್ವೆಲ್ ಸಿನಿಮಾದಲ್ಲಿ ಪಂಕಜ್ ತ್ರಿಪಾಠಿ, ಯಾಮಿ ಗೌತಮ್ ನಟಿಸುತ್ತಿದ್ದಾರೆ.

ಅಮಲೇಂದು ಚೌದರಿ ಸಿನಿ ಮೆಟೋಗ್ರಾಫರ್ ಆಗಿ ಕಾರ್ಯನಿರ್ವಹಣೆ ಮಾಡುತ್ತಿದ್ದರೆ, ಚಂದ್ರಪ್ರಕಾಶ್ ದ್ವಿವೇದಿ ಕ್ರಿಯೇಟೀವ್ ಪ್ರಡ್ಯೂಸರ್ ಆಗಿದ್ದಾರೆ. ಓಮೈ ಗಾಡ್–2 ನ್ನು ಕೇಪ್ ಆಫ್ ಗುಡ್ ಫಿಲ್ಮ್ಸ್ ನ ವಿಪು ಡಿ ಶಾ, ರಾಜೇಶ್ ಬಾಹ್ಲ್, ಅಶ್ವಿನ್ ವರ್ದೆ ನಿರ್ಮಾಣ ಮಾಡುತ್ತಿದ್ದಾರೆ.

# ಕ್ಷುಲ್ಲಕ ಕಾರಣಕ್ಕೆ ಕೊಲೆ

**ಸಂಜೆ ಮುಗಿಲು ನ್ಯೂಸ್ ಮಂಗಳೂರು**

ಕ್ಷುಲ್ಲಕ ಕಾರಣಕ್ಕೆ ವಾಗ್ವಾದ ನಡೆದು ಚೂರಿಯಿಂದ ಇರಿದು ಕೊಲೆ ಮಾಡಿರುವ ಘಟನೆ ಮಂಗಳೂರಿನಲ್ಲಿ ನಡೆದಿದೆ. ಮಂಗಳೂರಿನ ರಥಬೀದಿಯ ವೀರವೆಂಕಟೇಶ ಅಪಾರ್ಟ್‌ಮೆಂಟ್‌ನಲ್ಲಿ ಘಟನೆ ನಡೆದಿದ್ದು, ಮೃತ ದುರ್ದೈವಿಯನ್ನು ವಿನಾಯಕ್ ಕಾಮತ್(44) ಎಂದು ಗುರುತಿಸಲಾಗಿದೆ.



ವೀರವೆಂಕಟೇಶ ಅಪಾರ್ಟ್ ಮೆಂಟ್ ನಿವಾಸಿಗಳಾದ ಕೃಷ್ಣಾನಂದ ಕಿಣಿ ಮತ್ತು ಆತನ ಪುತ್ರ ಅವಿನಾಶ್ ಕಿಣಿಯಿಂದ ಕೃತ್ಯವೆಸಗಿದ ಆರೋಪಿಗಳಾಗಿದ್ದಾರೆ. ಸಿಮೆಂಟ್ ಹಾಕಿದ ರಸ್ತೆಯಲ್ಲಿ ಕಾರು ಚಲಾಯಿಸಿದಕ್ಕೆ ವಿನಾಯಕ್ ಕಾಮತ್ ಜೊತೆ ಕೃಷ್ಣಾನಂದ ಕಿಣಿ ಮತ್ತು ಆತನ ಪುತ್ರ ಅವಿನಾಶ್ ಕಿಣಿ ಜಗಳವಾಡಿದ್ದಾರೆ. ಹೀಗೆ ಮಾತು ಅತಿರೇಕಗೊಂಡು ಕೋಪಕ್ಕೆ ತಿರುಗಿ ಆರೋಪಿಗಳು ವಿನಾಯಕ್ ಕಾಮತ್‌ಗೆ ಚಾಕುವಿನಿಂದ ಇರಿದಿದ್ದಾರೆ. ನಂತರ ಚಿಕಿತ್ಸೆ ಫಲಕಾರಿಯಾಗದೇ ವಿನಾಯಕ್ ಕಾಮತ್ ಕೊನೆಯುಸಿರೆಳೆದಿದ್ದಾರೆ.

ಅಲ್ಲದೇ ಆರೋಪಿಗಳು ಕೃತ್ಯ ಎಸಗಿದ ದೃಶ್ಯ ಫ್ಲಾಟ್‌ನ ಸಿಸಿ ಕ್ಯಾಮಾರದಲ್ಲಿ ಸೆರೆಯಾಗಿದೆ. ಇದೀಗ ಈ ಘಟನೆಗೆ ಸಂಬಂಧಿಸಿದಂತೆ ಮಂಗಳೂರಿನ ಬಂದರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.




Printed, Published & Owned by Dr.N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: Dr.N.Venugopal Krishna, Mobile No.+91 94835 89085, email: sanjemugilu@gmail.com